ಅಧ್ಯಕ್ಷರು: ನೋಡ್ರೀ, ಈಗ ನೋಟಿಸ್ ಕೊಟ್ಟಿದ್ದೀರಿ. ಆಗುವುದಿಲ್ಲ. ಬೆಳಗ್ಗೆ ಕೊಟ್ಟಿದ್ದರೆ ನೋಡಬಹುದಾಗಿತ್ತು.

ಶ್ರೀ ಗೋವಿಂದ ಎಂ ಕಾರಜೋಳ: ಸರ್, ಅದು ಬಹಳ important issue ಇದಕ್ಕೆ ಅವಕಾಶ ಮಾಡಿಕೊಡಿ ಸರ್.

ಅಧ್ಯಕ್ಷರು: ನಾಳೆ ಕೊಡೋಣ.

7. 2014–15ನೇ ಸಾಲಿನ ಅನುದಾನ ಬೇಡಿಕೆಯ ಮೇಲೆ ಚರ್ಚೆ :

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ): ಮಾನ್ಯ ಸಭಾಧ್ಯಕ್ಷರೆ, ಕೃಷಿ ಸಚಿವರು ಬಜೆಟ್ ಮೇಲೆ ತಮಗೆ ಕೊಟ್ಟಿರುವ Provision demand ಅನ್ನು ನಮ್ಮ ಸದನದ ಮುಂದೆ ಈಗಾಗಲೇ ಅಧಿಕೃತವಾಗಿ ಇಟ್ಟಿದ್ದಾರೆ. ಇದರ ಮೇಲೆ ವ್ಯಾಪಕವಾಗಿ ಚರ್ಚೆ ಮಾಡಲು ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಮೊಟ್ಟಮೊದಲನೆಯಿಂದಾಗಿ ಬಹಳ ವರ್ಷಗಳ ನಂತರ ವಿವಿಧ ಇಲಾಖೆಗಳ ಬಜೆಟ್ ಮೇಲೆ, demand ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದೊಂದು ರೀತಿ ದಾಖಲೆಯೇ.. ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ನನಗೆ ಖುಷಿಯಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಮ್ಮ ಕಾಲದಲ್ಲೇನಿತ್ತು. ಅದನ್ನು ಪುನರುಕ್ತಿ ತರುವಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಸದನದ ಗೌರವ ಕೂಡ ಹೆಚ್ಚಾಗಿದೆ. ಸರ್ಕಾರಕ್ಕೆ ಒಂದು ರೀತಿಯಲ್ಲಿ ಈ ಬಜೆಟ್ ಅನ್ನು ಇಡೀ ವರ್ಷ ಯಾವ ರೀತಿ ನಿರ್ವಹಣೆ ಮಾಡಬಹುದು ಎನ್ನುವ ಬಗ್ಗೆ ಉಪಯುಕ್ತವಾದ ಸಲಹೆಗಳು ಕೂಡ ಈ ಸದನದ ಎರಡೂ ಕಡೆಗಳಿಂದ ಹೊರಹೊಮ್ಮುತ್ತವೆ ಎನ್ನುವ ಆಶಾಭಾವನೆಯನ್ನು ಕೂಡ ನಾನು ವ್ಯಕ್ತಪಡಿಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವಂತೆ, ಕೃಷಿ ಅತ್ಯಂತ ಮಹತ್ವದ ಒಂದು ವಿಚಾರ, ವಿಷಯ, ವಸ್ತುಸ್ಥಿತಿ, ಆಹಾರ ಎಲ್ಲವೂ ಕೂಡ ಆಗಿದೆ. ಕೃಷಿ ಬಗ್ಗೆ ಬಹಳಷ್ಟು ಚರ್ಚೆಗಳು ಕೂಡ ಆಗಿವೆ. ಕೇಂದ್ರದಲ್ಲಿ, ರಾಜ್ಯದಲ್ಲಿ ಬಹಳಷ್ಟು ಆಯೋಗಗಳೂ ಕೂಡ ರಚನೆಯಾಗಿವೆ. ಇದು ನಮ್ಮ ದೇಶದ ಬದುಕಿನ ಬೆನ್ನೆಲಬು. ನಮ್ಮ ಆರ್ಥಿಕ ಬೆನ್ನೆಲುಬು ಕೂಡ.

ಕೃಷಿಯಲ್ಲಿ 1% growth ಆದರೆ, GDPಯಲ್ಲಿ 4% growth add ಆಗುತ್ತದೆ. ಕೃಷಿಯಲ್ಲಿ 1% growth ಆದರೆ, ಉದ್ಯೋಗಕ್ಕೆ 10% growth add ಆಗುತ್ತದೆ. ಆದ್ದರಿಂದ, ಕೇಂದ್ರ ಮತ್ತು ರಾಜ್ಯ ಸರ್ಕಾರ ತಮ್ಮ GDP ಯನ್ನು ಹೆಚ್ಚಿಸಿಕೊಳ್ಳಬೇಕಾದರೆ GSDP ಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಕೃಷಿ ಬಗ್ಗೆ ಬಹಳಷ್ಟು ಒತ್ತನ್ನು ಕೊಟ್ಟು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿರುತ್ತಾರೆ. ಆದಾಗ್ಯೂ ಕೂಡ ಹಲವಾರು ಸಮಸ್ಯೆಗಳು ಕೃಷಿಯನ್ನು ಹಲವಾರು ದಶಕಗಳಿಂದ ಏನು ಕಾಡುತ್ತಿದೆ, ಅವುಗಳಿಗೆ ಸೂಕ್ತವಾದ ಪರಿಹಾರವನ್ನು ಹುಡುಕಿಕೊಳ್ಳುವುದಕ್ಕೆ ಸಾದ್ಯವಾಗಿಲ್ಲ. ಇದಕ್ಕೆ ನಾನಾ ಕಾರಣಗಳಿರಬಹುದು. ಬದಲಾಗುತ್ತಿರುವಂಥ ಹವಾಮಾನ, Climatic conditions ಇರಬಹುದು, ಕೃಷಿಯಲ್ಲಿ ಬಂಥಂಥ ಹೊಸ ಸಂಶೋಧನೆ ಕೂಡ ಹಲವಾರು ಬದಲಾವಣೆಗಳನ್ನು ತಂದಿರುವುದನ್ನು ನಾವು ನೋಡಿದ್ದೇವೆ. ಒಂದು ಕಾಲದಲ್ಲಿ ಸ್ವಾತಂತ್ರ್ಯ ಬಂದಾಗ ಸುಮಾರು 20–22 ಕೋಟಿ ಜನಸಂಖ್ಯೆಗೆ ಆಹಾರವನ್ನು ಕೊಡುವಂಥದ್ದು ಕಷ್ಟವೆನ್ನುವ ಕಾಲದಲ್ಲಿ ಇಡೀ ದೇಶವೇ green revolution ಅನ್ನು ನೋಡಿದೆ. ಇವತ್ತು 125 ಕೋಟಿ ಜನಸಂಖ್ಯೆಗೆ ಆಹಾರ ಕೊಡುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ. ಇದು ನಮ್ಮ ಕೃಷಿ ವಲಯದಲ್ಲಿ ಆಗಿರುವ ಬೆಳವಣಿಗೆ, ಇದನ್ನು ನಾವು ಗಮನಿಸಬೇಕಾಗುತ್ತದೆ. ಗುರುತಿಸಿಕೊಡಬೇಕಾಗುತ್ತದೆ. ಎಲ್ಲವನ್ನೂ ನಾವು ನಕಾರಾತ್ಮಕವಾಗಿ ನೋಡುವುದಕ್ಕೆ ಸಾಧ್ಯವಿಲ್ಲ. ಆದರೆ, ಸ್ವಲ್ಪ ವಿಪರ್ಯಾಸ (paradoxical) ವೆಂದರೆ, ಇಷ್ಟು ದೊಡ್ಡ ಪ್ರಮಾಣದ ಆಹಾರವನ್ನು ಉತ್ಪಾದನೆ ಮಾಡಿರುವಂಥ ಆ ಕೃಷಿಕನ ಜೀವನ ಗುಣಮಟ್ಟ ಏನಿದೆ, 50 ವರ್ಷಗಳಲ್ಲಿ ಯಾವ ರೀತಿ ಚಿಂತಾಜನಕವಾಗಿತ್ತೋ, ಅದೇ ರೀತಿ ಇದೆ. ಕೃಷಿ ಬೆಳೆದಿದೆ, ಕೃಷಿ ಉತ್ಪನ್ನಗಳು ಬೆಳೆದಿವೆ, ಉತ್ಪಾದನೆ ಬೆಳೆದಿದೆ. ಆದರೆ, ಆ ಕೃಷಿಕನ ಬದುಕು ಮಾತ್ರ ದುಸ್ತರವಾಗಿದೆ. ಇವತ್ತು ಕೃಷಿಯ ಬೆಳವಣಿಗೆಯ ಜೊತೆಗೆ ಆ ಕೃಷಿಕನ ಬದುಕನ್ನೂ ಕೂಡ ಗಟ್ಟಿಗೊಳಿಸುವಂಥ ಕಾರ್ಯಕ್ರಮಗಳನ್ನು ರೂಪಿಸುವುದು ನಮ್ಮ ನಿಮ್ಮೆಲ್ಲರ, ಈ ಸದನದ ಒಂದು ಗುರುತರವಾದ ಜವಾಬ್ದಾರಿ ಎಂದು ನಾನು ಭಾವಿಸುತ್ತೇನೆ. ಪದೇ ಪದೇ ನಾವು ಒಬ್ಬ ಕೃಷಿಕನಿಂದ ಒಂದು ಪ್ರಶ್ನೆಯನ್ನು ಕೇಳುತ್ತೇವೆ. ಅವನ ಬೆವರಿಗೆ ಏನು ಬೆಲೆ ಎನ್ನುವಂಥ ಮಾತನ್ನು ಕೇಳುತ್ತೇವೆ. ರವೀಂದ್ರನಾಥ ಟಾಗೂರ್ ರವರು ಹೇಳಿರುವಂತಹ ಒಂದು ಮಾತನ್ನು ನಾನು

ನೆನಪು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಒಬ್ಬ ಅವರ ಬುದ್ಧಿವಂತಿಕೆಯನ್ನು ಪರೀಕ್ಷೆ ಮಾಡಲು ಮೇಧಾವಿ ರವೀಂದ್ರನಾಥ ಟಾಗೂರ್‌ರವರಿಗೆ, ದೇವರೆಲ್ಲಿದ್ದಾನೆಂದು ಥಟ್ ಎಂದು ಹೇಳಿ ಎಂದ, ದೇವರೆಲ್ಲಿದ್ದಾನೆಂದು ಕೂಡಲೇ ಹೇಳಬೇಕೆಂದು ಹೇಳಿದ, ಆಗ ರವೀಂದ್ರನಾಥ ಟಾಗೂರ್ ರವರು, ದೇವರು ಕೂಲಿಕಾರರ ಶ್ರಮದಲ್ಲಿದ್ದಾನೆ. ರೈತರ ಬೆವರಿನಲ್ಲಿದ್ದಾನೆ ಎಂದರು. ಇದೊಂದು ಅತ್ಯಂತ ಉನ್ನತ ಮಟ್ಟದ ವಿಚಾರ ಅಂಥ ದೊಡ್ಡ ವ್ಯಕ್ತಿಯ ಮನಸ್ಸಿನಲ್ಲಿತ್ತು. ಆ ಉದಾತ್ತವಾದ ವಿಚಾರವನ್ನು ನಾವು ನಮ್ಮ ಬದುಕಿಗೆ, ನಮ್ಮ ವ್ಯವಸ್ಥೆಗೆ, ನಮ್ಮ ಸರ್ಕಾರದಲ್ಲಿ, ನಮ್ಮ ಸರ್ಕಾರೇತರರಲ್ಲಿ ಅಳವಡಿಸಿದರೆ ಅವನ ಬೆವರಿಗೆ ಬೆಲೆಯನ್ನು ಕೊಡುವುದಕ್ಕೆ ಸಾಧ್ಯ ಎನ್ನುವ ಮಾತಿನಿಂದ ನಾನು ಪ್ರಾರಂಭ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಕೃಷಿ ವಲಯಕ್ಕೆ State Sector ನಲ್ಲಿ ನಮ್ಮ ಆಯವ್ಯಯದಲ್ಲಿ ಸುಮಾರು 10% ಇಟ್ಟಿದ್ದಾರೆ. ಒಟ್ಟಾರೆಯಾಗಿ ಕೃಷಿ ಮತ್ತು ತೋಟಗಾರಿಕೆಗೆ 5,397 ಕೋಟಿ ರೂ.ಗಳನ್ನು ಹಣಕಾಸು ಸಚಿವರೂ ಆಗಿರುವ ಮಾನ್ಯ ಮುಖ್ಯಮಂತ್ರಿಯವರು ಒದಗಿಸಿಕೊಟ್ಟಿದ್ದಾರೆ. ಅದರಲ್ಲಿ ಕೃಷಿ ವಲಯಕ್ಕೆ ಸುಮಾರು 3800 ಕೋಟಿ ರೂ.ಗಳಷ್ಟನ್ನು, ಹಣವನ್ನು ನಿಗದಿ ಮಾಡಿದ್ದಾರೆ. ಪ್ರಶ್ನೆ ಏನೆಂದರೆ, ಪ್ರತಿ ವರ್ಷ ನಾವು ಗುರಿಯನ್ನು ಇಟ್ಟುಕೊಂಡಿರುತ್ತೇವೆ. ಆ ಗುರಿಗೂ, ಕೃಷಿ ಇಲಾಖೆಯ ಚಟುವಟಿಕೆಗೂ ಯಾವ ರೀತಿಯ ಸಂಬಂಧವಿದೆ ? ಆ ಗುರಿಗೂ ಮತ್ತು ಕೃಷಿ ವಲಯಕ್ಕೆ ಇಟ್ಟಿರುವ ಹಣಕ್ಕೆ ಯಾವ ರೀತಿಯ ಸಂಬಂಧವಿದೆ ? ಇಟ್ಟ ಹಣ ಎಲ್ಲವೂ ಕೂಡ Productivity ಗೆ, Production ಗೆ ನೇರವಾಗಿ ಪೂರಕವಾಗಿದೆಯೋ, ಇಲ್ಲವೋ ಎನ್ನುವಂಥ ಸೂಕ್ಷ್ಮತೆಯಿಂದ ನೋಡುವಂಥ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಪ್ರತಿ ವರ್ಷ inflation ಜಾಸ್ತಿಯಾಗುತ್ತದೆ. ಅದರಿಂದ ಹಣದುಬ್ಬರ ಜಾಸ್ತಿಯಾದಾಗ 10–20% ಬಜೆಟ್‌ನಲ್ಲಿ natural allocation ಜಾಸ್ತಿಯಾಗುತ್ತದೆ. ಆ ಸಂದರ್ಭದಲ್ಲಿ ನಾವು ಕೃಷಿ ವಲಯಕ್ಕೆ ಕಳೆದ ಬಾರಿಗೆ ಹೋಲಿಕೆ ಮಾಡಿದಾಗ 10–20 % ಜಾಸ್ತಿ ಕೊಟಿದ್ದೇವೆ ಎನ್ನುವ ವಾದ treasury bench ನಿಂದ ಬರುವುದನ್ನು ನಾವು ನೋಡುತ್ತೇವೆ. ಅದು ಯಾರೇ ಇರಬಹುದು. ಆದರೆ, ಪ್ರಶ್ನೆ ಏನೆಂದರೆ, ಎಷ್ಟು inflation ಆಗಿದೆ, ಆ inflation ನಲ್ಲಿ ಎಷ್ಟು cover ಆಗಿದೆ, ಬೀಜ, ಗೊಬ್ಬರದ ಬೆಲೆ ಏನಿತ್ತು, pesticide ಬೆಲೆ ಏನಿತ್ತು ? labour

ಖರ್ಚೇನಿತ್ತು ಎನ್ನುವುದು ಒಂದು ಕಡೆ. ಎಷ್ಟು ಕ್ರಿಯಾತ್ಮಕವಾಗಿ ಆ ಹಣ ಉಪಯೋಗವಾಗಿದೆ, ನಿಮ್ಮ ಕಾರ್ಯಕ್ರಮಗಳ ಯಶಸ್ಸು ಮಾಡುವುದಕ್ಕೆ ಏನು ಮಾನದಂಡವಿದೆ ? ಕೃಷಿ ಇಲಾಖೆಯ ಕಾರ್ಯಕ್ರಮಗಳ ಯಶಸ್ಸು, ಅಪಯಶಸ್ಸು ಮಾಡುವುದಕ್ಕೆ ಏನು ಮಾನದಂಡವಿದೆ ? ಉದಾಹರಣೆಗೆ, ಮಾನ್ಸೂನ್ ಚೆನ್ನಾಗಿದ್ದಾಗ ಖಂಡಿತವಾಗಿಯೂ ನಮ್ಮ ಟಾರ್ಗೆಟ್ ಮುಟ್ಟಿದ್ದೇವೆ. ಯಾವಾಗ ಮಾನ್ಸೂನ್ ಚೆನ್ನಾಗಿಲ್ಲ ಆಗ ಟಾರ್ಗೆಟ್ ಮುಟ್ಟಿಲ್ಲ. ಅದರರ್ಥವೇನು ? ಕೃಷಿ ಇಲಾಖೆ ಯಾವ ರೀತಿ ಕೆಲಸ ಮಾಡಿದರೂ ಕೂಡ ರೈತನು ತನ್ನ ಹೊಟ್ಟೆಪಾಡಿಗಾಗಿ, ತನ್ನ ಜೀವನಕ್ಕಾಗಿ ಅವನು ಬೆಳೆಯಲೇಬೇಕು. ಬೇರೆ ದಾರಿ ಇಲ್ಲ. ಅವನು ಬೆಳೆ ಬೆಳೆಯುತ್ತಾನೆ. ಒಳ್ಳೆಯ ಮಳೆ ಬಂದಾಗ ಒಳ್ಳೆಯ ಬೆಳೆ ಬರುತ್ತದೆ, ಉತ್ಪಾದನೆಯಾಗುತ್ತದೆ. ಆದ್ದರಿಂದ, ಕೃಷಿ ಇಲಾಖೆ ಮುಂದಿರುವ ಸವಾಲುಗಳು ಎಂದರೆ, ನಮಗೆ ಒಳ್ಳೆಯ ಮಾನ್ಸೂನ್ ಬಂದಾಗ ನಮ್ಮ ಉತ್ಪಾದನೆ ಅತಿ ಅಧಿಕವಾಗಬೇಕು, ಮಾನ್ಸೂನ್ ಕಡಿಮೆಯಾದಾಗಲೂ ಕೂಡ ಪರ್ಯಾಯವಾಗಿರುವ ವ್ಯವಸ್ಥೆಯನ್ನು, ಏನೆಲ್ಲವನ್ನು ಕೂಡ ನಾವು ಮಾಡಬಹುದು? In the adverse condition, difficult condition ನಲ್ಲಿ ನಾವು ಯಾವ ರೀತಿ ಕೃಷಿಯನ್ನು ಉಳಿಸಬಹುದು sustainable agriculture ಎಂದೇನು ನಾವು ಕರೆಯುತ್ತೇವೆ. ಆ sustainable agriculture ಅನ್ನು ಯಾವ ರೀತಿ ಮಾಡಬಹುದು ಎನ್ನುವಂಥ ಸವಾಲು ಇವತ್ತು ಕೃಷಿ ಇಲಾಖೆಯ ಮುಂದಿರಬೇಕಾಗುತ್ತದೆ. ಆದರೆ, ಏನಾಗಿದೆ ಎಂದರೆ, ಯಥಾರ್ಥವಾಗಿ ಕೆಲವು ಕಾರ್ಯಕ್ರಮಗಳ ಬಗ್ಗೆ ನಮ್ಮ ಘೋಷಣೆ, ಅವುಗಳ ಅರ್ಧಂಬರ್ಧ ಅನುಷ್ಠಾನ, ಅದರ ಬಗ್ಗೆ ಯಾವುದೇ ರೀತಿಯ audit ಇಲ್ಲ. Audit ಎಂದರೆ CAG, AG ಎಂದು ಹೇಳುವುದಿಲ್ಲ. ಹಣಕಾಸಿನ audit ಇಲ್ಲ. ಆ ಹಣ ಖರ್ಚಾಗಿರುವಂಥ productivity ಬಗ್ಗೆ audit. ಅದರ ಉತ್ಪಾದನೆ ಬಗ್ಗೆ audit ಅದನ್ನು ಮಾಡಿದಾಗ ಮಾತ್ರ ನಮ್ಮ ಕಾರ್ಯಕ್ರಮಗಳು ಸರಿ ಇದೆಯೋ, ಇಲ್ಲವೋ? ನಾವು ತೊಡಗಿಸಿರುವ ಹಣ ಸರಿಯಾದ ದಿಕ್ಕಿನಲ್ಲಿ ಇದೆಯೋ, ಇಲ್ಲವೋ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಬಾರಿ ಮಾನ್ಸೂನ್ ತಡವಾಗಿರುವುದು ನಮಗೆಲ್ಲರಿಗೂ ಗೊತ್ತಿದೆ ಮತ್ತು 50% ಗಿಂತ ಹೆಚ್ಚು ಕಡಿಮೆಯಾಗುವ ಸಾಧ್ಯತೆಗಳಿವೆ. ಕೆಲವು ಕಡೆ ಬಿತ್ತನೆಯಾಗಿದೆ. ಕೆಲವು ಕಡೆ ಆಗಿಲ್ಲ.

ಇಂಥ ಸಂದರ್ಭದಲ್ಲಿ ನಮ್ಮ ಕೃಷಿ ಇಲಾಖೆಯ ಮಾರ್ಗದರ್ಶನ ಇನ್ನೂ ಬರುತ್ತಿಲ್ಲ ಯಾವಾಗಲೂ ನಮ್ಮ ಕೃಷಿ ಇಲಾಖೆ ಸ್ವಲ್ಪ ನಿಧಾನ. ಈ ವಾರ ಮಳೆ ಬರುತ್ತದೆ, ಮುಂದಿನ ವಾರ ಮಳೆ ಬರುತ್ತದೆ, ಆಗಿಯೇ ಆಗುತ್ತದೆ ಎನ್ನುವ ಬಹಳ ದೊಡ್ಡ ನಿರೀಕ್ಷೆಯಲ್ಲಿ ನಾವಿರುತ್ತೇವೆ. ಸಹಜವಾಗಿ ಆ ರೀತಿ ಇರಬೇಕಾಗುತ್ತದೆ. ಆದರೆ, ಮಳೆ ಬರದಿದ್ದರೆ alternative cropping system ಏನಿದೆ, ನಾವೆಲ್ಲ ಏನು ಮಾಡಬಹುದು? ಅದಕ್ಕೇನು ತಯಾರಿ ಮಾಡಿದ್ದೀರಿ? ಬೀಜ, ಗೊಬ್ಬರಕ್ಕೆ ಏನು ತಯಾರಿ ಮಾಡಿಕೊಂಡಿದ್ದೀರಿ? ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಮತ್ತು ಅದಕ್ಕೆ ಬೇಕಾಗಿರುವಂಥ ವೆಚ್ಚಕ್ಕೆ ಅದಕ್ಕೆ ನಿಮ್ಮ ಹತ್ತಿರ ಯಾವಾಗಲೂ ಕೂಡ contingency fund ಇರಬೇಕಾಗುತ್ತದೆ. ಈಗ ಏನಾಗಿದೆ ಎಂದರೆ drought and flood management ಮಾಡುವಂಥದ್ದು revenue ಇಲಾಖೆಯ ಮುಖ್ಯಸ್ಥರಿಂದ ಆಗುತ್ತದೆ. ಆದರೆ, ನಿಜವಾಗಿಯೂ effect ಆಗಿರುವಂಥದ್ದು ಹಳ್ಳಿಗಳಲ್ಲಿ ಮತ್ತು ವಿಶೇಷವಾಗಿ ರೈತಾಪಿ ವರ್ಗಕ್ಕೆ ಕೃಷಿ ಇಲಾಖೆಯನ್ನು ನಾವು ಹೊರಗಿಟ್ಟು drought manage ಮಾಡುವಂಥ ಪರಿಸ್ಥಿತಿ ಇವತ್ತು ಇದೆ. ಕೃಷಿ ಇಲಾಖೆಯನ್ನು ಒಳಗೊಂಡಿರುವಂಥ ಬರ ನಿರ್ವಹಣೆ ಬಹಳ ಮುಖ್ಯ. ಅದಕ್ಕೇನು ಮಾಡುತ್ತೇವೆ? ಎಲ್ಲ ಮುಗಿದಮೇಲೆ crop cutting experiment ಮಾಡಿ, crop loss ಎಂದು ಮಾಡಿ ಓಬಿರಾಯನ ಕಾಲದ compensation ಕೊಟ್ಟ ಹಾಗೆ ಮಾಡಿ ಆ ವರ್ಷ ದಾಟಿಸಿಬಿಡುತ್ತೇವೆ ಆದರೆ, ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಆ ರೈತ ಕಷ್ಟದಲ್ಲಿದ್ದಾನೆ, ತೊಂದರೆಯಲ್ಲಿದ್ದಾನೆ. ಅವನಿಗೆ ಒಂದು ವರ್ಷ ಲುಕ್ಸಾನಾಗಬಹುದು. ಆದರೆ, ಇಡೀ ದೇಶದ ಉತ್ಪಾದನೆಗೆ, ಇಡೀ ದೇಶದ ಆರ್ಥಿಕ ಸ್ಥಿತಿಗೆ ಬಹಳ ದೊಡ್ಡ ಕೊಡಲಿಪೆಟ್ಟು ಬಿದ್ದಿರುತ್ತದೆ. ಅದು ಕೇವಲ ಆ ರೈತರಿಗೆ ಸೀಮಿತವಾಗಿರುವುದಿಲ್ಲ. ಆದ್ದರಿಂದ, ಈ drought management ಕೂಡ agriculture ಅನ್ನು ಪ್ರಧಾನವಾಗಿಟ್ಟುಕೊಂಡು ಮಾಡುವಂಥ ಹೊಸ ಚಿಂತನೆ ಇವತ್ತು ಈ ರಾಜ್ಯದಿಂದ ಪ್ರಾರಂಭವಾಗಬೇಕು ಎನ್ನುವ ಒಂದು ಸಲಹೆಯನ್ನು ಸಂದರ್ಭದಲ್ಲಿ ಕೊಡುತ್ತೇನೆ. ನಮ್ಮ ರಾಜ್ಯದಲ್ಲಿ 10 agroclimatic conditions ಇದೆ. 10 ವಿವಿಧ ಕೃಷಿಯ ಹವಾಮಾನ ಆಧಾರಿತವಾದ ಕೃಷಿ ಚಟುಟಿಕೆಗಳನ್ನು ನಾವು ಮಾಡುತ್ತೇವೆ. ಇದು

ಮೊದಲಿನಿಂದಲೂ ಬಂದಿದೆ. ಆದರೆ, ಇತೀಚೆಗೆ ನಮ್ಮ ಕೃಷಿ planning ನಲ್ಲಿ district planning ಎನ್ನುವಂಥ ಹೊಸ ವಿಚಾರ ಬಂತು. ಈ district planning and agro-climate condition ಇದೇನಿದೆ, ಇದು synchronize ಆಗಿಲ್ಲ. ಎಲ್ಲಿ ಯಾವ ವಲಯಗಳಲ್ಲಿ ನಾವು ಆಹಾರ ಧಾನ್ಯ ಬೆಳೆಯಬೇಕು, ದ್ವಿದಳ ಧಾನ್ಯ ಬೆಳೆಯಬೇಕು, long term crop ಆದ cotton ಅನ್ನು ಯಾವಾಗ, ಎಲ್ಲೆಲ್ಲಿ ಬೆಳೆಯಬೇಕು, ಅವೆಲ್ಲವೂ ಕೂಡ scientific ಆಗಿ ಮೊದಲು ಇತ್ತು. District planning ಬಂದ ಮೇಲೆ District planning ಗೆ ಅನುಗುಣವಾಗಿ ನೀವು state planning ಮಾಡುತ್ತೀರಿ, state planning ಗೆ ಅನುಗುಣವಾಗಿ ಹಣಕಾಸನ್ನು ವೆಚ್ಚ ಮಾಡುತ್ತೀರಿ. ಸರಿಯಾದಂಥ ವಲಯಕ್ಕೆ ಸರಿಯಾದ ಸಮಯದಲ್ಲಿ ಸರಿಯಾದ ಪ್ರಮಾಣದ ಒಂದು extension ಆಗಲಿ ಅಥವಾ agriculture activity ಯ programme ಗಳನ್ನು ಕೊಟ್ಟು ಸರಿಯಾದ ರೀತಿಯಲ್ಲಿ ಹಣಕಾಸನ್ನು ಕೊಟ್ಟಾಗ ಮಾತ್ರ ಆ ಕೃಷಿ ಚಟುವಟಿಕೆಗೆ ಇಂಬು ಬರುತ್ತದೆ. ಇಲ್ಲದಿದ್ದರೆ ಇಂಬು ಬರುವುದಿಲ್ಲ. ಇದರ ಬಗ್ಗೆ ತಾವು ಏನು ಚಿಂತನೆ ಮಾಡಿದ್ದೀರಿ? ಈ ಜಿಲ್ಲಾ ಪ್ಲಾನಿಂಗ್ ಮತ್ತು Agro-climatic planning ಏನು overlap ಆಗುತ್ತಿದೆ ಅದನ್ನು synchronize ಮಾಡುವುದಕ್ಕೆ, ಹೊಂದಾಣಿಕೆ ಮಾಡುವುದಕ್ಕೆ ಕೃಷಿ ಇಲಾಖೆ ಏನಾದರೂ ಚಿಂತನೆ ಮಾಡಿದೆಯೇ ? ಈ ಬಗ್ಗೆ ತೆಗೆದುಕೊಂಡಿರುವಂಥ ಕ್ರಮಗಳೇನು ? ಅಲ್ಲಿ ಎಲ್ಲಿಯೂ ಕೂಡ gap ಆಗಬಾರದು. ಅದರ ಬಗ್ಗೆ ತಮ್ಮ ಚಿಂತನೆ ಏನಿದೆ ? ಈ ಆಧಾರದ ಮೇಲೆ ನಾವು ಬೆಳೆಗಳನ್ನಷ್ಟೇ ಅಲ್ಲ ಬೆಳೆಗಳ pattern ಏನಿದೆ? cropping pattern ಏನಿದೆ ಅದನ್ನೂ ಕೂಡ decide ಮಾಡಬೇಕು. ಪೂರ್ವಭಾವಿ planning ಅನ್ನು ಕೃಷಿ ಇಲಾಖೆ ಬಹಳ ದೊಡ್ಡ ಮಟ್ಟದಲ್ಲಿ ಮಾಡಬೇಕಾಗುತ್ತದೆ. ಆದರೆ ದುರ್ದೈವದಿಂದ ಇದನ್ನು ಕೃಷಿ ಇಲಾಖೆ ಮಾಡುತ್ತಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದಾಗಿ ಬೀಜ, ಗೊಬ್ಬರ, ಇವುಗಳ ಬಗ್ಗೆ ಪ್ರತಿ ವರ್ಷ ನಾವು ಹಲವಾರು ಗೊಂದಲಗಳನ್ನು ನೋಡುತ್ತೇವೆ. ಬೀಜ ಸರಿಯಾದ ಪ್ರಮಾಣದಲ್ಲಿ ಇದೆಯೋ, ಇಲ್ಲವೋ? ಇದೆ. ಗೊಬ್ಬರ ಇದೆಯೇ ? ಇದೆ. ಆದರೆ ಇವತ್ತು ಅದರ ನಿರ್ವಹಣೆಯಲ್ಲಿ

ಬಹಳಷ್ಟು ಗೊಂದಲವನ್ನು ನೋಡುತ್ತೇವೆ. ಇದು ಪೂರ್ಣ ಸರ್ಕಾರದ ಕೈಯಲ್ಲೂ ಇಲ್ಲ, ಪೂರ್ತಿ ಪ್ರೈವೇಟ್‌ನವರ ಕೈಯಲ್ಲೂ ಇಲ್ಲ. ಯಾವಾಗ emergency ಬರುತ್ತದೆ ಆಗ ಸರ್ಕಾರ ತನ್ನ ಕೈಗೆ ತೆಗೆದುಕೊಳ್ಳುವುದಕ್ಕೆ ಹೋಗುತ್ತದೆ. ಇದಕ್ಕೆ infrastructure ಇಲ್ಲ. Co- operative Federation ಮುಖಾಂತರ ಏನೋ ಸಾಲ ಕೊಟ್ಟ ಹಾಗೆ ಮಾಡಿ, ಖರೀದಿ ಮಾಡಿ, ಆ ಸಂದರ್ಭದಲ್ಲಿ ಬಿಕ್ಕಟ್ಟನ್ನು ಶಮನ ಮಾಡುವುದಕ್ಕೆ ಹೋಗುತ್ತೇವೆ. ಪ್ರತಿ ವರ್ಷ ನಮಗೆ ಬೀಜ, ಗೊಬ್ಬರ ಎಷ್ಟು ಬೇಕೆಂದು ಗೊತ್ತಿರುತ್ತದೆ. ಪ್ರತಿ ವರ್ಷ ನಾವೇಕೆ ಬೀಜ ಬೇಕೆಂದು Fighting ಮಾಡಬೇಕು? ಇದಕ್ಕೆ ಸಮಗ್ರವಾದಂಥ planning ಮಾಡಲು ಏಕೆ ಸಾಧ್ಯವಾಗಿಲ್ಲ? ಇದನ್ನು ಮಾಡುವುದಕ್ಕೆ ಸಾಧ್ಯವಿದೆ. ಬೇರೆ ಬೇರೆ ವಲಯಗಳ ಜನರನ್ನು ಇದಕ್ಕೆ ಜೋಡಿಸಿಕೊಂಡರೆ ಇದನ್ನು ಮಾಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಿದೆ. ಪ್ರೈವೇಟ್ ನವರನ್ನೂ ಜೋಡಿಸಿಕೊಳ್ಳಬೇಕು. ಸರ್ಕಾರದ ವಲಯಗಳನ್ನು ಸೇರಿಸಿಕೊಳ್ಳಬೇಕು. Co-operative society ಗಳನ್ನು ಇದಕ್ಕೆ ದೊಡ್ಡ ಪ್ರಮಾಣದಲ್ಲಿ ನಾವು ಉಪಯೊಗ ಮಾಡಿಕೊಳ್ಳಬೇಕು. ಅದನ್ನು ಮಾಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಿದೆ. ಇದು ಏಕೆ ಆಗುತ್ತಿಲ್ಲವೆಂದರೆ, ನೀವು ಸರಿಯಾದ quality ಮತ್ತು ಸರಿಯಾದ ಸಂದರ್ಭದಲ್ಲಿ ಬೀಜ, ಗೊಬ್ಬರ ಕೊಡದಿದ್ದರೆ, ಮಳೆ ಬಂದರೇನು, ಬಿಟ್ಟರೇನು ? ಇದು ಬಹಳ ಮುಖ್ಯವಾಗಿರುವಂಥದ್ದು. ಇದರ ಬಗ್ಗೆ ಯಾವುದೇ ರೀತಿಯ specific ಆಗಿ ಕಾರ್ಯಕ್ರಮಗಳಿಲ್ಲ ಎನ್ನುವ ಮಾತನ್ನು ಎತ್ತಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಲವಾರು ವರ್ಷಗಳಿಂದ ನಾವು ಈ Extention Programme ಬಗ್ಗೆ ಕೇಳುತ್ತಿದ್ದೇವೆ. ಕೃಷಿ ಸಚಿವರೇ ಈ ಕೃಷಿ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಹೇಳಬೇಕು. ನನ್ನ ಪ್ರಕಾರ ನಾಲ್ಕೈದು ಸಾವಿರ ಹುದ್ದೆಗಳು ಖಾಲಿ ಇವೆ, ಇಷ್ಟೊಂದು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ಅವರು ಯಾವ ರೀತಿ ಕೃಷಿ ಇಲಾಖೆಯನ್ನು ನಡೆಸುತ್ತಿದ್ದಾರೆ ಎಂಬುದೇ ಒಂದು ದೊಡ್ಡ ಆಶ್ಚರ್ಯ. ಹುದ್ದೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ಖಾಲಿ ಇವೆ. ಇದೇ ವರ್ಷವೆಂದು ನಾನು ಹೇಳುವುದಿಲ್ಲ. ಹಲವಾರು ವರ್ಷಗಳಿಂದ ಬಂದಿದೆ. ನನಗೆ ನೆನಪಿದೆ. ಮಾನ್ಯ ಜಯಚಂದ್ರರವರು ಕೃಷಿ ಸಚಿವರಿದ್ದಾಗ, ನಾನು ವಿರೋಧ ಪಕ್ಷದಲ್ಲಿದ್ದೆ. ಅವರು ಹೊಸದಾಗಿ ಕೃಷಿ ಸಚಿವರಾದಾಗ ಒಂದು

ದೊಡ್ಡ ಸ್ಟೇಟ್ ಮೆಂಟ್ ಮಾಡಿದರು. ನನಗೆ ಇನ್ನೂ ನೆನಪಿದೆ. ಪತ್ರಿಕೆಗಳಲ್ಲಿ ಪ್ರಮುಖವಾಗಿ ಬಂದಿತ್ತು. "ನಾಲ್ಕು ಸಾವಿರ ಖಾಲಿ ಹುದ್ದೆಗಳನ್ನು ಇನ್ನು ಆರು ತಿಂಗಳಲ್ಲಿ ನಾವು ತುಂಬುತ್ತೇವೆ ಎಂದು ಹೇಳಿದ್ದರು. ಮುಂದೆ ಬಂದಂಥ ಬಹುತೇಕ ಕೃಷಿ ಸಚಿವರು ಅದೇ ರೀತಿಯ ಸ್ಟೇಟ್‌ಮೆಂಟ್ ಮಾಡಿಕೊಂಡು ಬಂದಿದ್ದಾರೆ. ಅದರಲ್ಲೇನೋ ಬದಲಾವಣೆಯೇ ಆಗಿಲ್ಲ. ಆ ನಾಲ್ಕು ಸಾವಿರವೂ ಬದಲಾವಣೆಯಾಗಲಿಲ್ಲ. ತುಂಬುತ್ತೇವೆನ್ನುವುದೂ ಬದಲಾವಣೆಯಾಗಲಿಲ್ಲ. ಕೃಷಿ ನಮ್ಮ ಪ್ರಾಥಮಿಕ ಆದ್ಯತೆ ಎಂದು ನಾವು ಹೇಳುತ್ತೇವೆ. ಇದಕ್ಕೆ ನಾವು ನಮ್ಮ ರೈತನ ಹೊಲದಲ್ಲಿ ಸಹಾಯ ಮಾಡಲು ಕೃಷಿ ಸಹಾಯಕರು, ವಿಸ್ತರಣಾ ಅಧಿಕಾರಿಗಳು, ಕೃಷಿ ಸೈನಿಕರೆಂದು ನಾವೇನು ಕರೆಯುತ್ತೇವೆ. ಸೈನಿಕರಿಲ್ಲದೆಯೇ ನಾವು ಯುದ್ಧಕ್ಕೆ ಹೋದರೆ ಯಾವ ರೀತಿ ಮಾಡುವುದಕ್ಕೆ ಸಾಧ್ಯ? ಇದನ್ನು ಮೂಲಭೂತವಾಗಿ ಸರಿಮಾಡಬೇಕು. ಮಾನ್ಯ ಕೃಷ್ಣ ಭೈರೇಗೌಡರು ಯುವಕರಿದ್ದಾರೆ, ಹಿಂದೆಲ್ಲ ಮಾಡಲು ಆಗದಿರುವ ಕೆಲಸವನ್ನು ಮಾಡುವ ಸಾಧ್ಯತೆಯಿದೆ. ಅವರೇಕೆ ಮಾಡುತ್ತಿಲ್ಲವೆಂದು ಗೊತ್ತಿಲ್ಲ. ಅವರು ಮನಸ್ಸು ಮಾಡಿದರೆ, "ಇಲ್ಲ ಇಲ್ಲ, ಮೊದಲು ಇದನ್ನು ತುಂಬಿ, ಆನಂತರ ನಾನು ಮುಂದೆ ಮಾಡುತ್ತೇನೆ" ಎಂದು ಗಟ್ಟಿಯಾಗಿ ಹಿಡಿದರೆ ಖಂಡಿತವಾಗಿಯೂ ಆಗುತ್ತದೆ. ಅವರು ಮಾಡುತ್ತಿದ್ದರೇನೋ? ನಮ್ಮ ಸಿದ್ದರಾಮಣ್ಣನವರು ಒಂದು ರೀತಿ ಬಹಳ committed ಆಗಿ ಕೆಲಸಗಳನ್ನು ಮಾಡುತ್ತಾರೆ. ಇದರ ಬಗ್ಗೆ ಅವರ commitment ಇತ್ತು. ಆದರೆ ಅವರಂತೆ ಮಾಡಲಿಲ್ಲವೆಂದು ನನಗೆ ಒಮ್ಮೊಮ್ಮೆ ಚಿಂತೆಯಾಗುತ್ತದೆ. ಕೃಷಿ ಇಲಾಖೆಗೆ ನೀವು Cabinet Rank Minister ಕೊಡದೇ State Rank Minister ಕೊಟ್ಟಿರಿ. ಕೃಷಿ ಇಲಾಖೆಗೆ Cabinet Rank Minister ಕೊಡಬೇಕು. ಮಾನ್ಯ ಕೃಷ್ಣ ಭೈರೇಗೌಡರಿಗೆ ನೀವು Cabinet Rank Minister ಮಾಡಿದರೆ Cabinet Meeting ಗಳಲ್ಲಿ ಕೃಷಿಗೆ ಸಂಬಂಧಿಸಿದಂತೆ ಇನ್ನಷ್ಟು ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯ. ಇನ್ನಷ್ಟು Production ಜಾಸ್ತಿ ಮಾಡುವುದಕ್ಕೆ strengthen ಮಾಡುವುದಕ್ಕೆ ಸಾಧ್ಯ. ಹಳ್ಳಿಗಾಡಿನಿಂದ ಬಂದಂಥ ಸಿದ್ದರಾಮಯ್ಯನವರೇ, ನೀವು ಕೃಷಿಗೆ State Minister ಕೊಟ್ಟರೆ ಹೇಗೆ? ಬೇರೆ ಯಾವುದಕ್ಕಾದರೂ ಕೊಡಿ. ಪರವಾಗಿಲ್ಲ. ನಡೆಯುತ್ತದೆ.

ನಮ್ಮ PWD ಮಂತ್ರಿಗಳು ಇಲ್ಲಿಲ್ಲ. ಏಕೆಂದರೆ ಅವರಿಗೆ PWD ಖಾತೆಯನ್ನೇ ಕೊಟ್ಟು ಅದನ್ನು ರಾಜ್ಯ ಖಾತೆ ಮಾಡಿದರೂ ಅವರು ಒಪ್ಪಿಕೊಳ್ಳುತ್ತಾರೆ. ಅದೇನೂ ತೊಂದರೆಯಾಗುವುದಿಲ್ಲ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು): ಈ ಇಲಾಖೆಗೆ ಸಚಿವರನ್ನು ಮಾಡುವಾಗ ರಾಜ್ಯ ದರ್ಜೆ ಎಂದು ಮಾಡಿರಬಹುದು. ಅದನ್ನು ಬಿಟ್ಟರೆ ಇಲಾಖೆಗೆ ಪ್ರಾಮುಖ್ಯತೆ ಕೊಡುವ ವಿಚಾರದಲ್ಲಾಗಲಿ ಅಥವಾ ನಮಗೆ ಮಂತ್ರಿಯಾಗಿ ಸ್ವಾಯತ್ತವಾಗಿ ಕೆಲಸ ಮಾಡುವುದಕ್ಕೆ ಸ್ವಾತಂತ್ರ್ಯ ಕೊಡುವ ವಿಚಾರದಲ್ಲಾಗಿ, ನಮಗೆ ಮಂತ್ರಿಗಳಾಗಿ ಸ್ವತಂತ್ರ ನಿರ್ವಹಣಾ ಜವಾಬ್ದಾರಿ ಕೊಡುವುದಲ್ಲಾಗಲಿ ಅಥವಾ ಯಾವುದೇ ಸಂದರ್ಭದಲ್ಲಿ ನಮ್ಮ ಇಲಾಖೆಗೆ ಇಲ್ಲ ಎಂದು ಹೇಳುವುಂಥದ್ದೂ ಇಲ್ಲ. ಜೊತೆಗೆ ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಯಾವುದೇ ವಿಚಾರವನ್ನು ತೆಗೆದುಕೊಂಡು ಹೋದಾಗಲೂ ಸಹ ಕ್ಯಾಬಿನೆಟ್ ದರ್ಜೆ ಏನು, ರಾಜ್ಯ ದರ್ಜೆ ಏನು, ನನಗಂತೂ ಯಾವುದೇ ವ್ಯತ್ಯಾಸ ಕಂಡೇ ಇಲ್ಲ, ನಮಗೆ ಅವರು ಅಷ್ಟೊಂದು ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅವರು ನಮ್ಮಿಂದ ನಿರೀಕ್ಷೆ ಮಾಡುವುದೇನೆಂದರೆ, ನೋಡಪ್ಪ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು ಆ ರೀತಿ ಕೆಲಸ ಮಾಡು, ನಿನಗೇನು ಬೇಕು ನಾನು ನಿನ್ನ ಹಿಂದೆ ಇದ್ದೇನೆ ಎನ್ನುವಂತಹ ಸಂಪೂರ್ಣ ಶಕ್ತಿಯನ್ನು ನಮಗೆ ಕೊಟ್ಟಿದ್ದಾರೆ. ನಾನು ಮಂತ್ರಿಯಾಗಿ ಒಂದು ವರ್ಷವಾಯಿತು. ಇದರಲ್ಲಿ ಕ್ಯಾಬಿನೆಟ್ ದರ್ಜೆ ಏನು, ರಾಜ್ಯ ದರ್ಜೆ ಏನು ಎಂಬ ಬಗ್ಗೆ ಇವತ್ತಿಗೂ ನನಗೆ ವ್ಯತ್ಯಾಸ ಗೊತ್ತಿಲ್ಲ. ನನಗೆ ಅದರ ಸಂಬಂಧವೂ ಇಲ್ಲ. ಕೆಲಸ ಮಾಡುವುದಕ್ಕೆ ನನಗೇನೂ ಬೇಕೋ ಅಷ್ಟು ಅವಕಾಶ ಕೊಟ್ಟಿದ್ದಾರೆ ಅದು ನನ್ನ ಪಾಲಿಗೆ, ನನ್ನ ಅನುಭವಕ್ಕೆ ನನ್ನ ಅರ್ಹತೆಗಿಂತ ಹೆಚ್ಚಿನ ಅವಕಾಶ ಮತ್ತು ಜವಾಬ್ದಾರಿಯನ್ನು ನನಗೆ ಕೊಟ್ಟಿದ್ದಾರೆ, ನನಗೇನೂ ತೊಂದರೆ ಇಲ್ಲ, ನಮ್ಮ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ ಕೃಷ್ಣ ಭೈರೇಗೌಡರೇ, ನಿಮ್ಮಿಂದ ಇದೇ ಉತ್ತರವನ್ನು ನಾನು ನಿರೀಕ್ಷೆ ಮಾಡಿದ್ದೆ. ಬೇರೆ ಯಾವ ಉತ್ತರವನ್ನೂ ನಿರೀಕ್ಷೆ ಮಾಡಿರಲಿಲ್ಲ. ಪ್ರಶ್ನೆ ಅದಲ್ಲ. ಪ್ರಶ್ನೆ, ಈ ರಾಜ್ಯ ಸ್ಥಾಪನೆಯಾದ ಮೇಲೆ ಯಾವುದೇ ಸರ್ಕಾರ ಬರಲಿ, ಕೃಷಿ ಮಂತ್ರಿಗೆ ಮಾತ್ರ ಕ್ಯಾಬಿನೆಟ್ ರ್‍ಯಾಂಕ್ ಇತ್ತು. State Minister and Cabinet

Minister ಇಬ್ಬರೂ ಕೂಡ ಇದ್ದದ್ದನ್ನು ನೋಡಿದ್ದೇವೆ. ಆದರೆ Cabinet Rank ಇಲ್ಲದಿರುವಂಥ ಕೃಷಿ ಸಚಿವರು ಇರಲಿಲ್ಲ, ಏನೆಂದರೆ, ಒಂದು ಸರ್ಕಾರದ ಪ್ರಾಮುಖ್ಯತೆಯ ಪ್ರಶ್ನೆ. ಕೃಷ್ಣ ಭೈರೇಗೌಡರ ಪ್ರಾಮುಖ್ಯತೆಯ ಪ್ರಶ್ನೆ ಅಲ್ಲ. ನಿಮಗೆ ಬೇಕಾಗಿರಲಿಲ್ಲ ಸ್ವಾಮಿ, ಆದರೆ ನಮ್ಮ ರೈತರಿಗೆ ಮಾನಸಿಕವಾಗಿ ಬೇಕಾಗಿರುವಂಥ ಇಲಾಖೆ, ಅದಕ್ಕೆ ಮಹತ್ವ ಸಿಕ್ಕಿದೆ, ಅದಕ್ಕೊಂದು ಗೌರವವಿದೆ ಎನ್ನುವಂಥ ಭಾವನೆ ಬರಬೇಕಾಗುತ್ತದೆ. ಇಲ್ಲಿ ಎಲ್ಲವೂ count ಆಗುತ್ತದೆ. ಆದ್ದರಿಂದ ಕೃಷ್ಣ ಭೈರೇಗೌಡರಿಂದ ಇದನ್ನೇ ನಿರೀಕ್ಷೆ ಮಾಡಿದ್ದೆ, ಏನೂ ಚಿಂತೆ ಮಾಡುವುದಕ್ಕೆ ಹೋಗಬೇಡಿ, ನನಗೇನೆಂದರೆ ನಿಮ್ಮ ತಂದೆಯವರು ಕೃಷಿ ಸಚಿವರಾಗಿ ಕ್ಯಾಬಿನೆಟ್ ರ್‍ಯಾಂಕ್‌ನಲ್ಲಿದ್ದರು ನಾವು ನಿಮ್ಮನ್ನು ಅಲ್ಲಿ ನೋಡಬೇಕೆಂಬ ಆಸೆ ಇದೆ. ಆದ್ದರಿಂದ ನಾವು ಆ ಮಾತನ್ನು ಹೇಳಿದ್ದೇವೆ. ನೀವು ಹೇಳಿದ್ದರಲ್ಲಿ the underlining is totally different. ನೀವು ಬಹಳ ಸಂತೋಷವಾಗಿ, ಸಮಾಧಾನದಿಂದ ಹೇಳಿದ್ದೀರಿ, underlining ಏನಿದೆ ಎಂದರೆ ಮುಂದಿನ ದಿನಗಳಲ್ಲಿ ಕೊಡುತ್ತಾರೆ ಬಿಡಿ, ನೀವೇಕೆ ಈ ವಿಚಾರವನ್ನು ಎತ್ತಿ ನಮ್ಮ chance ಹಾಳು ಮಾಡುತ್ತೀರಿ ಎಂದು ಹೇಳಿದಿರಿ ಎಂದು ನಾನು ಭಾವಿಸುತ್ತೇನೆ. ಅದು ಏನೇ ಇರಲಿ.

ಶ್ರೀ ಕೃಷ್ಣ ಭೈರೇಗೌಡ : ನಾನು ಹೇಳಿದ್ದರ ಅರ್ಥವೇನೆಂದರೆ, ರೈತರ ಕೆಲಸ ಮಾಡುವುದಕ್ಕೆ ಕ್ಯಾಬಿನೆಟ್ ದರ್ಜೆ, ರಾಜ್ಯ ದರ್ಜೆ, ಇವುಗಳಿಗೆ ಸಂಬಂಧವಿಲ್ಲ. ರೈತರ ಕೆಲಸ ಮಾಡಬೇಕು. ಅದಕ್ಕೆ ಬದ್ಧರಾಗಿದ್ದೇವೆ ಎಂದು ಹೇಳಿದೆ ಅಷ್ಟೇ,

ಶ್ರೀ ಬಸವರಾಜ ಬೊಮ್ಮಾಯಿ : ಸ್ವಾಮಿ ರೈತರ ಕೆಲಸ ಮಾಡುವುದಕ್ಕೆ ಕಳಕಳಿ ಮಾಡುವುದಕ್ಕೆ ಮಂತ್ರಿಗಳೂ ಆಗಬೇಕಾಗಿಲ್ಲ. ಅದು ಬೇರೆ ವಿಚಾರ, ಆದರ ರಾಜ್ಯದ ಜನತೆ ರಾಜ್ಯದ ರೈತರು ಆ ಇಲಾಖೆ ಬಗ್ಗೆ ಗಮನಿಸುತ್ತಿರುತ್ತಾರೆ. ಅ ಇಲಾಖೆಯ ಒಂದು ಪ್ರಾಮುಖ್ಯತೆಯ ಬಗ್ಗೆ ಅವರಿಗೆ ಅರಿವಿದೆ. ಅದನ್ನು ಕಡಿಮೆ ಮಾಡುವುದು ಬೇಡವೆಂದು ನನ್ನ ಕಳಕಳಿ ಅಷ್ಟೆ. ತಾವು ಸಮಾಧಾನ ಪಟ್ಟುಕೊಳ್ಳಬಹುದು. ಆದರೆ ಏನೊಂದು ಪದ್ಧತಿ ಬಂದಿದೆ ಆ ಪದ್ಧತಿಗೆ ಏಕೆ ಪ್ರಾಮುಖ್ಯತೆ ಬಂದಿದೆ ಎಂದರೆ, ಕೃಷಿ ವಲಯ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ವಲಯ, ದೊಡ್ಡ ಪ್ರಮಾಣದಲ್ಲಿ ಎಂದರೆ 131 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡುವಂಥ ಒಂದು ವಲಯ. ಇದನ್ನು

ನಾವು ಹಗುರವಾಗಿ ತೆಗೆದುಕೊಳ್ಳುವುದು ಬೇಡ. ಅದಕ್ಕೆ ಪ್ರಾಮುಖ್ಯತೆ ಕೊಡಲಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಪರವಾಗಿ ನಾನು ಕೇಳಿಕೊಳ್ಳುತ್ತೇವೆ.

ಶ್ರೀ ಜಿ.ಟಿ. ದೇವೇಗೌಡ : ಕೃಷ್ಣ ಭೈರೇಗೌಡರೇ, ಅವರು ಹೇಳುತ್ತಿರುವುದೇನೆಂದರೆ ನಿಮಗೆ freedom ಕೊಟ್ಟಿಲ್ಲ. ನಿಮಗೆ ಬೆಂಬಲ ಕೊಟ್ಟಿಲ್ಲವೆಂದಲ್ಲ. ಇಡೀ ರಾಜ್ಯಲ್ಲಿ ಕೃಷಿಗೆ ಮನ್ನಣೆ, ರೈತರಿಗೆ ಗೌರವ ಸಿಗಬೇಕು. ಕೃಷಿಗೆ ಮೊದಲನೆಯ ಆದ್ಯತೆ ಇರಬೇಕು. ಎನ್ನತಕ್ಕಂಥ ಒಂದು ಸಂದೇಶ. ಆ ಗೌರವ ಹಿಂದಿನಿಂದಲೂ ನಡೆದುಕೊಂಡು ಬಂದಿದೆ, ಅದಕ್ಕೋಸ್ಕರ, ಅವರಿಗೋಸ್ಕರ ಮಾತನಾಡುತ್ತಿದ್ದಾರೆಯೇ ಹೊರತು ನಿಮಗೆ freedom ಕೊಟ್ಟಿಲ್ಲ. ಕೈಗಳನ್ನು ಕಟ್ಟಿಹಾಕಿದ್ದಾರೆ ಎಂದು ಅವರು ಎಲ್ಲಿಯೂ ಹೇಳಲಿಲ್ಲ. ಅದನ್ನು ಮಾನ್ಯ ಬಸವರಾಜ ಬೊಮ್ಮಾಯಿಯವರು ಹೇಳಿರುವುದು. ಅದನ್ನು ನೀವು ಗಮನಿಸಬೇಕು.

ಶ್ರೀ ಬಸವರಾಜ್ ಬೊಮ್ಮಾಯಿ. ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಸ್ವಲ್ಪ busy ಆಗಿದ್ದಾರೆ. ಆದರೂ ಕೂಡ ನಾನು ಹೇಳಿರುವ ವಿಚಾರವನ್ನು ಅವರು ಗಮನಿಸಿದ್ದಾರೆಂದು ಭಾವಿಸಿದ್ದೇನೆ. ನಾನು ಮುಂದುವರಿದು ಮಾತನಾಡುವ ಸಂದರ್ಭದಲ್ಲಿ ಹೇಳುವುದೇನೆಂದರೆ agro credit ಬಹಳ ವರ್ಷಗಳಿಂದ ಬಂದಿದೆ. ಈ agro credit ಕೇವಲ ಬೆಳೆ ಸಾಲಕ್ಕೆ ಮಾತ್ರ ಸೀಮಿತವಾಗಿದೆ. Agro credit system ಏನಿದೆ ಅದು ರಾಷ್ಟ್ರ ಮಟ್ಟದಲ್ಲಿ ಬದಲಾವಣೆ ಆಗಬೇಕೇ ಹೊರತು ನಮ್ಮ ರಾಜ್ಯದಲ್ಲಿ ಮಾತ್ರ ಅಲ್ಲ. ಇವತ್ತು ಏನಾಗಿದೆ ಎಂದರೆ, Government of India and World Bank ಫಂಡ್‌ನಿಂದ National Agriculture Bank (ನಬಾರ್ಡ್) ನಡೆಯುತ್ತಿದೆ. ಅದಕ್ಕೆ ಫಂಡಿಂಗ್ ಸಹ ಬಹಳ ಲಿಮಿಟೆಡ್ ಇದೆ. ಇದರ ಪರಿಣಾಮ ನೇರವಾಗಿ ನಮ್ಮ ರೈತರ ಮೇಲೆ ಆಗುತ್ತಿದೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 20 ಲಕ್ಷಕ್ಕಿಂತ ಹೆಚ್ಚು ರೈತ ಕುಟುಂಬಗಳಿಗೆ co-operative ಮುಖಾಂತರ ಫಂಡಿಂಗ್ ಆಗುತ್ತಿದೆ. ಈ ಬೆಳೆ ಸಾಲ ಬಿಟ್ಟರೆ ಬೇರೆ ಯಾವುದೇ ರೀತಿಯ ಸಾಲ ರೈತರಿಗೆ ಇವತ್ತಿನ ದಿವಸ ಸಿಗುತ್ತಿಲ್ಲ. ಮತ್ತೆ scale of financing ಅನ್ನು ಬ್ಯಾಂಕ್‌ನವರು ನಿಗದಿ ಮಾಡಿರುತ್ತಾರೆ. ಅಂದರೆ, ಒಂದು

ಹೆಕ್ಟೇರ್ ಪ್ರದೇಶದಲ್ಲಿನ ಜೋಳಕ್ಕೆ 5,000, 6,000, 8,000 ರೂಪಾಯಿ ಎಂದು ಮತ್ತೆ ಅದೇ ರೀತಿಯಾಗಿ commercial crop ಆಗಿರುವ ಹತ್ತಿಗೆ 15,000, 20,000 ಎಂದು ಹಾಗೆಯೇ ಕಬ್ಬಿಗೆ 25,000 ರೂಪಾಯಿ ರೀತಿಯಲ್ಲಿ ಅವರೇ ನಿಗದಿ ಮಾಡಿರುತ್ತರೆ, ಅದರೆ, ಯಾವುದೇ ವರ್ಷ ಆ scale of finance ಪ್ರಕಾರ ಇವತ್ತಿನವರೆಗೂ ರೈತರಿಗೆ ಎಂದೂ ಕೂಡ ಕ್ರೆಡಿಟ್ ಕೊಟ್ಟಿಲ್ಲ. ಪ್ರದೇಶದ ಅನುಗುಣವಾಗಿ ಆತನಿಗೆ 3 ಲಕ್ಷ ರೂಪಾಯಿ ಕೊಡಬೇಕಾಗಿದ್ದರೆ ಆತನಿಗೆ ಸಿಗುವುದು ಕೇವಲ 50,000, 80,000 ಬಹಳ ಎಂದರೆ 1 ಲಕ್ಷ ರೂಪಾಯಿ ಸಿಗಬಹುದಷ್ಟೆ, one third of scale of financing ಮಾತ್ರ ಆತನಿಗೆ ಸಿಗುತ್ತದೆ. ಈ ರೀತಿಯಾದರೆ ಆತ ಯಾವ ರೀತಿಯಾಗಿ ಕೃಷಿ ಮಾಡಬೇಕು ಹೇಳಿ? ಇವತ್ತಿನ ದಿವಸ ಆತನ ಬದುಕು ಅಸ್ಥಿರವಾದ ಬದುಕಾಗಿದೆ. ಮಳೆ ಗಾಳಿ– ಬಿಸಿಲಿನ ಮೇಲೆ ಆತನ ಬದುಕು ಇದೆ. ಇಂಥ ಸಂದರ್ಭದಲ್ಲಿ ನನ್ನ ಬೆನ್ನ ಹಿಂದೆ ಹಣಕಾಸಿನ ನೆರವು ಇದೆ ಎಂಬ ಮನೋಧೈರ್ಯ ಇಲ್ಲದೇ ಇರುವಂಥ ಪರಿಸ್ಥಿತಿ ಇವತ್ತು ಇದೆ. ಎರಡನೇ ವಿಚಾರ ಏನೆಂದರೆ, ಕೃಷಿಯಲ್ಲಿ capital investmant ಗೆ ದೊಡ್ಡ ಪ್ರಮಾಣದಲ್ಲಿ ದುಡ್ಡು ಲಭ್ಯವಾಗುತ್ತಿಲ್ಲ. ಮೊದಲನೇ, ಎರಡನೇ ಹಾಗೂ ಮೂರನೇ ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿಗೆ ದುಡ್ಡು ಬರಲಿಲ್ಲ. ನಾಲ್ಕನೇ ಪಂಚವಾರ್ಷಿಕ ಯೋಜನೆಯಿಂದ ಕೃಷಿಗೆ ಮತ್ತು ದುಡ್ಡು ಬರುವುದಕ್ಕೆ ಪ್ರಾರಂಭವಾಯಿತು, ಹಾಗೆಯೇ green revolution ಬಂದ ನಂತರ ಸ್ವಲ್ಪ ಒತ್ತಡ ಹಾಗೂ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿತು. ಆ ಸಂದರ್ಭದಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ capital investment ಬಂತು. ಆದರೆ, ಮುಂದಿನ ದಿನಗಳಲ್ಲಿ ಯಾವುದೇ capital investment ಬರಲಿಲ್ಲ. capital investment ಅಂದರೆ, ರೈತ ತನ್ನ ಹೊಲದ ಮಣ್ಣಿನ ಗುಣಮಟ್ಟವನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಆಧುನೀಕರಣ ಉಪಕರಣಗಳನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಹಾಗೂ storage ಅನ್ನು ನಿರ್ಮಾಣ ಮಾಡಿಕೊಳ್ಳುವುದಕ್ಕೆ ಮತ್ತು ಧಾನ್ಯ ಚೆನ್ನಾಗಿ ಬಂದಂಥ ಸಂದರ್ಭದಲ್ಲಿ ಮಾತ್ರ ಕೊಡುವಂಥ ಒಂದು ಶಕ್ತಿಯನ್ನು ರೂಢಿಸಿಕೊಳ್ಳುವುದಕ್ಕೆ ಉಪಯೋಗವಾಗುತ್ತದೆ. ಆದರೆ, ಇವತ್ತಿನ ದಿವಸ ಯಾವುದಕ್ಕೂ ಸಹ capital investment ಬರುತ್ತಿಲ್ಲ. ಎಲ್ಲಿಯವರೆಗೆ ಕೃಷಿಯಲ್ಲಿ capital investment ಬರುವುದಿಲ್ಲವೋ ಅಲ್ಲಿಯವರಗೆ ದೊಡ್ಡ

ಪ್ರಮಾಣದಲ್ಲಿ ಬದಲಾವಣೆಯನ್ನು ಮತ್ತು ಕ್ರಾಂತಿಯನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ರಾಜ್ಯ ಸರ್ಕಾರಕ್ಕೆ ಒಂದು ಸಣ್ಣ ಸಲಹೆಯನ್ನು ಕೊಡುವುದಕ್ಕೆ ನಾನು ಬಯಸುತ್ತೇನೆ. ನಬಾರ್ಡ್‌ನಿಂದ ಲಿಮಿಟೆಡ್ ಆಗಿ ಫಂಡ್ ಬರುತ್ತದೆ. ಅದನ್ನು ನಾವೇನೂ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ, ಏಕೆಂದರೆ, ಆ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚಿಂತನೆ ಆಗಬೇಕು. ನಮ್ಮ ರಾಜ್ಯ ಸರ್ಕಾರದ ಹಲವಾರು ಇಲಾಖೆಗಳಲ್ಲಿ ಹಣ ಇರುವುದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಈ ಹಣ ಪಿಡಿಓ ಅಂಕೌಂಟ್‌ನಲ್ಲಿ ಅಥವಾ ಇತರೆ ಕಡೆಗಳಲ್ಲಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಕೃಷಿ ಸಚಿವರು ಒಂದು ಕೆಲಸವನ್ನು ಮಾಡಬಹುದು. ಅದೇನೆಂದರೆ, ನಮ್ಮ ರಾಜ್ಯ ಸರ್ಕಾರದ ಹಣ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಎಷ್ಟು ಡೆಪಾಸಿಟ್ ಆಗಿರುತ್ತದೆ ? ಡೆಪಾಸಿಟ್ ಬಿಟ್ಟು ಬೇರೆ ವಿಷಯ ಹೇಳುವುದಿಲ್ಲ. ಏಕೆಂದರೆ, ಇವತ್ತಿನ ದಿವಸ ಎಷ್ಟು ವ್ಯವಹಾರವಾಗಿದೆ ಎಂದು ಹೇಳುವುದಿಲ್ಲ. ಏಕೆಂದರೆ, ಅದು ಬಹಳ ದೊಡ್ಡ ಪ್ರಮಾಣದಲ್ಲಿರುತ್ತದೆ. ನಮ್ಮ ರಾಜ್ಯ ಸರ್ಕಾರದ ಡೆಪಾಸಿಟ್ ಹಣ ನಮ್ಮ ರಾಜ್ಯದ ಕೋ-ಆಪರೇಟಿವ್ ಮಧ್ಯವರ್ಧಕ ಬ್ಯಾಂಕ್‌ಗಳಲ್ಲಿ, ಡಿಸ್ಟ್ರಿಕ್ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಅಥವಾ ನಮ್ಮ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಇವತ್ತಿನ ದಿವಸ ಎಷ್ಟು ಡೆಪಾಸಿಟ್ ಆಗಿದೆ? ಇವತ್ತಿನ ದಿವಸ ನಮ್ಮ ರಾಜ್ಯದ ಬ್ಯಾಂಕ್‌ಗಳ ಮೇಲೆ ನಮಗೆ ವಿಶ್ವಾಸ ಇಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಏಕೆಂದರೆ, ಅಲ್ಲಿ ಬಹಳ ದೊಡ್ಡ ಪ್ರಮಾಣದ ಅವ್ಯವಹಾರ ಆಗಿದೆ. ಆದರೆ, ಈಗ RBI ನವರು ಬಹಳ ದೊಡ್ಡ norms ಹಾಕಿದ್ದರಿಂದ ಅಲ್ಲಿ ಕೂಡ ಅವ್ಯವಹಾರಗಳು ಬಹಳಷ್ಟು ಕಡಿಮೆ ಆಗಿದೆ. ಇವತ್ತು RBI norms ಪ್ರಕಾರ ನಡೆಯಬೇಕಾಗುತ್ತದೆ. ನನ್ನ ಪ್ರಕಾರ ಲಕ್ಷ ಕೋಟಿ ರೂಪಾಯಿಗಿಂತ ಹೆಚ್ಚು ಹಣ ವಿವಿಧ ಇಲಾಖೆಗಳಲ್ಲಿ ಹಲವಾರು ವರ್ಷಗಳಿಂದ ಬೇರೆ ಬೇರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿವೆ. ನೀವು ಈ ಹಣವನ್ನು ನಮ್ಮ ಬ್ಯಾಂಕ್‌ಗಳಲ್ಲಿ ತೊಡಗಿಸಿ ಅದರ ಮುಖಾಂತರ capital investment ಅನ್ನು ಕೃಷಿಯಲ್ಲಿ ತೊಡಗಿಸಿ ನಮ್ಮ ರೈತರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆಯನ್ನು ತಾವು ಮಾಡಿದರೆ ಒಳ್ಳೆಯದು. ಹಣ ಮತ್ತು ಈ ಬ್ಯಾಂಕುಗಳ ನಿಯಂತ್ರಣ ನಿಮ್ಮ ಕೈಯಲ್ಲಿರುವುದರಿಂದ ತಾವು ಏಕೆ ಈ ಪ್ರಯೋಗವನ್ನು ಸಣ್ಣ ಪ್ರಮಾಣದಲ್ಲಿ ಮಾಡಬಾರದು. ಎನ್ನುವಂಥ ಒಂದು ಸಣ್ಣ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನೀವು

ಇದನ್ನು ದಯವಿಟ್ಟು ಬಹಳ ಸೀರಿಯಸ್ ಆಗಿ ತೆಗೆದುಕೊಳ್ಳಿ. ನೀವು ರೈತರಿಗೆ ಸಂಪೂರ್ಣವಾಗಿ scale of finance and capital investment ಕೊಡಬೇಕು

ಅಧ್ಯಕ್ಷರು : Through one agency ಮೂಲಕ ಮಾಡಬಹುದು.

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಇದಕ್ಕೆಲ್ಲ ಹಣಕಾಸಿನ ನಿರ್ವಹಣೆ ಮಾಡುವಾಗ ಬಹಳಷ್ಟು ಯೋಜನೆ ಮಾಡಿ financial implication and financial disipline ಅನ್ನು ನೋಡಿ ಮಾಡಬೇಕಾಗುತ್ತದೆ. ಸರ್ಕಾರದ ಹಣಕಾಸಿನ ಇಲಾಖೆ ಮತ್ತು ಮೆಷಿನರಿ ಇರುವುದರಿಂದ ಬೇಕಾದಷ್ಟು ಮಾಡಬಹುದು. ಮೊದಲು ಯಾವುದಾದರೊಂದು ಜಿಲ್ಲೆಯಲ್ಲಿ ಇದನ್ನು ಮಾಡಿ. ಅಂದರೆ, ಯಾವ ಜಿಲ್ಲೆಯಲ್ಲಿ ಒಂದು ಬ್ಯಾಂಕ್ ಚೆನ್ನಾಗಿ ನಡೆಯುತ್ತದೆಯೋ ಅಂಥ ಒಂದು ಒಳ್ಳೆಯ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್ ಮೂಲಕ ಅಂದರೆ centralized bank through ಮಾಡಿ. ಏಕೆಂದರೆ, district ಗೆ finance ಕೊಡುವುದು ಅವರ ಜವಾಬ್ದಾರಿಯಾಗುತ್ತದೆ. ಈ ರೀತಿಯಾಗಿ ತಾವೇಕೆ ಮಾಡಬಾರದು? ಅಪೆಕ್ಸ್ ಬ್ಯಾಂಕ್ ಜೊತೆ ಒಂದು ಒಪ್ಪಂದವನ್ನು ಮಾಡಿಕೊಂಡು ಏಕೆ ಮಾಡಬಾರದು? ಬೇರ ಬೇರೆ ಕಡೆ ಇಟ್ಟಿರುವ ಸುಮಾರು 10ರಿಂದ 15 ಸಾವಿರ ಕೋಟಿ ರೂಪಾಯಿಯನ್ನು ಅವರಿಗೆ ಕೊಟ್ಟು ಅವರ ಮುಖಾಂತರ ಅವರು re-finance ಮಾಡಲಿ.

ಅಧ್ಯಕ್ಷರು:- ಅಪೆಕ್ಸ್ ಬ್ಯಾಂಕ್ ಸರ್ಕಾರದ್ದು ಆಗಿದೆ. ಆದ್ದರಿಂದ, ಅಗ್ರಿಮೆಂಟ್ ಆಗಬೇಕು.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಆ ಬ್ಯಾಂಕ್ ಮುಖಾಂತರ ಡಿ.ಸಿ.ಸಿ ಬ್ಯಾಂಕ್‌ಗೆ ಕೊಡುತ್ತಾರೆ. ಎಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳ ನಿಯಂತ್ರಣ ಅಪೆಕ್ಸ್ ನಲ್ಲಿರುತ್ತದೆ. ಆದ್ದರಿಂದ, ಬೇರೆ ಬೇರೆ ಜಿಲ್ಲೆಗಳಲ್ಲಿ ಮಾಡುವ ಬದಲು ಅಪೆಕ್ಸ್ ಬ್ಯಾಂಕ್ ಒಂದರಲ್ಲಿಯೇ ಮಾಡಿ. ಈ ಬ್ಯಾಂಕ್ ಮುಖಾಂತರ ಏಕೆ ಮಾಡಬಾರದು? ಇವತ್ತಿನ ದಿವಸ ಏನಾಗಿದೆ ಎಂದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ 27% ನಷ್ಟು Agriculture loan ಕೊಡಬೇಕೆಂದು ಟಾರ್ಗೆಟ್ ಕೊಟ್ಟಿದ್ದಾರೆ. ಆದರೆ, ಯವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳು ಕೊಡುತ್ತಿಲ್ಲ. ಆದರೆ ಏನು ಮಾಡುತ್ತಾರೆಂದರೆ, ಆ ಕೃಷಿಕರ ಹೆಸರಿನಲ್ಲಿ

ಜೀಪ್ ಅಥವಾ ಕಾರ್‌ಗೆ ಲೋನ್ ಕೊಡುತ್ತಾರೆ. ಆದರೆ, ಕೃಷಿ ಉತ್ಪಾದನೆ ಮಾತ್ರ ಕೊಡುವುದಿಲ್ಲ. ಹಾಗಾಗಿ ಇರುವ ಟಾರ್ಗೆಟ್ ಅನ್ನು ಯಾರೂ ಮುಟ್ಟುವುದಿಲ್ಲ. ಹಾಗೆಯೇ, ನಿಮ್ಮ ಮಾತನ್ನು ಅವರ್‍ಯಾರೂ ಕೇಳುವುದಿಲ್ಲ. state level ನ ಬ್ಯಾಂಕಿಂಗ್ ಕಮಿಟಿಗಳಿವೆ. ಅವರನ್ನು ನೀವು ಎಷ್ಟು ಸಾರಿ meet ಮಾಡುತ್ತೀರಿ? ಅವರ ಮೇಲೆ ಏನೂ ನಿಯಂತ್ರಣ ಇದೆ? ಅವರು ಕೊಡುವ ಅಂಕಿ ಅಂಶಗಳನ್ನು ಒಪ್ಪಿಕೊಳ್ಳುತ್ತೀರಿ. ಆದರೆ, ground level ಹೋಗಿ ಯಾವುದನ್ನಾದರೂ ಪರಿಶೀಲನೆ ಮಾಡುತ್ತೀರಾ ನಾವು ಸಚಿವರಾಗಿ, ಶಾಸಕರಾಗಿ ಯಾರಾದರೊಬ್ಬ ರೈತರಿಗೆ ವಿಜಯ ಅಥವಾ ಸಿಂಡಿಕೇಟ್ ಅಥವಾ ಸ್ಟೇಟ್ ಬ್ಯಾಂಕ್‌ಗಳಲ್ಲಿ ನಮ್ಮ ಸರ್ಕಾರದಿಂದ ಅಪ್ರೂವಲ್ ಆದ ಸ್ಕೀಂನಲ್ಲಿ ಆತನಿಗೆ ಲೋನ್ ಕೊಡಿ ಎಂದರೆ ಕೊಡುವುದಕ್ಕೆ ಆಗುವುದಿಲ್ಲ ಎಂದು open ಆಗಿ Branch Manager ಬಹಳ ಉದ್ಧಟತನದಿಂದ ಮಾತನಾಡುತ್ತಾರೆ. ಇದು ಇವತ್ತಿನ ವಸ್ತುಸ್ಥಿತಿಯಾಗಿದೆ. ಇವತ್ತಿನ ದಿವಸ ಒಬ್ಬ ಬ್ಯಾಂಕ್ ಮ್ಯಾನೇಜರ್ ಇಷ್ಟರ ಮಟ್ಟಿಗೆ ಮಾತನಾಡುವಂಥ ಸ್ಥಿತಿಗೆ ಹೋಗಿದ್ದಾರೆ. ಈ ರೀತಿ ಇರುವಾಗ ಒಬ್ಬ ರೈತ ಅಲ್ಲಿಗೆ ಹೋದರೆ ಆತನನ್ನು ಬಾಗಿಲಿನಿಂದ ಒಳಗೆ ಬಿಟ್ಟುಕೊಡುವುದಿಲ್ಲ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಮ್ಮ ರಾಜ್ಯದ ಪಾಲಿನ ಟಾರ್ಗೆಟ್ ಇರುತ್ತದೆ. ಹಾಗೆಯೇ State Level Advisory Committee ಸಹ ಇದೆ. ಆದ್ದರಿಂದ ಇದನ್ನು ನಿಯಂತ್ರಣ ತೆಗೆದುಕೊಳ್ಳುವುದಕ್ಕೆ ನಿಮಗೇಕೆ ಸಾಧ್ಯವಿಲ್ಲ? ಏಕೆ implementation ಮಾಡುವುದಕ್ಕೆ ಸಾಧ್ಯವಿಲ್ಲ? ಇದರಿಂದ ಲಕ್ಷಾಂತರ ಜನ ರೈತರಿಗೆ ಅನುಕೂಲವಾಗುತ್ತದೆ. This is where you should show your sence of commitment. ಇಲ್ಲಿ ನಿಮ್ಮ commitment ಅನ್ನು ಮತ್ತು ನಿಮ್ಮ ಬದ್ಧತೆಯನ್ನು ತೋರಿಸಬೇಕಾಗುತ್ತದೆ. ಎಲ್ಲವನ್ನೂ ಕೂಡ ನಮ್ಮ ಬಜೆಟ್‌ನಿಂದ ಮಾಡಬೇಕೆಂದಿಲ್ಲ. ವಿವಿಧ ರೀತಿಯಲ್ಲಿ ವಿವಿಧ ಕ್ಷೇತ್ರಗಳಿಂದ ಹಣವನ್ನು ತಂದು ನಮ್ಮ ಕೃಷಿ ಕ್ಷೇತ್ರಕ್ಕೆ ಹಾಕಿದರೆ ಖಂಡಿತವಾಗಿಯೂ ಕೂಡ ಅನುಕೂಲವಾಗುತ್ತದೆ. ಹೊಸ ಚಿಂತನೆಯನ್ನು ತಾವು ದಯವಿಟ್ಟು ಮಾಡಬೇಕು. ಕೇವಲ ಸಮಸ್ಯೆಗಳನ್ನು ಹೇಳಿಕೊಂಡರೆ ಆಗುವುದಿಲ್ಲ, ಅದನ್ನು ಪರಿಹಾರ ಮಾಡುವುದಕ್ಕೂ ಕೂಡ ಬೇಕಾದಷ್ಟು ಅವಕಾಶಗಳಿವೆ. ಆ ದಿಕ್ಕಿನಲ್ಲಿ ಕೂಡ ನಮ್ಮ ಕೃಷಿ ಸಚಿವರು ದಯವಿಟ್ಟು ಚಿಂತನೆ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಚ್ಛೆ ಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಟ್ರಾಕ್ಟರ್‌ಗೆ ಸಬ್ಸಿಡಿ ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿ ಬಿಟ್ಟಿದ್ದಾರೆ Government of India ದವರು ಸಬ್ಸಿಡಿಯನ್ನು ಏನು ಕೊಡುತ್ತಿದ್ದರು ಅದನ್ನು ನಿಲ್ಲಿಸಿದ ಕೂಡಲೇ ರಾಜ್ಯ ಸರ್ಕಾರದವರು ನಿಲ್ಲಿಸಿ ಬಿಟ್ಟಿದ್ದಾರೆ. ಟ್ರಾಕ್ಟರ್ ಸಬ್ಸಿಡಿಯನ್ನು ಕೊಡುತ್ತಿಲ್ಲ. Horticulture ದಿಂದ ತಾಲ್ಲೂಕಿಗೊಬ್ಬರಿಗೆ ಕೊಡುತ್ತಿದ್ದಾರೆ. ಅದಕ್ಕೆ ಶಾಸಕರುಗಳಿಗೆ ಶಿಫಾರಸ್ಸು ಮಾಡಬೇಕು. ಯಾರಿಗೆ ಶಿಫಾರಸ್ಸು ಮಾಡೋಣ, ಯಾರಿಗೆ ಬಿಡೋಣ.Horticulture ದಿಂದ ಒಂದಕ್ಕೆ ಮಾತ್ರ ಕೊಡುತ್ತಿದ್ದಾರೆ. ಇವತ್ತು ಟ್ರಾಕ್ಟರ್‌ಗಳು ಸಾಕು. ಎಲ್ಲಾ ರೈತರ ಕಡೆ ಇದೆ ಎನ್ನುವಂಥ ಭಾವನೇನ ಅದು ಒಂದು ಕಡೆ ಮಾಡಿದರೆ ಟ್ರಾಕ್ಟರ್‌ಗಳಿಗೆ ಸಬ್ಸಿಡಿ ಕೊಡುವುದಿಲ್ಲವೆಂದು ಮಾಡಿದಿರಿ. ಆ ಟ್ರಾಕ್ಟರ್ ತೆಗೆದುಕೊಳ್ಳುವುದಕ್ಕೆ ಮೊದಲು ಮಿನಿಮಮ್ 5 ಹೆಕ್ಟೇರ್ ಇತ್ತು. ಅದನ್ನು ಕಡಿಮೆ ಮಾಡಿ ಈಗ 2 ಅಥವಾ 5 ಎಕರೆಗೆ ಇಳಿಸಿದ್ದಾರೆ. ಒಂದು ಕಡೆ ಅವನಿಗೆ ಟ್ರಾಕ್ಟರ್ ತೆಗೆದುಕೊಳ್ಳುವುದಕ್ಕೆ ಅರ್ಹತೆ ಕೊಟ್ಟಿದ್ದಾರೆ ಇನ್ನೊಂದು ಕಡೆ ಅವನಿಗೆ ಸಬ್ಸಿಡಿ ಇಲ್ಲ. ಈ ತರಹ ದ್ವಂದ್ವಗಳು ಬಹಳ ಇದೆ. ಇದಕ್ಕೆ ನೀವು ಏಕೆ ಚಿಂತನೆಯನ್ನು ಮಾಡಬಾರದು ? ನೀವು ಒಂದು ಸರ್ವೆ ಮಾಡಿಸಿ. ಎಷ್ಟೆಷ್ಟು land holding ಇದೆ, minimum ಎಷ್ಟು land holding ಗೆ ಒಂದು ಟ್ರಾಕ್ಟರ್ feasible ಆಗುತ್ತದೆ. ಈಗ ಇರುವಂಥ ಟ್ರಾಕ್ಟರ್‌ಗಳಿಗೆ ಸಂಖ್ಯೆ ಎಷ್ಟು ? ಕೆಲವು ಪ್ರಗತಿಪರ ರೈತರಿಗೆ ಟ್ರಾಕ್ಟರ್ ಇಲ್ಲದಿರುವುದರಿಂದ ಉತ್ಪಾದನೆಗೆ ಎಷ್ಟು ತೊಂದರೆ ಆಗುತ್ತಿದೆ? ನೀವು realistic ಆಗಿ ಮಾಡಿ, ತಾಲ್ಲೂಕಿಗೆ ಇಂತಿಷ್ಟು ಕೊಡಿ ಎಂದು ನಾನು ಹೇಳುವುದಿಲ್ಲ. Realistic ಆಗಿ ಸರ್ವೇ ಮಾಡಿಸಿ. ಅದರ ಪ್ರಕಾರ ನೀವು ಟ್ರಾಕ್ಟರ್‌ಗಳಿಗೆ ಸಬ್ಸಿಡಿಯನ್ನು ಈ ವರ್ಷ ನಾವು dry land farming ಗೆ 1000 ಟ್ರಾಕ್ಟರ್‌ಗಳಿಗೆ ಸಬ್ಸಿಡಿಯನ್ನು ಕೊಡುತ್ತೇವೆ. Irrigation ಗೆ ಅಲ್ಲಿಗೆ 500 ಟ್ರಾಕ್ಟರ್‌ಗಳನ್ನು ಕೊಡುತ್ತೇವೆ. ಅವರಿಗೆ ಅಲ್ಲಿ ಶಕ್ತಿ ಇದೆ. ಈ ತರಹ ಒಂದು realistic ಆಗಿ Data base ಇಟ್ಟುಕೊಂಡು ತಾವು ಏಕೆ ಕಾರ್ಯಕ್ರಮವನ್ನು ರೂಪಿಸುವುದಿಲ್ಲ? ಅಂಕಿ ಅಂಶಗಳು ಇಲ್ಲದೇ ಈ ಕಾರ್ಯಕ್ರಮ ರೂಪಿಸಿದ್ದಾಕ್ಕಾಗಿ ಎಡವಟ್ಟುಗಳು ಆಗುತ್ತವೆ. ಆದ್ದರಿಂದ ನೀವು ಏಕೆ ಈ ಪ್ರಯೋಗವನ್ನು ಮಾಡಬಾರದೆಂದು ನಾನು ಕೃಷಿ ಸಚಿವರಿಗೆ ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಅಧ್ಯಕ್ಷರೆ, ಅವರು ಟ್ರಾಕ್ಟರ್ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾ ಬ್ಯಾಂಕುಗಳು ಯಾರಿಗೆ ಉತ್ತೇಜನ ಕೊಡುತ್ತಾರೆಂದರೆ Industrial production materials ಗಳಿಗೆ ಕರೆದು ಕರೆದು ಸಾಲವನ್ನು ಕೊಡುತ್ತಾರೆ. ಒಂದು ಕಾಲಕ್ಕೆ ಟ್ರಾಕ್ಟರ್‌ಗಳು ಬೇಕಾಗಿರಲಿಲ್ಲ. ಬ್ಯಾಂಕುಗಳವರು ಕರೆದು ಕರೆದು ಟ್ರಾಕ್ಟರ್‌ಗಳಿಗೆ ಸಾಲವನ್ನು ಕೊಟ್ಟರು. ಟ್ರಾಕ್ಟರ್ ಸಾಲ ತುಂಬದಿರುವುದಕ್ಕೆ ರೈತರ ಹೊಲಗಳು ಹರಾಜು ಆಗುತ್ತಿವೆ. ಟ್ರಾಕ್ಟರ್‌ಗಳ ಪರಿಸ್ಥಿತಿ ಇದು ಒಂದು ಕಡೆ ಆಗಿದೆ.

ಅಧ್ಯಕ್ಷರು: ನೀವು ಮಾತನಾಡುವಾಗ ಈ ವಿಷಯವನ್ನು ಹೇಳಿ.

ಶ್ರೀ ಬಿ.ಆರ್. ಪಾಟೀಲ್: ಆಯಿತು.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಅವರು ಇಲ್ಲಿ ಹೇಳಿದ್ದಾರೆ. ಕೃಷಿ ಯಂತ್ರೋಪಕರಣಗಳನ್ನು ಸಕಾಲದಲ್ಲಿ ರೈತರಿಗೆ ಬಾಡಿಗೆ ದೊರೆಯುವಂತಾಗಲು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ನೋಂದಾಯಿತ ಚಾರಿಟಬಲ್ ಸಂಘ ಸಂಸ್ಥೆಗಳ, ಸ್ವಸಹಾಯ ಗುಂಪುಗಳು, ಸಹಕಾರ ಸಂಸ್ಥೆಗಳ ಮೂಲಕ ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಬಾಡಿಗೆ ಮುಖಾಂತರ ಕೊಡುವುದಕ್ಕೆ ಇದರ ಬಗ್ಗೆ ಬಜೆಟ್ ನಲ್ಲಿ ಎಷ್ಟು ಹಣವನ್ನು ಈ ವಿಷಯಕ್ಕೆ ಈ ಹೆಡ್‌ಗೆ ಇಟ್ಟಿದ್ದೀರಿ? ಇದು ಏಕಕಾಲದಲ್ಲಿ ಯಾವ ಹಂತದಲ್ಲಿ ಇದನ್ನು ಯಾವ ಮಟ್ಟದಲ್ಲಿ ಪ್ರಾರಂಭ ಮಾಡುತ್ತೀರಿ? ತಾಲ್ಲೂಕು ಮಟ್ಟದಲ್ಲಿ ಪ್ರಾರಂಭ ಮಾಡುತ್ತೀರೋ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಡುತ್ತೀರೋ, ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಮಾಡುತ್ತೀರೋ ಅದನ್ನು ನಿರ್ವಹಣೆ ಮಾಡುವವರು ಯಾರು? ಮತ್ತೆ ಬಾಡಿಗೆ ಕೊಡುವಾಗ what are the terms and conditions, priority ಏನು? ಇದರ ಸಂಪೂರ್ಣ ವಿವರವನ್ನು ನಾನು ತಮ್ಮ ಉತ್ತರದಲ್ಲಿ ಬಯಸುತ್ತಿದ್ದೇನೆ. ಯಾವ ರೀತಿ "ರೈತ ಸ್ನೇಹಿ" ಈ ಕಾರ್ಯಕ್ರಮ ಇವೆಯೋ ಇಲ್ಲವೋ ಎನ್ನುವುದನ್ನು ತಮ್ಮ ಉತ್ತರದ ಮುಖಾಂತರ ನಾವು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಇದು ಏನಾಗುತ್ತದೆಂದರೆ, ಬಜೆಟ್ ಮಾಡುವಾಗ ನಮಗೂ ಇದರ ಅನುಭವ ಇದೆ. ಅಧಿಕಾರಿಗಳಿಗೆ ಯಾವುದಾದರೊಂದು

ಹೊಸ idea ಕೊಡಿ. ಎಂದರೆ ಯಾರೋ ಒಬ್ಬರು ಬರೆದು ಬಿಡುತ್ತಾರೆ. ಅದು ಹಿಂದೂ ಇಲ್ಲ, ಮುಂದೂ ಇಲ್ಲ. ಆಮೇಲೆ ಇದಕ್ಕೆ ಎಷ್ಟು ಬೇಕಾಗುತ್ತದೆಂದು ಕೇಳಿದರೆ, 50 ಕೋಟಿ ರೂ. ಗಳನ್ನು ಈಗ ಇಡಿ ಸರ್, ಸಾಕು ಮತ್ತೆ ಮುಂದೆ ನೋಡೋಣ. ಪ್ರಾಯೋಗಿಕವಾಗಿ ನೋಡಿ ಮುಂದೆ ನೋಡೋಣ. ಈ ತರಹದ ಯೋಜನೆಗಳು ಆಗಬಾರದು. ಇದು ಸಂಪೂರ್ಣ ಚಿಂತನೆ ಇರುವಂಥ, ಅದಕ್ಕೆ ಬಹಳಷ್ಟು ಯೋಚನೆ ಮತ್ತು ಯೋಜನೆ ಎರಡನ್ನೂ ರೂಢಿಸಿಕೊಂಡಿರುವಂಥ ಒಂದು ಕಾರ್ಯಕ್ರಮ ಇದಾಗಬೇಕು. ಎನ್ನುವಂಥ ಕಳಕಳಿ ಮಾತ್ರ ನನ್ನದು. ಇದನ್ನು ತಾವು ಯಾವ ರೀತಿ ನಿರ್ವಹಣೆ ಮಾಡುತ್ತೀರಿ ಎನ್ನುವಂಥದ್ದು ಬಹಳ ಪ್ರಾಮುಖ್ಯ ಇದೆ. ಹೊಸ ತಳಿ ಸಂಸ್ಕರಣೆ ಇದರ ಬಗ್ಗೆ ಬಹಳಷ್ಟು ಜಿಜ್ಞಾಸೆಗಳು ಬರುತ್ತವೆ. ಹೊಸ ತಳಿ ಬಂದಾಗ ಸಹಜವಾಗಿ ಚರ್ಚೆಯಾಗುತ್ತದೆ ಪರ ಮತ್ತು ವಿರೋಧ ಇರುವುದು ಸಹಜವಾಗಿರುತ್ತದೆ. ಆಮೇಲೆ settle down ಆಗುತ್ತದೆ. ಆದರೆ ಇಷ್ಟು ವರ್ಷವಾಗಿದೆ ನಾನು ಬಹಳ ಸರಳವಾಗಿ ಯೋಜನೆ ಮಾಡುವವನು ಅಲ್ಲ. ಒಬ್ಬ ರೈತನಾಗಿ ಯೋಜನೆ ಮಾಡುವವನು. ಆದರೆ ರೈತನಿಗೆ ಗೊತ್ತಿದೆ. ಹೊಲದಲ್ಲಿ ಯಾವಾಗ ಏನು ಬೆಳೆಯಬೇಕು? ಮುಂಗಾರಿಗೆ ಏನು ಬೆಳೆಯಬೇಕು? ಹಿಂಗಾರಿಗೆ ಏನು ಬೆಳೆಯಬೇಕು? ನೀರಾವರಿ ಆದರೆ ಏನು ಬೆಳೆಯಬೇಕು? ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು ? ಎಷ್ಟು ಪ್ರಮಾಣದಲ್ಲಿ ಗೊಬ್ಬರವನ್ನು ಕೊಡಬೇಕು? ನನ್ನ ಪ್ರಕಾರ ನಮ್ಮ ಕೃಷಿ ವಿಜ್ಞಾನಿಗಳಿಗಿಂತ ನಮ್ಮ ರೈತನೇ ನನ್ನ ಪ್ರಕಾರ ಒಂದು ವಿಜ್ಞಾನಿ. ಪ್ರತಿವರ್ಷವೂ ಎಷ್ಟೆಷ್ಟು ವ್ಯತಿರಿಕ್ತವಾದಂಥ ಒಂದು ಕಂಡೀಷನ್‌ದಲ್ಲಿ ಅವನು ತನ್ನ ಪ್ರಯೋಗಗಳನ್ನು ನಿರಂತರವಾಗಿ ಮಾಡುವಂಥ ಒಬ್ಬ ವಿಜ್ಞಾನಿ. University ಯಲ್ಲಿ ನಾವು ಹಲವಾರು ಬಾರಿ ನೋಡುತ್ತೇವೆ. 100 ಎಕರೆಯಲ್ಲಿ ಎಲ್ಲಾ optimum condition ಒಳ್ಳೆಯ soil, ಸಮಯಕ್ಕೆ ಸರಿಯಾಗಿ ನೀರು. ನಲ್ಲಿಯಿಂದ ನೀರು ಬಿಟ್ಟು ಬೆಳೆದು ತೋರಿಸಿ, ಅದರ ಮುಖಾಂತರ capital Investment ಗೆ ಕೃಷಿಯಲ್ಲಿ ನಮ್ಮ ರೈತರಿಗೆ ಅನುಕೂಲವನ್ನು ಮಾಡಿಕೊಡುವಂತಹ ಒಂದು ಪರಿಸ್ಥಿತಿಯನ್ನು ಮಾಡಿದರೆ ನಿಯಂತ್ರಣ ನಿಮ್ಮ ಕೈಯಲ್ಲಿರುತ್ತದೆ. ಆ ಬ್ಯಾಂಕ್ ನಿಮ್ಮ ಕೈಯಲ್ಲಿರುತ್ತದೆ. ಈ ಹಣ ನಿಮ್ಮ ಕೈಯಲ್ಲಿರುತ್ತದೆ. ಏಕೆ ಈ ಪ್ರಯೋಗವನ್ನು ನೀವು ಮಾಡಬಾರದು ಎನ್ನುವಂಥ ಒಂದು ಸಲಹೆಯನ್ನು ನಿಮಗೆ ಕೊಡುವುದಕ್ಕೆ

ನಾನು ಇಚ್ಛೆಪಡುತ್ತೇನೆ. ಇದನ್ನು ದಯವಿಟ್ಟು ನೀವು ಸೀರಿಯಸ್ಸಾಗಿ ತೆಗೆದುಕೊಳ್ಳಿ. ಅಲ್ಲಿಯವರೆಗೆ ನೀವು ರೈತರಿಗೆ ಸಂಪೂರ್ಣವಾಗಿ scale of finance ಕೊಡುವುದಿಲ್ಲ. ಎಲ್ಲಿಯವರೆಗೆ ನೀವು ನಿಮ್ಮ capital Investment ಎಲ್ಲಾ ಮಾಡುತ್ತಾರೆ. ಆದರೆ ಹೊಲಕ್ಕೆ ಬಂದಾಗ ವ್ಯತಿರಿಕ್ತಗಳು ಬೇರೆ. ಏಕೆಂದರೆ ಅಲ್ಲಿ ಕಂಡೀಷನ್‌ಗಳು ಬೇರೆ. ಅದಕ್ಕಾಗಿ farm land ನಲ್ಲಿ ನೀವು research ಮಾಡಿ ಎಂದು ನಾವು ನೀವು ಬಹಳ ಸಲ ಹೇಳಿದ್ದೇವೆ. ಆದರೆ ಅಲ್ಲಿ ಯಾವುದೇ ರೀತಿಯ ದೊಡ್ಡ ಪ್ರಮಾಣದ ಪ್ರಯೋಗಗಳು ರೈತರ ಹೊಲದಲ್ಲಿ ಆಗುತ್ತಿಲ್ಲ. ನಿಮ್ಮ ರೆಕಾರ್ಡಿಗೆ ಬೇಕು. ಕೃಷಿ harvesting ರೈತರು ಸುಗ್ಗಿ ಮಾಡುವಾಗ ಕೃಷಿ ಅಧಿಕಾರಿಗಳು ಬಂದು ಒಂದು ಫೋಟೋ ತೆಗೆಸಿಕೊಂಡರು. ಅದು ಏನು ಮಾಡುತ್ತಾರೆಂದರೆ, ಯಾವುದು ಒಳ್ಳೆಯ ಬೆಲೆ ಬೆಳೆದಂಥ ರೈತರ ಹೊಲಕ್ಕೆ ಹೊಗಿ ಫೋಟೋ ತೆಗೆಸಿಕೊಂಡು ಪೇಪರಿಗೆ ಹಾಕಿಸಿಕೊಂಡು ಬಿಡುತ್ತಾರೆ. ಇದರಿಂದ ನಮಗೆ ಮೋಸ ಆಗುತ್ತಿದೆಯೇ ಹೊರತಾಗಿ ಯಾವುದೇ ರೀತಿಯ ಪ್ರಯೋಜನಗಳು ಆಗುವುದಿಲ್ಲ. ನೀವು ಕೃಷಿ ವಿಜ್ಞಾನಿಗಳಿಗೆ ಯಾವ ರೀತಿಯ ಜವಾಬ್ದಾರಿ ಮತ್ತು ಅಕೌಂಟಬಿಲಿಟಿ ಕೊಡುತ್ತೀರಿ? ಅವರ ಲಕ್ಷ ಏನೆಂದರೆ, funding ಹೇಗೆ funding ತರಬೇಕು? Government of India ದಲ್ಲಿ ಒಂದು scheme ಇದೆ. ಅದನ್ನು ಮಾಡಿದರೆ ನಮಗೆ fund ಬರುತ್ತದೆ. ಅದರಿಂದ ನಮ್ಮ department ನಡೆಯುತ್ತದೆ ಮತ್ತು ಅವರ ಪಗಾರ ನಡೆಯುತ್ತದೆ. ಅದನ್ನು ಮಾತ್ರ ಅವರು ಮಾಡುವುದಕ್ಕೆ ಹೋಗುತ್ತಾರೆ. ಇದು ನಮ್ಮ ಕರ್ನಾಟಕಕ್ಕೆ ಬೇಕಾ? ಇದು ನಮ್ಮ ರೈತರಿಗೆ ಬೇಕಾಗುತ್ತದೆಯಾ? ಇದು ಯಾವುದೂ ಏನೂ ಇಲ್ಲ. ಕೃಷಿ ವಿಶ್ವವಿದ್ಯಾಲಯ ಮತ್ತು ರೈತರು ಭೇಟಿ ಆಗುವುದು ಒಂದೇ ಒಂದು ಟೈಮ್. ಆ ಕೃಷಿ ಮೇಳ ಮಾಡುತ್ತಾರಲ್ಲಾ ಆಗಷ್ಟೇ ಭೇಟಿ ಆಗುತ್ತಾರೆ. ಅದರಲ್ಲಿ ಏನು ಇಟ್ಟಿರುತ್ತಾರೆ? ಈ ಟ್ರಾಕ್ಟರ್ ಕಂಪನಿಯವರನ್ನು ಮತ್ತು equipment ಕಂಪನಿಯವರನ್ನು ಕರೆಸಿ ದೊಡ್ಡ ಪ್ರಮಾಣದಲ್ಲಿ ಇಟ್ಟಿರುತ್ತಾರೆ. ಅದೆಲ್ಲಾ ದೊಡ್ಡ ದೊಡ್ಡ harvesting machines ಗಳು ನಮ್ಮ ರೈತರದ್ದು 2 ಎಕರೆ, 3 ಎಕರೆ, 4 ಎಕರೆ ಇರುತ್ತವೆ. ಇವತ್ತು ತಮ್ಮ ಎಲ್ಲಾ land fragmentation ಆಗಿ ಬಿಟ್ಟಿದೆ. ಅದೊಂದು ದೊಡ್ಡ ಸವಾಲು ನಮ್ಮ ಮುಂದೆ ಇರುವಂಥದ್ದು. Fragmentation of land ಅನ್ನು

ಯಾವ ರೀತಿಯಾಗಿ ನಾವು productivity ಆಗಿ convert ಮಾಡುತ್ತೇವೆ. ಎನ್ನುವಂಥದ್ದು ಅದೊಂದು ದೊಡ್ಡ ವಿಚಾರ. 2 ಎಕರೆ 4 ಎಕರೆ ಇದ್ದಂಥ ರೈತ ಅವರು 5 ಲಕ್ಷ 10 ಲಕ್ಷದ harvesting machine ಆ combination machine ಆ machine ಈ machine ಗಳನ್ನು ನೋಡಿ ಬಹಳ ಸುಧಾರಣೆ ಆಗಿದೆ ಎಂದು ಅವನು ಕನಸು ಕಟ್ಟಿಕೊಂಡು ಬರುತ್ತಾನೆ. ಹಾಗೂ ಸಂತೋಷವಾಗಿ ಪಾಪ ಬರುತ್ತಾನೆ. ಕೃಷಿ ಮೇಳ ಯಶಸ್ವಿಯಾಯಿತು ಎಂದು ಬರುತ್ತಾನೆ. ತಿಂಡಿ, ಊಟ ನಮಗೂ guest house ನಲ್ಲಿ ಚೆನ್ನಾಗಿ ಹಾಕಿ ಬಿಡುತ್ತಾರೆ. ನಾವು ಚೆನ್ನಾಗಿ ಆಯಿತು ಎಂದು ಬಂದು ಬಿಡುತ್ತೇವೆ.

ಅಧ್ಯಕ್ಷರು: ನಮ್ಮ ಮನೆಯ ಹತ್ತಿರ Agriculture University ಇದೆ. ಅವರು ಅಲ್ಲಿ ವಾಕಿಂಗ್ ಬರುತ್ತಿರುತ್ತಾರೆ. ಅವರು ಅಲ್ಲಿ ಹಾಕಿ ರಾಗಿ ಬೆಳೆಸುವುದು, ಶೇಂಗಾ ಬೆಳೆಸುವುದನ್ನು ನಾನು ನೋಡುತ್ತಿರುತ್ತೇನೆ. ಏನು ಈ ತರಹ ಅಂದರೆ ಎಂದು ನೋಡುತ್ತಿರುತ್ತೇನೆ. ಅದರ ಜೊತೆಯಲ್ಲಿ ರಾಷ್ಟ್ರೋತ್ಥಾನ್ ಬೀಜೋತ್ಪತ್ತಿ ಕೇಂದ್ರ, ಕೃಷಿ ವಿಶ್ವವಿದ್ಯಾಲಯದಿಂದ ಇಷ್ಟು ಪ್ರಾಯೋಗಿಕವಾಗಿ ಬೆಳೆಯುವಂಥ ಬೆಳೆಗಳು ಎಷ್ಟು ಮಾದರಿಯಾಗಿ ಇರಬೇಕು. ಆ ಹುಡುಗರನ್ನು ಕಳುಹಿಸುವುದು. Professor ಗಳು ಆ ಮಣ್ಣಿಗೆ ಇಳಿಯುವುದೇ ಇಲ್ಲ.

ಶ್ರೀ ಸಿ.ಟಿ. ರವಿ : ಮಣ್ಣಿಗೆ ಇಳಿದರೆ ಅವರು Professor ಗಳು ಎಂದು ಅನಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ಹೇಳುತ್ತಿರುವುದು ಸರಿ ಇದೆ. 50 ವರ್ಷವಾದರೂ ಸರ್ಕಾರ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಏನು ಮೂಲಭೂತ ಸೌಕರ್ಯಗಳನ್ನು ಕೊಟ್ಟಿದೆ ಹೇಳಿ. ಅದಕ್ಕೆ ಒಂದು ಅಥವಾ ಎರಡು ಕೋಟಿ ರೂ.ಗಳ ಗ್ರಾಂಟ್‌ನ್ನು ಕೊಡುತ್ತೀರಿ. ಅವರು ಇನ್ನೇನು ಬೆಳೆಯುತ್ತಾರೆ ? ಅವರು ಸ್ವಲ್ಪ ಅಲ್ಲಿ ದುಡ್ಡು ಹೊಡೆದುಕೊಳ್ಳಬೇಕು.

ಅಧ್ಯಕ್ಷರು : ಬೆಂಗಳೂರು ವಿಶ್ವವಿದ್ಯಾನಿಲಯ ಇದೆ, ಅಷ್ಟು ಫಲವತ್ತಾದ ಭೂಮಿ ಅಷ್ಟೊಂದು ಚೆನ್ನಾಗಿದೆ.

ಶ್ರೀ ಕೃಷ್ಣ ಭೈರೇಗೌಡ : ಉತ್ತರ ಕೊಡುವ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದರ ಬಗ್ಗೆ ಮಾಹಿತಿ ಇದೆ.

ಶ್ರೀ ಹೆಚ್.ಡಿ. ರೇವಣ್ಣ : ಕೃಷಿ ಇಲಾಖೆಗೆ ಹಣ ಬಿಡುಗಡೆ ಮಾಡಲಾಗಿದೆ ಎಂದು ತಾವು ಹೇಳಿದಿರಿ. ಕೃಷಿ ಅಧಿಕಾರಿಗಳ 1,800 ಹುದ್ದೆಗಳು sanction ಆಗಿದ್ದರೆ 600 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನೂ 1,200 ಹುದ್ದೆಗಳ ಭರ್ತಿ ಬಾಕಿ ಇದೆ.

ಶ್ರೀ ಕೃಷ್ಣ ಭೈರೇಗೌಡ : ತಾವು ಮಾತನಾಡುವಾಗ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರು ಹೇಳಿದ್ದಕ್ಕೆ ಹೇಳಿದೆ.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರು ಹೇಳಿದ್ದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಮಾಹಿತಿ ಪ್ರಕಾರ ಬರೀ ಕೃಷಿ ತೋಟಗಾರಿಕೆ ವಿಶ್ವವಿದ್ಯಾನಿಲಯಗಳಿಗೆ ವರ್ಷಕ್ಕೆ ಸುಮಾರು 700 ಕೋಟಿ ರೂ. ಗಳಿಗಿಂತ ಹೆಚ್ಚಿನ ಹಣ ಹೋಗುತ್ತಿದೆ. ನಮ್ಮ ಸಮಾಜ, ನಮ್ಮ ಸರ್ಕಾರ ಇರುವಂತಹ ಪರಿಸ್ಥಿತಿಗಿಂತ ಹೆಚ್ಚಿಗೆ ಅವರಿಗೆ ಒತ್ತು ಕೊಟ್ಟು ರೈತರಿಗೆ ಒಳ್ಳೆಯದಾಗಲಿ ಎಂದು ನಾವು ಸಹಕಾರ ಕೊಡುತ್ತಿದ್ದೇವೆ. ಹುದ್ದೆಗಳು ಖಾಲಿ ಇರುವುದು ನಿಜ. ಆದರೆ ಎಲ್ಲಾ ಇಲಾಖೆಗಳಲ್ಲಿ ಇದೆ. ಇರುವುದರಲ್ಲಿ ವರ್ಷಕ್ಕೆ 700 ಕೋಟಿ ರೂ. ಗಳನ್ನು ಕೊಡುತ್ತಿದ್ದೇವೆ. ಕಡಿಮೆ ಏನೂ ಇಲ್ಲ.

ಶ್ರೀ ಬಿ.ಆರ್. ಪಾಟೀಲ್: ಬೇಡಿಕೆ ಎಷ್ಟು ?

ಶ್ರೀ ಕೃಷ್ಣ ಭೈರೇಗೌಡ : ತಾವು ಮೊದಲು 700 ಕೋಟಿ. ರೂ.ಗಳಿಂದ ರೈತರಿಗೆ ಏನು ಲಾಭ ಸಿಕ್ಕಿದೆ ಎಂದು ಕೇಳಿ. ಆನಂತರ ಉಳಿದಿದ್ದು ಮಾತಾಡೋಣ. ಅದರಿಂದ ರೈತರಿಗೆ ಎಷ್ಟು ಪ್ರಯೋಜನವಾಗಿದೆ ಎನ್ನುವುದು ಕೇಳಬೇಕಾಗಿದೆ.

ಶ್ರೀ ಜಿ.ಟಿ. ದೇವೇಗೌಡ : ಪ್ರಶ್ನೆ ಕೇಳಿದ್ದು. ಹಿಂದೆ universityಗಳಲ್ಲಿ ಏನು ಹೊಸ ತಳಿಗಳು ಬರುತ್ತಿದ್ದವು. indof Ragi ಇರಬಹುದು, ಭತ್ತ ಇರಬಹುದು, ಎಲ್ಲಾ ಬೆಳೆದು ರೈತರಿಗೆ ಯಾವ ರೀತಿ ಬೆಳೆಯಬೇಕೆಂದು ಪರಿಚಯ ಮಾಡುತ್ತಿದ್ದರು, ತೋರಿಸುತ್ತಿದ್ದರು. ಈಗ ಏನು ಲ್ಯಾಂಡ್‌ಗಳಿವೆ, ಕೃಷಿ ವಿಶ್ವವಿದ್ಯಾನಿಲಯ

ವ್ಯಾಪ್ತಿಯಲ್ಲಿರುವಂತಹ ಭೂಮಿಗಳು ಪಾಳು ಬಿದ್ದಿವೆ. ಅಲ್ಲೇ ಬೆಳೆ ಬೆಳೆದು ತೋರಿಸುತ್ತಿಲ್ಲ. ಅದನ್ನು ಮಾನ್ಯ ಅಧ್ಯಕ್ಷರು ಹೇಳಿದ್ದು, ಹಿಂದೆಯೆಲ್ಲಾ ಯಾವ ರೀತಿ ಇರುತ್ತಿತ್ತು.?

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ ಅದಕ್ಕೇ ನಾನು ಹೇಳುವುದೇನೆಂದರೆ, ಈ ಕೃಷಿ ವಿಶ್ವವಿದ್ಯಾನಿಲಯ campus Idea ದ ಮೇಲೆ ಏನಿದೆ ಅದನ್ನು ತೆಗೆದು ಹಾಕಬೇಕು. ತೋಟಗಾರಿಕೆ ಅಥವಾ ಕೃಷಿ ವಿಶ್ವವಿದ್ಯಾನಿಲಯ ಇರಬಹುದು. ಈ ಕ್ಯಾಂಪಸ್ ಮಾದರಿಯನ್ನು ತೆಗೆದುಹಾಕಬೇಕು. 300-400 ಎಕರೆಯಲ್ಲಿ ಕೃಷಿ ವಿಶ್ವವಿದ್ಯಾನಿಲಯದ್ದು ಎಲ್ಲಾ ಸಂಶೋಧನೆಗಳನ್ನು ಮಾಡುತ್ತೇವೆ. ಆ compound ಒಳಗಡೆಯೇ ಎಲ್ಲಾ ಮಾಡುತ್ತೇವೆ ಎನ್ನುವುದನ್ನು ತೆಗೆದುಹಾಕಿ ಇಡೀ ಕರ್ನಾಟಕವೇ ಅದಕ್ಕೆ ಕ್ಯಾಂಪಸ್ ಆಗಬೇಕು. ಬೇಕಾದರೆ ಏರಿಯಾ restriction ಮಾಡಿ ಬೇಡವೆನ್ನುವುದಿಲ್ಲ ಏನೂ ಒಳ್ಳೆಯ ಕೆಲಸ ಆಗುವುದಿಲ್ಲ. ಎಂದು ಅಲ್ಲಿ ಕೆಲವು ಕಡೆ ಒಳ್ಳೆಯ ಕೆಲಸಗಳು ಆಗುತ್ತಿವೆ. ಉದಾಹರಣೆಗೆ ನಾನು ಮೊನ್ನೆ ರಾಯಚೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಹೋಗಿದ್ದೆ. ಅದು ಹೊಸದಾಗಿ ಪ್ರಾರಂಭವಾಗಿರುವಂತಹ ಕೃಷಿ ವಿಶ್ವವಿದ್ಯಾಲಯ 2-3 ವರ್ಷಗಳಿಂದ ಚಟುವಟಿಕೆ ಮಾಡುತ್ತಿದ್ದಾರೆ. ಆದರೆ ಅವರು ಐ.ಟಿ. ಯನ್ನು ಎಷ್ಟು ಚೆನ್ನಾಗಿ ಜೋಡಿಸಿಕೊಂಡಿದ್ದಾರೆ. ಒಂದು ಸಣ್ಣ tablet ನಲ್ಲಿ ಎಂದರೆ, ನೀವು ಯಾವುದಾದರೂ ಭೂಮಿಗೆ ಹೋಗಿ ಅಲ್ಲಿ ಯಾವ ಬೆಳೆ ಬೆಳೆಯಲಾಗಿದೆ. ರೈತರ ಹೆಸರು, ಸರ್ವೆ ನಂಬರ್ ಅವರೇ ಹಾಕಿಕೊಂಡು ಇಂತಹ ಬೆಳೆ ಬೆಳೆಯಲಾಗಿದೆ. ಅದಕ್ಕೆ ಇಂತಹ ರೋಗ, nature of ರೋಗ ಏನಾಗಿದೆ ಎಂದು ಸಾಮಾನ್ಯ ರೈತನಿಗೆ ಅರ್ಥವಾಗುವ ರೀತಿಯಲ್ಲಿ ಸುಮ್ಮನೆ tick ಮಾಡಿಕೊಂಡು ಹೋದರೆ ಇಂಥದೇ ರೋಗ ಅದಕ್ಕೆ ಆಗಿದೆ ಎಂದು ಅವನಿಗೆ ಗೊತ್ತಾಗುತ್ತದೆ. ಅದನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ connection ಮಾಡಿದ್ದಾರೆ. ಅದಕ್ಕೆ ಏನೇನು ಕೊಡಬೇಕು, ಏನೇನು ಕೊಡಬಾರದು ಎಂದು ತಕ್ಷಣ ಅವನಿಗೆ ಜ್ಞಾಪಕ ಬರುತ್ತದೆ. ಬಹಳ ಒಳ್ಳೆಯ ಕೆಲಸ ರಾಯಚೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾಡಿದ್ದಾರೆ. ಇದನ್ನು ಎಲ್ಲಾ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಬೇಕು. ಭಾರತ ಸರ್ಕಾರದಲ್ಲಿಯೂ ಕೂಡ ಅದನ್ನು ಅಳವಡಿಸಬೇಕೆಂದು ಚಿಂತನೆ ಮಾಡುತ್ತಿದ್ದಾರೆ. ಬಹಳ ಸುಲಭವಾಗಿದೆ.

ಸಾಮಾನ್ಯ ರೈತನಿಗೆ ಅರ್ಥವಾಗುವ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಶ್ಲಾಘನೀಯವಾದ ಕೆಲಸವನ್ನು ಅವರು ಮಾಡಿದ್ದಾರೆ. Lab to land connection ಏನಿದೆ ಈ ತರಹ ಆಗಬೇಕು. ಕ್ಯಾಂಪಸ್ ಹೊರಗಡೆಯೂ ಕೂಡ ಆಗಬೇಕು. ಆ ರೀತಿ ಕೆಲಸ ಮಾಡುವುದಕ್ಕೆ ತಾವು ಹೆಚ್ಚಿನ guidance ದಯವಿಟ್ಟು ಕೊಡಬೇಕು. ವಿಶ್ವವಿದ್ಯಾನಿಲಯ ಅವರದೊಂದು autonomous ಇದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ರೈತರಿಗೆ ಸಂಬಂಧವಿರುವುದರಿಂದ ಸರ್ಕಾರ ಸರಿಯಾದ ಸಂದರ್ಭದಲ್ಲಿ ಅವರಿಗೆ guidance ಕೊಡುವಂತಹ intervention ಮಾಡಬೇಕಾಗುತ್ತದೆ. ನೀವು university ವ್ಯವಹಾರದಲ್ಲಿ interfere ಆಗಬೇಡಿ intervene ಆಗಿ, ಏನೂ ಆಗುವುದಿಲ್ಲ. ಆ ಕೆಲಸವನ್ನು ತಾವು ಮಾಡಿದರೆ ಮಾತ್ರ ಸುಧಾರಣೆಯಾಗುತ್ತದೆ. 70% ನಮ್ಮದು dryland ಇದೆ. ಉಳಿದದ್ದು irrigation, semi-irrigation, tank irrigations, Bore well ಇದೆ. ಶೇ. 75 ರಷ್ಟು ಆಹಾರ ಉತ್ಪಾದನೆ ಮಾಡುವುದು ನಮ್ಮ dry land ನಲ್ಲಿ. ಇವತ್ತು ಆ dry land ಅಭಿವೃದ್ಧಿಗೆ ಯಾವುದೇ ರೀತಿಯ ಕಾರ್ಯಕ್ರಮಗಳು, ಒತ್ತುಗಳು ಇಲ್ಲ. ಹೆಸರಿಗೆ ಬೇಕಾದಷ್ಟು ಕಾರ್ಯಕ್ರಮಗಳು ಇವೆ. ಆದರೆ ಆ dry land development ಎಂದು ಮೊದಲು ಏನು concept ಇತ್ತು ಅದು ಸಂಪೂರ್ಣವಾಗಿ ನಿಂತುಹೋಗಿದೆ.

ಅಧ್ಯಕ್ಷರು: ಈಗ ಏನೋ ವಲಯ ಮಾಡಿದ್ದಾರಲ್ಲಾ ?

ಶ್ರೀ ಬಸವರಾಜ್ ಬೊಮ್ಮಾಯಿ : ಹೌದು ಸರ್. ವಲಯ ಮಾಡಿದ್ದಾರೆ.

ಅಧ್ಯಕ್ಷರು: ಮುಖ್ಯ ಒಣ ಭೂಮಿ ವಲಯಗಳ 45 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಎಂದು ಪುಟ ಸಂಖ್ಯೆ 11 ರಲ್ಲಿದೆ.

ಶ್ರೀ ಬಸವರಾಜ್ ಬೊಮ್ಮಾಯಿ : ಹೌದು ಇದೆ. ರಾಗಿ, ಜೋಳ, ವಲಯಗಳು, agro, climatic condition ಆಗಲೇ ನಾನು ಹೇಳಿದೆನಲ್ಲಾ, ಅದನ್ನೇ ಅವರು ಹೇಳುತ್ತಿದ್ದಾರೆ. ಅವರೆ ಇಷ್ಟು ದೊಡ್ಡ ಪ್ರಮಾಣದ dry land ಯಾವ ರೀತಿ scientific ಆಗಿ development ಆಗಬೇಕಾಗಿತ್ತು. ಆ ರೀತಿ ಆಗುತ್ತಿಲ್ಲ. ಭೂ ಚೇತನ, ಒಂದು ಒಳ್ಳೆಯ ಕಾರ್ಯಕ್ರಮ ನಮ್ಮ ಸರ್ಕಾರ ಇದ್ದಾಗ ಪ್ರಾರಂಭವಾಗಿದ್ದು

ತಾವು continue ಮಾಡಿದ್ದೀರಿ. ಒಳ್ಳೆಯ ಕೆಲಸ ಮಾಡಿದ್ದೀರಿ. 'ಭೂ ಚೇತನ' ಕಾರ್ಯಕ್ರಮಕ್ಕೆ ಇವತ್ತು ರಾಷ್ಟ್ರಮಟ್ಟದಲ್ಲಿಯೂ ಕೂಡ recognition ಬಂದಿದೆ. ಅದರಿಂದ ಉತ್ಪಾದನೆ ಹೆಚ್ಚಾಗುವುದಕ್ಕೆ ಬಹಳಷ್ಟು ಅನುಕೂಲತೆಯಾಗಿದೆ. ಅದನ್ನು ಬೇರೆ ರಾಜ್ಯಗಳೂ ಕೂಡ ಅಳವಡಿಸುವುದಕ್ಕೆ ಇಲ್ಲಿಗೆ ಬಂದು ಪ್ರಯೋಗಗಳನ್ನು ಕೂಡ ನೋಡಿಕೊಂಡು ಹೋಗಿದ್ದಾರೆ.

ಅಧ್ಯಕ್ಷರು: ನಾನು ಒಂದು ಹಳ್ಳಿಗೆ ಹೊಗಿ ಭೂ ಚೇತನ ಎಂದರೆ ಏನು ಎಂದು ಕೇಳಿದೆ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ ಹೆಸರುಗಳು ತಮ್ಮ ಮಟ್ಟದಲ್ಲಿರುತ್ತದೆ. ರೈತರಿಗೆ ಭೂ ಚೇತನ ಎಂದು ಕೇಳಿದರೆ ಅವರಿಗೆ ಏನು ಗೊತ್ತಾಗುತ್ತದೆ? ಭೂ ಚೇತನ ಎಂದು ಹಳ್ಳಿಗಳಲ್ಲಿ ಬೋರ್ಡ್ ಹಾಕಿರುತ್ತಾರೆ. ಭೂ ಚೇತನ ಎಂದರೆ ಭೂಮಿಗೆ ಚೇತನ ಕೊಡುವಂಥದ್ದು ಯಾವ್ಯಾವುದೂ nutrients ಇಲ್ಲ, ಅದನ್ನು ಚೆಕ್ ಮಾಡಿ ಸರಿಯಾದ ರೀತಿಯಲ್ಲಿ ಸರಿಯಾದ ಪ್ರಮಾಣದಲ್ಲಿ ಕೊಡುವುದು ಭೂ ಚೇತನ ಕಾರ್ಯಕ್ರಮ. ಹಿಂದೆಲ್ಲಾ ಈ ರೀತಿ ಕೆಲವು ಪ್ರಯೋಗಗಳನ್ನು ಮಾಡಿಕೊಂಡು ಬಂದಿದ್ದಾರೆ. ಇದೇನು ಹೊಸದೇನಲ್ಲ. Soil Health Card ಎನ್ನುವಂಥ concept .... ಇದೆ. ಸ್ವಾಮಿನಾಥನ್‌ರವರು Soil Health Card ಬಗ್ಗೆ ಮಾತನಾಡಿ 30 ವರ್ಷ ಆಗಿದೆ. ನಾನು ನೀರಾವರಿ ಸಚಿವನಾಗಿದ್ದಾಗ ಕೃಷಿ ಇಲಾಖೆಯಿಂದ ಅದನ್ನು ಮಾಡಿಸಬೇಕೆಂದು ಬಹಳ ಪ್ರಯತ್ನ ಮಾಡಿದೆ ಅದು ಆಗಲಿಲ್ಲ. ಏಕೋ ಕೃಷಿ ಇಲಾಖೆಯವರು ಒಂದು ರೀತಿಯಲ್ಲಿ ದಿನನಿತ್ಯದ ಕಾರ್ಯಕ್ರಮಗಳನ್ನು ಮಾಡಬೇಕೆಂದರೆ ಬಹಳ ಹಿಂದೇಟು ಹಾಕಿದ್ದಾರೆ. ಅದರು seasonal ಹೇಗೆ ನಮ್ಮ university professor ಗಳು seasonal ಇರುತ್ತಾರೆ. summer holidays ಬಂದರೆ ಅವರು ಏನೂ ಕೆಲಸ ಮಾಡುವುದೇ ಇಲ್ಲ. ಅವರಿಗೆ mindest ಇರುವುದಿಲ್ಲ. ನಾನೂ ಊರಿಗೆ ಹೋಗಬೇಕೆಂದು ಇರುತ್ತಾರೆ. ಇಲ್ಲಪ್ಪಾ ಒಂದೆರಡು ಕ್ಲಾಸ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುತ್ತಾರೆ. ಆ ರೀತಿ ಕೃಷಿ ಇಲಾಖೆಯೂ seasonal ಮುಂಗಾರು, ಹಿಂಗಾರು, ಮಧ್ಯದಲ್ಲಿ ಅವರಿಗೆ

ಕೆಲಸ ಮಾಡಬೇಕೆನ್ನುವ ಕಲ್ಪನೆಯೇ ಇರುವುದಿಲ್ಲ. Soil Health Card ಮಾಡಿ ಎಂದು ನಾವು ಹೇಳಿದರೂ ಕೂಡ ಮಾಡುತ್ತೇವೆ ಎಂದು ಹೇಳಿದರು. ಕೆಲವು ಕಡೆ ಮಾಡಲು ಪ್ರಯತ್ನ ಮಾಡಿದರು. ಯಾವುದೂ ಸಮರ್ಪಕವಾಗಿ ಆಗಲಿಲ್ಲ. ಕೊನೆಗೆ ನಮ್ಮ ಇಲಾಖೆಯಿಂದ ನಾವು ಮಾಡಿಸಿದೆವು. ಕಬಿನಿಯಲ್ಲಿ ಸುಮಾರು 6,000 ಎಕರೆ ಮತ್ತು ಉತ್ತರ ಕರ್ನಾಟಕದ ಘಟಪ್ರಭದಲ್ಲಿ 2,000 ಎಕರೆಯನ್ನು ನಾವು ಮಾಡಿಸಿದ್ದೇವೆ. ಅದು ನಿರಂತರವಾಗಿ ನಡೆಯಬೇಕಲ್ಲ. Soil Health Card ಎಂದರೆ ಮಣ್ಣಿನಲ್ಲಿ ಇರುವಂತಹ ಮಣ್ಣಿನಲ್ಲಿ ನೀರಿನ ಅಂಶ, ಯಾವ್ಯಾವುದು ಉಪ್ಪಿನ ಅಂಶ ಏನೇನು ಇದೆ, ಏನೇನು ಇಲ್ಲ, ಅದಕ್ಕೆ ಏನೇನು ಹಾಕಬೇಕು? ಅದನ್ನು 6 ತಿಂಗಳಿಗೊಮ್ಮೆ test ಮಾಡಿ, season ಗಿಂತ test ಮಾಡಿ ಮುಂಗಾರಿಗೆ ಯಾವ ರೀತಿ ಮಣ್ಣು ಇರಬೇಕು, ಹಿಂಗಾರಿಗೆ ಯಾವ ರೀತಿ ಇರಬೇಕು, ನೀರಿನ ಪ್ರಮಾಣ ಎಷ್ಟು ಇರಬೇಕು, ಜಾಸ್ತಿ ಕೊಟ್ಟರೂ ಕಷ್ಟ, ಕಡಿಮೆ ಕೊಟ್ಟರೂ ಕಷ್ಟ. ಅದಕ್ಕೆ hydro-limitations ಎಲ್ಲವನ್ನೂ 6,000 ಎಕರೆಗೆ ನಾವು scientific ಆಗಿ ಮಾಡಿದ್ದೇವೆ. ಅದರಿಂದ ಉತ್ಪಾದನೆ ಹೆಚ್ಚಾಗಿದೆ, ಆದರೆ ಇಡೀ ರಾಜ್ಯ ವ್ಯಾಪ್ತಿಯಲ್ಲಿ ಕೃಷಿ ಇಲಾಖೆ ಮಾಡಬೇಕು. ಮಾಡುವುದಕ್ಕೆ ಸಾಧ್ಯತೆ ಇದೆ. Mobile soil testing equipments ಬಂದಿದೆ. ಅದನ್ನು ಬಳಕೆ ಮಾಡಬಹುದು. ಮಾನ್ಯ ಕೃಷಿ ಸಚಿವರೆ, ನೀವು ಎಷ್ಟು ದಿವಸಗಳಲ್ಲಿ ಇಡೀ ರಾಜ್ಯಕ್ಕೆ ಒಂದು ವರ್ಷ ತೆಗೆದುಕೊಳ್ಳುತ್ತೀರೋ, ಎರಡು ವರ್ಷ ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ. ಎಷ್ಟು ದಿವಸಗಳಲ್ಲಿ ನಮ್ಮ ರಾಜ್ಯದ ಪ್ರತಿಯೊಂದು ಸರ್ವೆ ನಂಬರ್‌ಗೆ Soil Health Card ಅನ್ನು ನಾನು ಮಾಡುತ್ತೇನೆ ಎನ್ನುವ ಒಂದು ಆಶ್ವಾಸನೆಯನ್ನು ಈ ಸದನದ ಮುಖಾಂತರ ಈ ರಾಜ್ಯದ ರೈತರಿಗೆ ತಾವು ಕೊಡಬೇಕು. This is What I demand from you. ಇದನ್ನು ಒಂದು ಸಂಕಲ್ಪ ಮಾಡಿ ತಾವು ದಯವಿಟ್ಟು ಮಾಡಿ ಅದು ಏಕೆ ಆಗುವುದಿಲ್ಲ ನಾವು ನೋಡುತ್ತೇವೆ. ನಾವೆಲ್ಲರೂ ಸಹಕಾರ ಕೊಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಎಲ್ಲಾ ಇಲಾಖೆಯ ಸಹಕಾರವನ್ನು ತೆಗೆದುಕೊಳ್ಳಿ. ನಿಮಗೆ ಸಿಬ್ಬಂದಿ ಕಡಿಮೆ ಇದ್ದರೆ ಬೇರೆ ಇಲಾಖೆಯ ಸಿಬ್ಬಂದಿಗಳನ್ನು ತೆಗೆದುಕೊಳ್ಳಿ. ಒಂದು warfooting ನಲ್ಲಿ Soil Health Card ಅನ್ನು ಏಕೆ ಮಾಡುವುದಕ್ಕೆ ಸಾಧ್ಯವಿಲ್ಲ? ದಯವಿಟ್ಟು ಮಾಡಿ. ಇದು ರೈತನನ್ನು ನಿಜವಾಗಿಯೂ ಕೂಡ ಜಾಗೃತಿ ಮಾಡುವಂಥದ್ದು ನಾವು 28 ಕಾರ್ಯಕ್ರಮಗಳನ್ನು ಮಾಡುವುದಕ್ಕಿಂತ ರೈತರಿಗೆ ಅವರ report card ಅವರ ಮುಂದಿಟ್ಟರೆ, ಅವರೇ ಮುಂದಿನದೆಲ್ಲಾ ನಿರ್ವಹಣೆ ಮಾಡಿಕೊಳ್ಳುತ್ತಾರೆ. ಮಾನ್ಯ ನೀರಾವರಿ ಸಚಿವರು ನಗುತ್ತಿದ್ದಾರೆ. ಅವರಿಗೆ ಏನು? ಅವರು ಆರಾಮಾಗಿದ್ದಾರೆ. ಯಾವ್ಯಾವಾಗ ಬೇಕಾದರೂ ನೀರು ಬಿಟ್ಟುಕೊಂಡು ಇರುತ್ತಾರೆ. ಕೃಷಿ ನಿಮಗೆ ಸಂಬಂಧವಿದೆ. ದಯವಿಟ್ಟು ತಾವು ಮಾನ್ಯ ಜಾರ್ಜ್‌ರವರ ಪಕ್ಕದಲ್ಲಿ ಕುಳಿತುಕೊಳ್ಳದಿದ್ದರೆ ಈ ಸದನಕ್ಕೆ ಒಳ್ಳೆಯದು. ಮಾನ್ಯ ಅಧ್ಯಕ್ಷರೆ, ಈ Soil Health Card ಬಗ್ಗೆ ಮಾನ್ಯ ಸಚಿವರು ಗಂಭೀರವಾಗಿ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೃಷಿಯಲ್ಲಿ ಸುಗ್ಗಿಯ ಕಾಲ ಮತ್ತು ಸುಗ್ಗಿಯ ನಂತರದ ವಿಚಾರಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಮ್ಮ ರೈತನಿಗೆ ಮಾನಸಿಕವಾಗಿ ಏನಿದೆ ಎಂದರೆ ತಾನು ಹೊಲವನ್ನು ಅರಗಿ, ಉತ್ತಿ ಬಿತ್ತಿ, ಬೆಳೆದು ಸುಗ್ಗಿಯನ್ನು ಮಾಡಿದರೆ ಅವನಿಗೆ ದೊಡ್ಡ ಭಾರ ಇಳಿದಂತಾಗುತ್ತದೆ. ಆದರೆ ನಿಜವಾಗಿಯೂ ಕೂಡ ಸುಗ್ಗಿಯ ಕಾಲದಲ್ಲಿಯೇ ಕೆಲಸ ಪ್ರಾರಂಭವಾಗುವುದು. post Harvest ಎಂದು ನಾವೇನು ಕರೆಯುತ್ತೇವೆ ಅದು ಬಹಳ ಮುಖ್ಯ. ಆದರೆ ಇದುವರೆಗೂ ಕೃಷಿ ಇಲಾಖೆಯಾಗಲಿ, ರಾಜ್ಯ ಸರ್ಕಾರಗಳಾಗಲಿ, ಅಥವಾ ಕೇಂದ್ರ ಸರ್ಕಾರಗಳಾಗಲಿ ಈ post Harvest ಬಗ್ಗೆ, ಸುಗ್ಗಿಯ ನಂತರದ ಚಟುವಟಿಕೆಗಳ ಬಗ್ಗೆ ಯಾವುದೇ ರೀತಿಯಾಗಿ ಗಾಂಭೀರ್ಯತೆಯನ್ನು ಪ್ರದರ್ಶನ ಮಾಡಿಲ್ಲ. ಎಲ್ಲರೂ ಮಾತನಾಡುತ್ತಾರೆ. fordward linkage ಎಂದು ಮಾತನಾಡುತ್ತಾರೆ. market linkage ಎಂದು ಮಾತನಾಡುತ್ತಾರೆ. ಆದರೆ ನೀವು ಏನು infrastructure create ಮಾಡಿದ್ದೀರಿ? ಈಗ ಒಬ್ಬ industry ಗೆ ಅವನು ಏನು ಪದಾರ್ಥ ಬೆಳೆಯುತ್ತಾನೆ. ಅದನ್ನು ಇಟ್ಟುಕೊಳ್ಳುವುದಕ್ಕೆ ವ್ಯವಸ್ಥೆ ಇರುತ್ತದೆ.

transportation ವ್ಯವಸ್ಥೆ ಇರುತ್ತದೆ. ಸರಿಯಾದ ರೇಟ್ ಬಂದಾಗ ಮಾರುವಂಥಹ ವ್ಯವಸ್ಥೆ ಇರುತ್ತದೆ. ಆದರೆ ಒಬ್ಬ ಕೃಷಿ ಬೆಳೆದವನಿಗೆ ಆ ವ್ಯವಸ್ಥೆಯು ಇವತ್ತು ಇಲ್ಲ. State Warehousing Corporation ಇದೆ. ಅದು ತಮ್ಮ ಇಲಾಖೆಗೆ ಬರುವುದಿಲ್ಲ. ಅದಕ್ಕೆ ತಾವು Co-operation Minister ಕಡೆಯಿಂದ ಉತ್ತರವನ್ನು ತರಿಸಿಕೊಂಡು ಹೇಳಬೇಕು. ರಾಜ್ಯದ ಒಟ್ಟು ಉತ್ಪಾದನೆಯನ್ನು ನಮ್ಮ State Warehousing Corportion ಹಿಡಿದುಕೊಳ್ಳುತ್ತದೆ. Ware-houseing Corporation store ಮಾಡುವಂತಹ capacity ನಮ್ಮ ರಾಜ್ಯದ ಒಟ್ಟು ಉತ್ಪಾದನೆಯು ಎಷ್ಟು ಇದೆ ಎಂದು ಹೇಳಬೇಕು. ನನ್ನ ಪ್ರಕಾರ ಹೇಳುವುದಾದರೆ ಅದು 10% ಇಲ್ಲ. ಇದಕ್ಕೆಲ್ಲವೂ ಕೂಡ private ನಲ್ಲಿ ಬೇರೆ ಬೇರೆ ವ್ಯವಸ್ಥೆಯಲ್ಲಿ ರೈತರುಗಳು ಮಾಡಿಕೊಳ್ಳುತ್ತಿದ್ದಾರೆ. ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಗೋವಿನ ಜೋಳವನ್ನು ಖರೀದಿ ಮಾಡಿ ಎಂದು ಹೇಳಿದೆವು. ಅವರು ಖರೀದಿ ಮಾಡಿದರು. ಆದರೆ ಖರೀದಿ ಮಾಡಿರುವುದನ್ನು ಇಡುವುದಕ್ಕೆ ಜಾಗವಿಲ್ಲ, ಎಲ್ಲಾ private godown ಗಳು ಸರ್ಕಾರಿ godown ಗಳು ನಮ್ಮಲ್ಲಿ ಎರಡು ದೊಡ್ಡ indoor stadium ಗಳು ಇವೆ. indoor stadium ಸಮೇತವಾಗಿ ಇವತ್ತು ಗೋವಿನ ಜೋಳ ಇದೆ. ಇದರ ಬಗ್ಗೆ ಯಾಕೆ ಚಿಂತನೆ ಇಲ್ಲ. ನಮ್ಮ ರಾಜ್ಯದಲ್ಲಿ ಬೆಳೆದಿರುವುದಕ್ಕೆ ನಮಗೆ Storage ಇಲ್ಲ. ಇನ್ನು ಬೇರೆ ರಾಜ್ಯದಿಂದ ಆಹಾರ ಪದಾರ್ಥಗಳು ನಾವು ತೆಗೆದುಕೊಂಡು ಬಂದು ವಿತರಣೆ ಮಾಡಬೇಕಾಗುತ್ತದೆ, PDS ಒಂದು ದೊಡ್ಡ ಸಮಸ್ಯೆ. ಆದ್ದರಿಂದ ಕನಿಷ್ಠ ಪಕ್ಷ ನಮ್ಮ ರಾಜ್ಯದಲ್ಲಿ ಬೆಳೆದಿರುವಂತಹ 50% ಆದರೂ ಸರ್ಕಾರಿ ವಲಯದಲ್ಲಿಟ್ಟುಕೊಳ್ಳುವಂತಹ ವ್ಯವಸ್ಥೆಯಾಗಬೇಕು. ಇನ್ನು 50% ಅನ್ನು ಅನ್ನು private ನಲ್ಲಿ ಮಾಡಲಿ. ಕನಿಷ್ಠ ಪಕ್ಷ ಅಷ್ಟಾದರೂ ಕೂಡ ಆಗಬೇಕಾಗಿದೆ. ಅದರ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ಅದಕ್ಕಾಗಿ private investment ತೆಗೆದುಕೊಳ್ಳಿ. ಅದಕ್ಕೇನು ನೀವು ಸಹಾಯಧನ ಕೊಡುತ್ತೀರೋ, ಏನು programme ಮಾಡುತ್ತೀರೋ ಮಾಡಿ. ನೀವು ಯಾವ ರೀತಿಯಾಗಿ industries ಗೆ ಸಹಾಯಧನವನ್ನು ಕೊಡುತ್ತೀರೋ ಈ ತರಹ ಸಹಾಯಧನವನ್ನು ಇದಕ್ಕೆ ಕೊಡಿ. ಅದನ್ನು ತಾವು ಉಪಯೋಗ ಮಾಡಿಕೊಳ್ಳಿ, ನಿಮ್ಮ ಲಾಭವನ್ನು ತೆಗೆದುಕೊಳ್ಳಿ,

ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದನ್ನು ಸ್ಥಾಪನೆ ಮಾಡಬೇಕು. ಎಲ್ಲಾ APMC ಯಲ್ಲಿ Ware housing Corporations ನ ಸಣ್ಣ ಸಣ್ಣ ಗೋಡನ್‌ಗಳಿವೆ. ದೊಡ್ಡ ದೊಡ್ಡ Silos ಇಲ್ಲವೇ ಇಲ್ಲ. ಈ ರಾಜ್ಯದಲ್ಲಿ ಬಹುತೇಕವಾಗಿ ಬೆಂಗಳೂರು ಬಿಟ್ಟರೆ ಎಲ್ಲಿಯೂ ಕೂಡ Silos ಇಲ್ಲ. Silos ಇಲ್ಲದೆ, ನಾವು ಮುಂದೆ ಯಾವ ರೀತಿಯಾಗಿ ಆಹಾರವನ್ನು ವಿತರಣೆ ಮಾಡುವುದಕ್ಕೆ ಸಾಧ್ಯ? ನೀವೆಲ್ಲರೂ young Minister ಇದ್ದೀರಿ, ಏತಕ್ಕೆ ನೀವು ಚಿಂತನೆ ಮಾಡುವುದಿಲ್ಲ? ದಯವಿಟ್ಟು ಮಾಡಬೇಕು. ಹಿಂದಿನವರು ಮಾಡಿಲ್ಲ. ಆಗ ಏನೂ ಮಾಡಿಲ್ಲ, ಆ ರೀತಿಯಾದ ಉತ್ತರ ಬೇಡ. ನಾನು ಇರುವಂತಹ ಸತ್ಯವನ್ನು ಹೇಳಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು) : ಹಿಂದಿನ ಸರ್ಕಾರದಲ್ಲಿ ನೀವು ಏತಕ್ಕಾಗಿ advise ಮಾಡಲಿಲ್ಲ?

ಶ್ರೀ ಬಸವರಾಜ್ ಬೊಮ್ಮಾಯಿ : ನಾವು ಏನಾದರೂ ಹೇಳುವುದಕ್ಕೆ ಹೋದರೆ ಅದು ತಪ್ಪಾಗುತ್ತದೆ. ಭೂಚೇತನ ಕಾರ್ಯಕ್ರಮವು ನಮ್ಮದು. ಸುವರ್ಣಭೂಮಿ ಕಾರ್ಯಕ್ರಮವು ನಮ್ಮದು. ಯಾವ್ಯಾವಾಗ ಒಳ್ಳೆಯ ಕಾರ್ಯಕ್ರಮ ಮಾಡಬೇಕೋ ಅದನ್ನು ಮಾಡಿದ್ದೇವೆ. ಮುಂದೆ ಏನೂ ಮಾಡಬೇಕೋ ಅದನ್ನು ನೀವು ಮಾಡಿ. ನಾನು ಕೃಷ್ಣಭೈರೇಗೌಡರು Young Minister ಆಗಿದ್ದಾರೆ. ಅವರು ಒಳ್ಳೆಯ ಕೆಲಸವನ್ನು ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲಿ, ಎಂದರೆ ನಿಮಗೆ ಏಕೆ ಅಷ್ಟು ಅಸೂಯೆ? ಪಾಪ ನಾನು ಅವರಿಗೆ ಒಳ್ಳೆಯ ಸಲಹೆಯನ್ನು ಕೊಟ್ಟು ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. warehousing increase ಆಗಿದ್ದೇ ಆವಾಗ. ನಬಾರ್ಡ್‌ನಲ್ಲಿ ಅತಿ ಹೆಚ್ಚು ದುಡ್ಡು ಕೊಟ್ಟಿರುವುದು ನಾವೇ ನಿಮ್ಮ ಹಿಂದಿನ ಕಾಂಗ್ರೆಸ್ ಸರ್ಕಾರ ಮಾಡದೇ ಇರುವುದನ್ನು ನಾವು ನಮ್ಮ ಕೈಲಾದಷ್ಟು ಮಾಡಿದ್ದೇವೆ. ಹಿಂದಿನವರು ಮಾಡಿಲ್ಲವೆಂದು ನೀವು ಬಿಡುತ್ತೀರಾ? ನೀವು ಮಾಡಿಲ್ಲ ನಾವು ಮಾಡಿಲ್ಲ ಎಂದು ಹೇಳಿಬಿಡಿ. ಈ ಮನೆಯಲ್ಲಿ ಒಂದು ನಿರ್ಣಯ ಆಗಿಬಿಡಲಿ.

ಉಪಾಧ್ಯಕ್ಷರು : ಮಾನ್ಯ ಬೊಮ್ಮಾಯಿಯವರೆ, ತಾವು ವಿಷಯಕ್ಕೆ ಬಂದು ಮಾತನಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ : ನಾನು ಸರ್ಕಾರಕ್ಕೆ ಒಳ್ಳೆಯ ಸಲಹೆಯನ್ನು ಕೊಡುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಎಂ.ಬಿ. ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಕೃಷಿ ಇಲಾಖೆಗೆ ಏನೇನು ಒತ್ತು ಕೊಟ್ಟಿದ್ದರು? ಯಾವ ಆಫೀಸಿಗೆ ಹೋದರೂ ಅಧಿಕಾರಿಗಳು ಇಲ್ಲ Assistant Director ಇಲ್ಲ, ಕೃಷಿ ಅಧಿಕಾರಿಗಳು ಇದ್ರಾ ಕೇಳಿ. Horticulture Department ನಲ್ಲಿ ಇದ್ರಾ? ಕೃಷಿ ಇಲಾಖೆಯಲ್ಲಿ ಇದ್ರಾ? ಸಮ್ಮಿಶ್ರ ಸರ್ಕಾರವು ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಮಾತ್ರ ಮಾಡಿದ್ದೇವೆ. ತಾವು ಈ ಬಗ್ಗೆ ಅರ್ಥ ಮಾಡಿಕೊಳ್ಳಿ. ನೀವು ಏನು ಮಾಡಿದ್ದೀರಿ ಎನ್ನುವುದನ್ನು ಈ ಬಗ್ಗೆ ಕೃಷಿ ಮಂತ್ರಿಗಳು ಹೇಳುತ್ತಾರೆ ಪಾಪ, ನೀವು ನೀರಾವರಿಯ ಬಗ್ಗೆ ನೀವು ತಲೆಕೆಡಿಸಿಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ : ಅದಕ್ಕಿಂತಲೂ ನೀವು ಹಿಂದೆ ಇದ್ದೀರಿ, ನೀವು ಏನು ಮಾಡಿದ್ದೀರಿ ಎಂದು ಕೇಳುವುದು ಬೇಡ. ಅದಕ್ಕಿಂತಲೂ ಮುಂಚೆ ನೀವು ಇದ್ದೀರಿ. ನೀವು ಏನು ಮಾಡಿದ್ದೀರಿ ಎಂದು ಕೇಳಿದರೆ ಮಾನ್ಯ ಎಂ.ಬಿ. ಪಾಟೀಲ್ ರವರೆ, ಇದು ಒಬ್ಬ ಪ್ರಗತಿ ಪರ ಚಿಂತನೆ ಮಾಡುವಂತಹ ಮಂತ್ರಿಯ ಲಕ್ಷಣ ಅಲ್ಲ. ನೀವು ಸಣ್ಣ ವಯಸ್ಸಿನವರಾಗಿದ್ದೀರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಭೂಮಿ ತಾಯಿ ಇದ್ದಂಗೆ, ನೀವು ತಂದೆ ಇದ್ದಂಗೆ ಅದಕ್ಕೆ ಅವರು ನೀರು ನೋಡಿ ಮಾತನಾಡುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ : ಅಪ್ಪನೂ ಈ ತರಹ ಮಾತನಾಡಿದರೆ ನಮ್ಮ ಪರಿಸ್ಥಿತಿ ಏನಣ್ಣಾ? ಮಾನ್ಯ ಕೃಷಿ ಸಚಿವರು ನಾನು ಮಾತನಾಡುವುದನ್ನು ಎಷ್ಟು ನಗುನಗುತ್ತಾ ಸ್ವೀಕಾರ ಮಾಡುತ್ತಿದ್ದಾರೆ. ಮಾನ್ಯ ಪಾಟೀಲ್‌ರವರೆ, ತಾವು ಹಳೆಯ ಕಾಲದ ಮಂತ್ರಿಗಳ ತರಹ ಮಾತನಾಡುತ್ತಿದ್ದೀರಿ. ನೀವು ಪ್ರಗತಿಪರವಾಗಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಬೊಮ್ಮಾಯಿಯವರೆ, ತಾವು ಪಾಟೀಲ್ ರವರು ಮಾತನಾಡುತ್ತಿರುವುದನ್ನು ಬಿಟ್ಟುಬಿಡಿ. ಏಕೆಂದರೆ ಅವರು ನೀವೇನು ಮಾಡಿದ್ದೀರಿ

ಎಂದು ಹೇಳುವಂತಹ ಅಭ್ಯಾಸ ಮಾಡಿಕೊಂಡುಬಿಟ್ಟಿದ್ದಾರೆ. ಅವರು printed dialogue ಹೇಳುತ್ತಾರೆ. ಆ ಬಗ್ಗೆ ನೀವು ಏತಕ್ಕಾಗಿ ತಲೆಕೆಡಿಸಿಕೊಂಡಿದ್ದೀರಿ? ಅವರು ಕ್ಯಾಸೆಟ್ ಹಾಕಿದ್ದಾರೆ ಅದೇ ತಿರುಗುತ್ತಿದೆ.

ಶ್ರೀ ಎಂ.ಬಿ. ಪಾಟೀಲ್ : ನೀವು ಕತ್ತಿಯವರಿಗೆ ಏತಕ್ಕಾಗಿ advise ಮಾಡಿಲ್ಲವೆಂದು ನಾನು ಕೇಳುತ್ತಿರುವುದು.

ಉಪಾಧ್ಯಕ್ಷರು: ಮಾನ್ಯ ಬೊಮ್ಮಾಯಿಯವರೆ, ತಾವು ಮಾತನಾಡಿ.

ಶ್ರೀ ಬಸವರಾಜ ಬೊಮ್ಮಾಯಿ : ಇನ್ನೊಂದು ಬಹಳ ದೊಡ್ಡ ಸಮಸ್ಯೆ ಈ ಸವಳು ಜವಳು ಭೂಮಿಯ ಬಗ್ಗೆ ನಾವು ಗಮನ ಕೊಡಬೇಕಾಗಿದೆ. ಎಲ್ಲೆಲ್ಲಿ ನೀರಾವರಿ ಇದೆ ಅಲ್ಲಿ ದೊಡ್ಡ ಪ್ರಮಾಣದಲ್ಲಿ ಸವಳು ಮತ್ತು ಜವಳು ಭೂಮಿ ಇರುವುದನ್ನು ನಾವು ನೋಡುತ್ತಿದ್ದೇವೆ. ಇದು ಕೃಷಿಗೆ ಸಂಬಂಧಿಸಿದೆ. Ultimately ಅದರಿಂದ ನಮ್ಮ ಕೃಷಿ ಚಟುವಟಿಕೆಗಳು ನಿಂತುಹೋಗುತ್ತವೆ. ಇದರಿಂದ agriculture production ಗೆ ದೊಡ್ಡ ಹೊಡೆತ ಬೀಳುತ್ತದೆ. ಏನು ನಾವು salinization ಮತ್ತು alkalinization ಅನ್ನು ನೋಡುತ್ತಿದ್ದೇವೆ. ಅದನ್ನು ತೆಗೆಯವುದಕ್ಕೆ ಕೃಷಿ ಇಲಾಖೆಯಲ್ಲಿ ಹಲವಾರು ಕಾರ್ಯಕ್ರಮಗಳು ಇದೆ. ಇದು ನೀರಾವರಿ ಇಲಾಖೆಯಲ್ಲಿಯೂ ಕೂಡ ಇದೆ. ರಾಜ್ಯ ಮತ್ತು ಕೇಂದ್ರ ಸರ್ಕಾರವು ಒಂದು ಒಪ್ಪಂದವನ್ನು ಮಾಡಿಕೊಂಡು ಸುಮಾರು 600 ಕೋಟಿ ರೂಪಾಯಿಗಳ ಕಾರ್ಯಕ್ರಮ ನಾವು ಅಧಿಕಾರದಲ್ಲಿದ್ದಾಗಲೂ ಮಾಡಿದ್ದೇವೆ. ಇನ್ನೂ 200 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಈ ಸರ್ಕಾರವು ತೆಗೆದುಕೊಂಡಿದೆ ಎಂಬುವುದನ್ನು ನೀರಾವರಿ ಸಚಿವರು ತಮ್ಮ ಹಿಂದಿನ ಉತ್ತರದಲ್ಲಿ ಹೇಳಿದ್ದಾರೆ. ನೀರಾವರಿ ಇಲಾಖೆ ಮತ್ತು ಕೃಷಿ ಇಲಾಖೆಯ ಜಂಟಿಯಾಗಿ ಈ ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ನನ್ನ ಪ್ರಕಾರ ಹೇಳುವುದಾದರೆ ಸುಮಾರು 3 ಲಕ್ಷಕ್ಕಿಂತ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಸವಳು ಜವಳು ಭೂಮಿ ಇದೆ. ಅಲ್ಲಿ ಭೂಮಿಯು ಹಾಳಾಗುತ್ತದೆ. ಮಣ್ಣು ಹಾಳಾಗುತ್ತದೆ. ಕೃಷಿ ಚಟುವಟಿಕೆಯೂ ಸಂಪೂರ್ಣವಾಗಿ ಆ ಭಾಗದಲ್ಲಿ ನಿಂತುಹೋಗುತ್ತದೆ ಮತ್ತು water locking ಆಗುತ್ತದೆ. water locking ಆಗಿರುವುದರಿಂದ 20 ಟಿ.ಎಂ.ಸಿ.ಗಿಂತ ಹೆಚ್ಚು ನೀರು

ನಮಗೆ ಬಳಕೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ಕೃಷಿ ಇಲಾಖೆಯು ಪ್ರಧಾನವಾಗಿ ಗಮನಹರಿಸಬೇಕಾಗಿದೆ. ಇದು ಬಹಳ ದೊಡ್ಡ ಪ್ರಮಾಣದಲ್ಲಿ ಆಗಿದೆ. ಈ ಬಗ್ಗೆ ನೀರಾವರಿ ಇಲಾಖೆಯಲ್ಲಿ ಸುಮಾರು 600 ಕೋಟಿ ರೂಪಾಯಿಗಳ ಬಹಳ ದೊಡ್ಡದಾದ ಕಾರ್ಯಕ್ರಮ ಇದೆ. ಅದರ ಜೊತೆಗೆ ಕೃಷಿ ಇಲಾಖೆಯೂ ಕೂಡ ಕೈಜೋಡಿಸಿದರೆ ದೊಡ್ಡ ಪ್ರಮಾಣದಲ್ಲಿ ನೀರನ್ನು ಉಳಿಸಬಹುದು. ಮಣ್ಣನ್ನು ಉಳಿಸಬಹುದು. ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡಬಹುದು. ಇದರ ಬಗ್ಗೆ ಕೃಷಿ ಇಲಾಖೆಯು ಹೆಚ್ಚಿನ priority ಯನ್ನು ಕೊಡಬೇಕಾಗಿದೆ. ಕೃಷಿ ಇಲಾಖೆಯಲ್ಲಿ ಏನಿದೆ ಎಂದರೆ ಇದರ ನಿರ್ವಹಣೆ ಬಹಳ ಪ್ರಾಯೋಗಿಕವಾಗಿದೆ. ಘಟಪ್ರಭಾದಲ್ಲಿ ನಾವು ಸುಮಾರು 3000 ಎಕರೆಯನ್ನು ತೆಗೆದುಕೊಂಡಿದ್ದೇವೆ. ಮಲಪ್ರಭಾದಲ್ಲಿ ಸುಮಾರು 2000 ಎಕರೆಯನ್ನು ತೆಗೆದುಕೊಂಡಿದ್ದೇವೆ. ಅದು ಆ ವರ್ಷದ target ಮುಗಿದುಹೋಯಿತು ಇದು ಅಲ್ಲ. ಇದು Mass. ಇದು ಬಹಳ ಸುಲಭವಾಗಿದೆ, ಇಲ್ಲಿ main drain ಮಾಡಿದರೆ ಸಾಕು, ಅದರಲ್ಲಿ main drain ಮತ್ತು sub drains ಇರುತ್ತದೆ. ಏನು ಅಲ್ಲಿ ಹಳ್ಳದ ಪಕ್ಕದಲ್ಲಿ water lock ಇರುತ್ತದೆ. ನೀವು ಅದನ್ನು clean ಮಾಡಿದರೆ ಸಾಕು. ಅದು ಕೃಷಿಗೆ ಯೋಗ್ಯ ಭೂಮಿಯಾಗುತ್ತದೆ. ಇದು ನಮ್ಮ ಗೋವಿಂದ ಕಾರಜೋಳರವರ ಕ್ಷೇತ್ರದಲ್ಲಿ ಆಗಿತ್ತು. ಅಲ್ಲಿ ಸಂಪೂರ್ಣವಾಗಿ ನಿರ್ವಹಣೆಯನ್ನು ಮಾಡಿದ್ದರು. ಸವದತ್ತಿ, ನರಗುಂದ, ಮಲಪ್ರಭಾ ಮತ್ತು ಘಟಪ್ರಭಾ, ತುಂಗಭದ್ರಾದಲ್ಲಿದೆ, ಇದು ಎಲ್ಲಾ ಕಡೆಯಲ್ಲಿಯೂ ಇದೆ. ಇದು ನೇರವಾಗಿ ಕೃಷಿ ಉತ್ಪಾದನೆಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಅದಕ್ಕಾಗಿ ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಬೊಮ್ಮಾಯಿಯವರೆ ತಾವು ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ: ಕೃಷಿ ಇಲಾಖೆ ಎಂದರೆ ಎಷ್ಟು ಹೊತ್ತು ಬೇಕಾದರೂ ಮಾತನಾಡಬಹುದು. ಇನ್ನು 15–20 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ರಾಜ್ಯ ಸರ್ಕಾರವು ಕೃಷಿ ಉತ್ಪಾದನೆಯ ಬೆಲೆಯನ್ನು ನಿಗದಿಪಡಿಸಲು ಕೃಷಿ ಬೆಲೆ ಆಯೋಗವನ್ನು ರಚಿಸುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಇದು

ಒಂದು ಹೊಸ ಚಿಂತನೆಯಾಗಿದೆ ರಾಷ್ಟ್ರದಲ್ಲಿ ಮಾತ್ರ ಈ ತರಹದ ಒಂದು ಕೃಷಿ ಉತ್ಪಾದನೆಯ ಬೆಲೆಗಳ ಆಯೋಗ ಇದೆ. MSP ಅನ್ನು ತೀರ್ಮಾನ ಮಾಡುವಂತಹದ್ದು ಮತ್ತು ಕಬ್ಬಿಗೆ FRP ಯನ್ನು ತೀರ್ಮಾನ ಮಾಡುವಂತಹದ್ದು ಇದೆ. ಅವರು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ನಾವು ಹಿಂದೆ ಕೂಡ ಕೇಂದ್ರದ ಗಮನವನ್ನು ಸೆಳೆದಿದ್ದೇವೆ. ಈ MSP ಯಲ್ಲಿ ನಮ್ಮ southern states ಗಳಿಗೆ ಬಹಳಷ್ಟು ಅನ್ಯಾಯ ಆಗುತ್ತಿದೆ. ನಮ್ಮ southern states ನಲ್ಲಿ ನಮಗೆ ಪ್ರಮುಖವಾಗಿ ಭತ್ತಕ್ಕೆ MSP ಯನ್ನು ತೆಗೆದುಕೊಳ್ಳುತ್ತೇವೆ. ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ಇಲ್ಲಿ labour content ಏನಿದೆ ಕೃಷಿಕರು ಸ್ವಂತ ಕೆಲಸ ಮಾಡುವುದಕ್ಕೆ ಲೇಬರ್ ಕಂಟೆಂಟ್ ಏನಿದೆ ಅದು ಬಹಳ ಕಡಿಮೆ ಹಿಡಿದಿರುತ್ತಾರೆ. ಆದರೆ ಪಂಜಾಬ್, ಹರಿಯಾಣ, ಉತ್ತರ ಪ್ರದೇಶಗಳಲ್ಲಿ ಬೆಳೆಯತಕ್ಕಂಥ ಗೋಧಿ MSP ಗೆ ಬಹಳ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಇದೆ, ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದರಿಂದ ನಮ್ಮ MSP fixation ನಲ್ಲಿ ನಮ್ಮ ರೈತರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಬೇಕು. ಈಗ ತಾವೇನು ಹೊಸ ಆಯೋಗವನ್ನು ಮಾಡುತ್ತಿದ್ದೀರಿ ಅದು ಕೇವಲ ಬೆಲೆಯನ್ನು ಘೋಷಣೆ ಮಾಡುವ ಸಲುವಾಗಿ ಮಾತ್ರ ಈ ಆಯೋಗವಿದೆಯೇ ? ಇದನ್ನು implement ಮಾಡುವ ಜವಾಬ್ದಾರಿ ನಿಮ್ಮದೇ? ಯಾರದ್ದು? ಈಗ ಗೋವಿನ ಜೋಳಕ್ಕೆ 2,500–00 ರೂಪಾಯಿಗಳು, ತೊಗರಿಗೆ 5,000–00 ರೂಪಾಯಿಗಳು, ಕೊಬ್ಬರಿಗೆ 7000.00 ರೂಪಾಯಿಗಳೆಂದು, ಅಡಿಕೆಗೆ 10,000–00 ರೂಪಾಯಿಗಳೆಂದು fix ಮಾಡಬಹುದು. ಅದನ್ನು ಯಾರು ಕೊಳ್ಳುತ್ತಾರೆ ? ಮಾರುಕಟ್ಟೆ ನಿಯಂತ್ರಣ ಯಾರು ಮಾಡುತ್ತಾರೆ? ವ್ಯಾಪಾರಸ್ಥರು ಯಾರಾದರೂ ಕೊಡುವುದಿಲ್ಲವೆಂದರೆ ನೀವೇನು ಮಾಡುವಿರಿ? ಇದರ ಬಗ್ಗೆ ಏನು ಚಿಂತನೆ ಮಾಡಿದ್ದೀರಿ? ಅಕಸ್ಮಿಕವಾಗಿ ನೀವು ತೆಗೆದುಕೊಂಡರೆ ಈಗಾಗಲೇ ನಾವು ಹೇಳಿದಂತೆ ಗೋದಾಮಿನ ಪರಿಸ್ಥಿತಿ ಹೇಗಿದೆ ಎಂದು ತಮಗೆಲ್ಲಾ ಗೊತ್ತಿದೆ. ಅದನ್ನು ನೀವು ಯಾವ ರೀತಿ ನಿರ್ವಹಣೆ ಮಾಡುತ್ತೀರಿ? ನಿಮ್ಮ ಮೈಮೇಲೆ ಹಾಕಿಕೊಳ್ಳುವಿರಾ? ಮತ್ತೆ interstate ವ್ಯವಹಾರ ಆಗಿದೆ. ಕೇವಲ ಕರ್ನಾಟಕದ ಮಾತ್ರವಲ್ಲ. ನಮ್ಮ ಕುಂದಗೋಳ ತಾಲ್ಲೂಕು. ಹುಬ್ಬಳ್ಳಿ ತಾಲ್ಲೂಕು

ಬೆಳೆದಂಥ ಮೆಣಸಿನಕಾಯಿ ಬ್ಯಾಡಗಿಗೆ ಬರುತ್ತದೆ. ಬ್ಯಾಡಗಿಯಲ್ಲಿ ಬೆಳೆದ ಮೆಣಸಿನಕಾಯಿ ಕೇರಳಕ್ಕೆ ಹೋಗುತ್ತದೆ. ಅಕ್ಕಿ, ಭತ್ತ ನಮ್ಮ ರಾಜ್ಯದಿಂದ ಹೊರಗೆ ಹೋಗುತ್ತದೆ. ಹೊರೆ ರಾಜ್ಯಗಳಿಂದ ನಮಗೆ ಬರುತ್ತದೆ. ಎಣ್ಣೆ ಕಾಳುಗಳು ಬೇರೆ ರಾಜ್ಯಗಳಿಂದ ಹೆಚ್ಚಿಗೆ ನಮಗೆ ಬರುತ್ತದೆ. ಏಕೆಂದರೆ ನಮ್ಮಲ್ಲಿ oil seeds ಉತ್ಪಾದನೆ ಕಡಿಮೆ ಇದೆ. ಇದನ್ನು ನೀವು ಯಾವ ರೀತಿ ನಿಯಂತ್ರಣ ಮಾಡಿಸುತ್ತೀರಾ, ನಿಮ್ಮ price ಆಯೋಗವನ್ನು ನೀವು ಮಾಡಿದಿರಿ, market intervention ಮಾಡುವಿರಾ, market regulate ಮಾಡುವಿರಾ? ಇದರ ಬಗ್ಗೆ ಸ್ಪಷ್ಟತೆ ಬೇಕು. ಇಲ್ಲವಾದಲ್ಲಿ ನೀವು ಬಜೆಟ್‌ನಲ್ಲಿ ಹೊಸದಾಗಿ ಒಂದು ಆಯೋಗ ಮಾಡುತ್ತೇವೆಂದು ಘೋಷಣೆ ಮಾಡಿ. ಆ ಆಯೋಗ ಮಾಡಿ ಒಂದು ವರ್ಷ ಕಳೆದಿರಿ. ಆದರೆ ಅಷ್ಟು ಸುಲಭವಲ್ಲ ಅದು ಮಾನ್ಯ ಮುಖ್ಯಮ್ಯಂತ್ರಿಗಳಿಗೆ ಆಯೋಗ ಮಾಡುವುದು ದೊಡ್ಡ ಮಾತಲ್ಲ. ಪಂಡಿತರನ್ನು ಕರೆದು ಒಂದು ಆಯೋಗವನ್ನು ಅವರು ಮಾಡಬಹುದಾಗಿತ್ತು. ಆದರೆ ಆಯೋಗವನ್ನು ಮಾಡಿದ ಮೇಲೆ ಅದನ್ನು ಯಾವ ರೀತಿ ನಿರ್ವಹಣೆ ಮಾಡಬೇಕೆಂಬುದು ಅವರಿಗೆ ಗೊತ್ತಾಗಿದೆ. ಇದರ ಹಿನ್ನೆಲೆಯ ಚಿಂತನೆ ಏನು? ಇವರ ಚಿಂತನೆ ಯಾರದ್ದು? ಯಾವ ಚಿಂತನೆಯ ಫಲದಿಂದ ಇದು ಹೊರಬಂದಿದೆ, ಇದರ ಪರಿಣಾಮಗಳೇನು? ಇದನ್ನು ತಿಳಿಯುವುದಕ್ಕೆ ಒಂದು ವರ್ಷ ತೆಗೆದುಕೊಂಡಿದ್ದೀರಿ. ಈ ಆಯೋಗ ರಚನೆಯಾಗಿ correct ಆಗಿ ಒಂದು ವರ್ಷವಾಯಿತು. ಇದನ್ನು ಎರಡನೇ ಬಜೆಟ್‌ನಲ್ಲಿ ತಾವು ನಮೂದಿಸಿದ್ದೀರಿ. ಹೋದ ವರ್ಷ ಬಜೆಟ್‌ನಲ್ಲಿಯೂ ಆಯೋಗ ಮಾಡುತ್ತೇವೆಂದು ಹೇಳಿದ್ದೀರಿ. ಈಗ ಆದೇಶವನ್ನು ಹೊರಡಿಸಲಾಗುವುದು ಎಂದು ಹೇಳಿದ್ದೀರಿ. ಹೋದ ವರ್ಷ ಆಯೋಗ ರಚನೆ ಮಾಡಲಾಗುವುದು, ಈ ವರ್ಷ ಆದೇಶ ಹೊರಡಿಸಲಾಗುವುದು. ಎರಡೂ ಒಂದೇ, ಭಾಷೆ ಬೇರೆ, ಅಂದರೆ What is your commitment ? ನೀವು ಏಕೆ ಆ ರೀತಿ ಹೇಳಿದಿರಿ. ಒಂದು ವರ್ಷ ತಡವೇಕೆ ಆಯಿತು? ನಿಮಗೆ ಇದರ ಬಗ್ಗೆ ಚಿಂತನೆ ಏನಿದೆ? ನಿಮ್ಮ ಬದ್ಧತೆ ಏನಿದೆ? ಎನ್ನುವಂಥ ಪ್ರಶ್ನೆ ಸಹಜವಾಗಿ ಬರುತ್ತದೆ. ಆದ್ದರಿಂದ ಇದನ್ನು ಮಾಡುವ ಹಾಗಿದ್ದರೆ ಬೇಗ ಮಾಡಿ, ಮಾಡಿದರೆ ಇದಕ್ಕೆ ಸ್ಪಷ್ಟವಾದ ಒಂದು ನೀಲಿ ನಕ್ಷೆಯನ್ನು ಇಡಬೇಕಾಗುತ್ತದೆ. ಅದಿಲ್ಲದೆ ಸುಮ್ಮನೆ ನಾವು ಆಯೋಗ ಮಾಡಿದೆವು ಎಂದು ಹೇಳಿ ಹತ್ತು ಆಯೋಗಗಳ ಜೊತೆಗೆ ಹನ್ನೊಂದನೇ

ಆಯೋಗ ಬೇಕಾಗುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ಬೇಕಾದಷ್ಟು ಶಿಫಾರಸ್ಸುಗಳು ಇವೆ. Infact ಸ್ವಾಮಿನಾಥನ್ ಕಮಿಟಿಯವರು Agriculturist Income Commission ಮಾಡಿ ಎಂದು ಹೇಳಿದ್ದಾರೆ. ನಮ್ಮಲ್ಲಿ ಸರ್ಕಾರಿ ನೌಕರರಿಗೆ, Private sector ನೌಕರರಿಗೆ ಯಾವ ರೀತಿ Minimum Wages Act ಇದೆ, Pay Commission ಎಲ್ಲಾ ಇದೆ. ಅಂದರೆ ಅವರಿಗೆ salary security ಇದೆ ಅಂದರೆ ಅವರಿಗೆ ಪಗಾರದ ಒಂದು ಸಂರಕ್ಷಣೆ ಇದೆ. ಆದರೆ ಕೃಷಿಗೆ, ಕೃಷಿಕನಿಗೆ salary security ಇಲ್ಲ, ಕೃಷಿಕನ ಬೆವರಿಗೆ ಬೆಲೆ ಇಲ್ಲವೆನ್ನುವಂಥದ್ದಕ್ಕೆ ಸ್ವಾಮಿನಾಥನ್ ರವರು ಏನು ಹೇಳಿದ್ದಾರೆಂದರೆ, Agriclturist Income Pay Commission ಮಾಡಿ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಆ ರಿಪೋರ್ಟ್ ಅನ್ನು ದಯವಿಟ್ಟು ತರಿಸಿಕೊಂಡು ಅದರ ಸಾಧಕ ಬಾಧಕಗಳನ್ನು ನೋಡಿ, ಅಂದರೆ ಕೃಷಿಯ ಜೊತೆಗೆ ಆ ರೈತನನ್ನು ಸುರಕ್ಷಿತಗೊಳಿಸುವುದಕ್ಕೆ, ಗಟ್ಟಿಗೊಳಿಸುವುದಕ್ಕೆ ಬಹುತೇಕವಾಗಿ ಇಡೀ ರಾಷ್ಟ್ರದಲ್ಲಿ ಒಂದು ದೊಡ್ಡ ಪ್ರಯೋಗವಾಗುತ್ತದೆ. ಎಂದು ಇದನ್ನು ಮಾಡಿದರು ದಯವಿಟ್ಟು ಇದರ ಚಿಂತನೆಯನ್ನು ನೀವು ಮಾಡಬೇಕು. ಕೃಷಿ ಅಭಿವೃದ್ಧಿಯಾಗಿ ರೈತ ಬಡವನಾದರೆ ಎಲ್ಲೋ ನಾವು ತಪ್ಪಿದ್ದೇವೆ. ಈ ವ್ಯವಸ್ಥೆ ತಪ್ಪಿದೆ, ನಮ್ಮ ಯೋಜನೆಗಳು ತಪ್ಪಿದೆ ಎಂಬುದು ಬಹಳ ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಆದ್ದರಿಂದ ದಯವಿಟ್ಟು ತಾವು ಚಿಂತನೆಯನ್ನು ಮಾಡಬೇಕು ಮತ್ತು ಈ ಆಯೋಗದ ಬಗ್ಗೆ ಸಂಪೂರ್ಣವಾದ Blue print ಅನ್ನು ನಮ್ಮ ಮುಂದೆ ಇಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಆಯೋಗ ರಚನೆ ಮಾಡುವಂಥ ಹಿನ್ನಲೆಯಲ್ಲಿ ಸ್ವಲ್ಪ ವಿಸ್ತೃತವಾಗಿ ತಾವು ಬೇರೆ ಬೇರೆ ಅರ್ಥದಲ್ಲಿ ಏನಿದೆ ಎಂದು ನೋಡಿದರೆ ನಿಜವಾಗಿಯೂ ಕೂಡ practical ಆಗಿ ಮಾಡಲಿಕ್ಕೆ ಸಾಧ್ಯತೆ ಇದೆ. ಅಮೆರಿಕಾದಲ್ಲಿ ಮತ್ತು western country ದೇಶಗಳಲ್ಲಿ ಈ ರೀತಿಯ ಆಯೋಗಗಳು ಯಾವುದೂ ಇಲ್ಲ, ಆದರೆ ಅವರು ಏನು ಮಾಡುತ್ತಾರೆಂದರೆ outlook report ಅನ್ನು ಮಾಡುತ್ತಾರೆ. ಪ್ರತಿ season ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ outlook report ಮಾಡುತ್ತಾರೆ. out look report ಏನೆಂದರೆ ಮಾನ್ಯ ಮುಖ್ಯಮಂತ್ರಿಗಳೇ, 10 ವರ್ಷಗಳ ಮಳೆಗಾಲ,

ಮಳೆ ಪ್ರಮಾಣದ ವಿವರಗಳ ಡಾಟಾ, ಹತ್ತು ವರ್ಷಗಳ Production and Productivity, Domestic market, International market ಎಲ್ಲವನ್ನೂ ನೋಡಿ ಅವರು ಆ Indicative price ಎಂದು ಮಾಡುತ್ತಾರೆ. ಆ Indicative price 15% ಕಡಿಮೆ ಬಿದ್ದರೆ ಆ 15% ಮಾತ್ರ ರೈತರಿಗೆ ತುಂಬಿ ಕೊಡುತ್ತಾರೆ. ಆದರೆ ನಾವಿಲ್ಲಿ ಎಲ್ಲಾ ಖರೀದಿ ಮಾಡುತ್ತೇವೆಂದು ಹೇಳಿ ಸಂಪೂರ್ಣವಾಗಿ ಮೈಮೇಲೆ ಹಾಕಿಕೊಂಡು ಅದರ Transportation, storeges, demussager ನಮ್ಮ ಮೇಲೆ ಹಾಕಿಕೊಳ್ಳುತ್ತೇವೆ. ಆದರೆ ಅವರು ಅದೆಲ್ಲ ಏನೂ ಮಾಡುವುದಿಲ್ಲ. 15% ಮಾತ್ರ ಅವರು ಕೊಡುತ್ತಾರೆ. ಇನ್ನು 15% ಹೆಚ್ಚಾದರೆ consumer ನವರು ಕೊಡುತ್ತಾರೆ. ನಮ್ಮಲ್ಲಿ consumer ಕೊಡುವ ಪ್ರಶ್ನೆಯೇ ಇಲ್ಲ. ನಾವು ರೈತರಿಗೆ ಮಾತ್ರ ಕೊಡಬಹುದು. ಹಾಗಾಗಿ ಈ out look report ಬಗ್ಗೆ ನಾವು ಏಕೆ ಚಿಂತನೆಯನ್ನು ಮಾಡಬಾರದು? ಆ ರಿಪೋರ್ಟ್ ತರಿಸಿಕೊಂಡು ನೋಡಿ. ನೀವು Agriculturist Price Commission ಮಾಡುತ್ತಿದ್ದೀರಿ. ಆ ತರಹ scientific ಆಗಿ ಮಾಡುವ ಚಿಂತನೆಯನ್ನು ಮಾಡಿದರೆ ನಿಜವಾಗಿಯೂ ಕೂಡ ರೈತರಿಗೆ ಅನುಕೂಲವಾಗುತ್ತದೆ. ಮತ್ತು ಸರ್ಕಾರಕ್ಕೂ ಕೂಡ ಅನುಕೂಲವಾಗುತ್ತದೆ. ಬಹಳಷ್ಟು ಹೊರೆ ನಿಮ್ಮ ಮೇಲೆ ಏನು ಅನವಶ್ಯಕವಾಗಿ ಬರುತ್ತಿದೆ? ಅದು ಉಳಿಯಲಿಕ್ಕೆ ಸಾಧ್ಯವಿದೆ, ಇದರ ಬಗ್ಗೆ ತಾವು ಚಿಂತನೆಯನ್ನು ಏಕೆ ಮಾಡಬಾರದು ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಕೊನೆಯದಾಗಿ ಈ ನೀರು ಮತ್ತು ಮಣ್ಣು, ನಮ್ಮ ಪುಟ್ಟಣ್ಣನವರು ಹೇಳಿದಂತೆ ಅವರೆಡೂ ತಂದೆ ತಾಯಿ ಇದ್ದಂತೆ, ಇವೆರಡರ ಪ್ರಮಾಣವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವಂಥ ಅವಕಾಶವನ್ನು ರೈತರಿಗೆ ಕೊಟ್ಟರೆ ಅವರು ಭೂಮಿಗೆ ಬೆವರನ್ನು ಹಾಕಿ ಬಂಗಾರವನ್ನು ಬೆಳೆಯುತ್ತಾನೆ. ಒಂದು ಕಡೆ ಯಥೇಚ್ಛವಾಗಿ ನೀರು ಹರಿದು ಹೋಗುವಂಥದ್ದು. Flood ಆದರೆ ಅದರ ನಿರ್ವಹಣೆ ಮಾಡುವುದಕ್ಕೆ ಆಗದಿರುವಂತಹ ಪರಿಸ್ಥಿತಿ. ಇನ್ನೊಂದು ಕಡೆ ಸಂಪೂರ್ಣವಾಗಿ ನೀರಿನ ಬರ ಇರುವಂಥದ್ದು, ಮೂರನೆಯದಾಗಿ ಎಲ್ಲದಕ್ಕಿಂತ ನೀರನ್ನು ಭೂಮಿಯಲ್ಲಿ ಹಿಡಿದಿಟ್ಟುಕೊಳ್ಳುತ್ತೇವೆ. ಮೂರು ಲಕ್ಷ ಹೆಕ್ಟೇರ್‌ನಷ್ಟು ಸಂಗ್ರಹವಾಗುತ್ತದೆ. ನೀರು ಲುಕ್ಸಾನು, ಮಣ್ಣು ಲುಕ್ಸಾನು,

production ಲುಕ್ಸಾನು, ಇದರಿಂದ ಹೊರಬರಬೇಕೆಂದರೆ ನೀರು ಮತ್ತು ಮಣ್ಣು ಇವರೆಡರ ನಿರ್ವಹಣೆ ಬಗ್ಗೆ ನಾವು ಬಹಳ ಗಂಭೀರವಾಗಿ ಚರ್ಚೆಯನ್ನು ಮಾಡಬೇಕು. ನಮ್ಮ ಹಳೆಯ ಕಾಲದ ರೀತಿಯಲ್ಲಿ ಮಾಡಿದರೆ ಖಂಡಿತವಾಗಿಯೂ ಸಾಧ್ಯವಿಲ್ಲ. ಯಾರು ಮೇಲ್ಭಾಗದಲ್ಲಿ ಇರತ್ತಾರೋ ಅವರು ಯಥೇಚ್ಚವಾಗಿ ನೀರು ಬಿಟ್ಟುಕೊಳ್ಳುವುದು, ತಮಗೆ ಬೇಕೋ ಬೇಡವೋ ಏನನ್ನೂ ನೋಡದೆ ಯಥೇಚ್ಚವಾಗಿ ನೀರು ಬಿಟ್ಟುಕೊಳ್ಳುವುದು ಹಿಂದೆ ಇರುವವರಿಗೆ ನೀರು ಸಿಗುವುದಿಲ್ಲ, ನೀರನ್ನು ರಾತ್ರಿ ಹಾಯಿಸಿಬಿಟ್ಟರೆ ಅದು ಬೆಳಗಿನವರೆಗೆ ಬರುವುದಿಲ್ಲ. ನಮ್ಮ ಬಾಗಲಕೋಟೆ ಜಿಲ್ಲೆಯ ರೈತರೊಬ್ಬರು ಹೇಳುತ್ತಿದ್ದರು, ನಮ್ಮ ಕಡೆ ಯಾವ ರೀತಿ ಪದ್ಧತಿ ಇದೆಯೆಂದರೆ ಕಬ್ಬಿಗೆ ನೀರು ಹಾಯಿಸಿ, ಅಲ್ಲಿಗೆ ನೀರು ಬಂದಿದೆಯೋ ಇಲ್ಲವೋ ಎಂದು ನೋಡಲಿಕ್ಕೆ ಅಲ್ಲಿಗೆ ಒಂದು ಕಲ್ಲು ಬೀಸಿದರೆ ಆ ಸಪ್ಪಳದ ಮೇಲೆ ನೀರು ಬಂದಿದೆಯೇ ಇಲ್ಲವೇ ಎಂದು ತೀರ್ಮಾನ ಮಾಡಿ ಮತ್ತೆ ಮುಂದೆ ಹೋಗುವುದು, ಈ ರೀತಿಯ ನಿರ್ವಹಣೆಯಲ್ಲಿ ನಾವಿದ್ದೇವೆ, ಇದು ಬದಲಾವಣೆ ಆಗಬೇಕು. ಅದಕ್ಕೆ ಹಲವಾರು ರೀತಿಯಲ್ಲಿ ರೈತರಿಗೆ ಸಾಕಷ್ಟು training ಕೊಟ್ಟಿದ್ದೇವೆ. ರೈತರಿಗೆ ನೀರಿನ ಬಗ್ಗೆ ಮಣ್ಣಿನ ಬಗ್ಗೆ ಜಾಗೃತಿ ಮೂಡಿಸುವಂಥ ಅವಶ್ಯಕತೆ ಇದೆ. Micro Irrigation ಬಗ್ಗೆ ನಾವು ಚಿಂತನೆಯನ್ನು ಬಹಳ ಗಂಭೀರವಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ಚಿಂತನೆ ಮಾಡುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. Micro Irrigation ಮಾಡುವ ಮೂಲಕ ಸವಳು ಜವಳು ಆಗುವುದನ್ನು ಖಂಡಿತವಾಗಿ ತಪ್ಪಿಸಬಹುದು. Water logging, locking ಎರಡನ್ನೂ ತಪ್ಪಿಸಬಹುದು. ಎರಡನೆಯದಾಗಿ ನಿಯಂತ್ರಿತವಾದಂಥ Irrigation ಎಂದರೆ Controlled Irrigation, Cropping pattern ಅನ್ನು ನಾವು ಸರಿಯಗಿ decide ಮಾಡಬಹುದು. producivity ನ್ನು ನಾವು ಸರಿಯಾಗಿ decide ಮಾಡಬಹುದು. ಈ ತರಹ ಎಲ್ಲಾ ಕೃಷಿ ಚಟುವಟಿಕೆಗಳಾದರೆ ಆಹಾರ ಸಂಸ್ಕರಣೆ ಮಾಡುವ ಬಗ್ಗೆ ನಾನೇನು ಇಷ್ಟೊತ್ತಿನವರೆಗೆ ಮಾತನಾಡಿದೆ, forward linkages ಎಂದು ಆಹಾರ ಸಂಸ್ಕರಣೆ ಘಟಕಗಳನ್ನು ನಾವು ತೆರೆಯಬಹುದು ನಾವು ನಮ್ಮ ರೈತರು ಬೆಳೆದಂಥ ಎಲ್ಲಾ ಪದಾರ್ಥಗಳಿಗೆ value addition ಅನ್ನು ಮಾಡಬಹುದು.

ಆ ಕಾರಣದಿಂದ Micro Irrigation ಬಗ್ಗೆ ತಾವು ಹೆಚ್ಚಿನ ರೀತಿಯಲ್ಲಿ ಚಿಂತನೆಯನ್ನು ಮಾಡಬೇಕು. ಇಲ್ಲಿಯವರೆಗೆ Micro Irrigation farmer Centers ಗೆ ಇತ್ತು. ತಮ್ಮ ಇಲಾಖೆಯಲ್ಲಿ ಸಬ್ಸಿಡಿ ಕೊಡುತ್ತೀರಿ. ಸುಮಾರು 30–40 ವರ್ಷಗಳಿಂದ ಈ ರಾಜ್ಯದಲ್ಲಿ Drip Irrigation, Sprinkler Irrigation ಇದೆ. ಅದನ್ನು ರೈತ ತಾನು ವೈಯಕ್ತಿಕವಾಗಿ ಮಾಡಿಕೊಂಡಿರುವಂಥದ್ದು. ಇತ್ತೀಚೆಗೆ ಅದನ್ನು project centric ಮಾಡುವಂತಹ ಕೆಲಸವನ್ನು ನಮ್ಮ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇವೆ. ಬೇರೆ ರಾಜ್ಯಕ್ಕಿಂತ ದೊಡ್ಡ ಪ್ರಮಾಣದಲ್ಲಿ ಮಾಡಬೇಕು ಎನ್ನುವ ಉದ್ದೇಶದಿಂದ ಈ ಯೋಜನೆಗಳನ್ನು ಕೂಡ ನಾವು ರೂಪಿಸಿದ್ದೇವೆ. ಉದಾಹರಣೆಗೆ ನಾನು ನೀರಾವರಿ ವಿಷಯ ಬಂದಾಗ ಅದರ ಬಗ್ಗೆ detail ಆಗಿ ಮಾತನಾಡುತ್ತೇನೆ. ಆದರೆ, ಈ ಸಂದರ್ಭದಲ್ಲಿ ಇಷ್ಟು ಹೇಳಬಯಸುತ್ತೇನೆ. ತುಂಗಭದ್ರಾದಿಂದ ಹಿಡಿದು ಕೃಷ್ಣಾದವರೆಗೆ ಹಲವಾರು ಯೋಜನೆಗಳು ಈಗ ಅನುಷ್ಠಾನದ ಹಂತದಲ್ಲಿವೆ. ನಮ್ಮ ತುಂಗಭದ್ರಾ ನದಿಯ ಉಪನದಿ ವರದಾ ನದಿ ಏನಿದೆ ಅಲ್ಲಿ micro irrigation ಅನ್ನು ಮಾಡಿದ್ದೇವೆ. ಮುಂದೆ ಅಲ್ಲಿ ಸವಣೂರು irrigation ಎಂದು ಬರುತ್ತಿದೆ. ಅದರ ಮುಂದೆ ಸಿಂಗಟಾಲೂರು irrigation ಬರುತ್ತಿದೆ. ಕೊಪ್ಪಳ irrigation ಬರುತ್ತಿದೆ. ಬಾಗಲಕೋಟೆಯ ರಾಮಟಾಳ irrigation ಬರುತ್ತಿದೆ ಮತ್ತು ನಮ್ಮ ಲಿಂಗಸುಗೂರು ತಾಲ್ಲೂಕಿನಲ್ಲಿ ಬರುತ್ತಿದೆ. ಮುಂದೆ ನಾರಾಯಣಪುರ ಅಂದರೆ ಕೃಷ್ಣಾದವರೆಗೆ ಆ entire belt ಅಂದರೆ ಸುಮಾರು 7 ಲಕ್ಷ ಎಕರೆ Micro irrigation ಮಾಡುವುದಕ್ಕೆ ಸಾಧ್ಯತೆಯಿದೆ. ಈಗಾಗಲೇ ಆ ಯೋಜನೆಗಳನ್ನು ರೂಪಿಸಿದ್ದೇವೆ. ಕೆಲವೊಂದು ಅನುಷ್ಠಾನ ಕೂಡ ಅಗುತ್ತಿದೆ. ಆ 7 ಲಕ್ಷ ಎಕರೆಯನ್ನು ಸಂಪೂರ್ಣವಾಗಿ ಯಶಸ್ವಿಯಾಗಿ ನಾವು ಮಾಡಿದರೆ ಅನುಕೂಲ, Micro irrigation ನಲ್ಲಿ ಒಂದೇ ಒಂದು ತೊಂದರೆಯೇನಿದೆ ಎಂದರೆ ಆಪತ್ತು ಇರುವುದು, ಏನೆಂದರೆ, ರೈತರು ಅದನ್ನು ನಿರ್ವಹಣೆ ಮಾಡುವುದಕ್ಕೆ ನಾವು ಎಲ್ಲಾ ರೀತಿಯಲ್ಲಿ ಅವರಿಗೆ ಟ್ರೈನಿಂಗ್ ಕೊಡುತ್ತೇವೆ. ರೈತರು ಅದನ್ನು ವರ್ಷ ವರ್ಷ season ನಲ್ಲಿ ನಿರ್ವಹಣೆ ಮಾಡಲಿಲ್ಲವೆಂದರೆ ಅದು ಖಂಡಿತವಾಗಿ ನಮ್ಮ ನಿರೀಕ್ಷೆ ಮಟ್ಟಕ್ಕೆ ಬರುವುದಿಲ್ಲ.

Micro irrigation ಗೆ ಸಂಬಂಧಿಸಿದಂತೆ ಅವರು ಸರಿಯಾದ ಸಂದರ್ಭದಲ್ಲಿ operate ಮಾಡಬೇಕು. ಹಾಗೂ maintain ಮಾಡುವುದಕ್ಕೆ ರೈತರಿಗೆ ಟ್ರೈನಿಂಗ್ ಕೊಡಬೇಕು. ಆ ಕೆಲಸವನ್ನು ಅವರು ಸರಿಯಾಗಿ ಮಾಡಿದರೆ 7 ಲಕ್ಷ ಎಕರೆ ಕೆಲಸ ಆಗುತ್ತದೆ. ಸುಮಾರು 100 ಆಗ್ರೋ ಇಂಡಸ್ಟ್ರೀಸ್ ಬರುತ್ತವೆ. ಭಾರತದ ದೇಶದಲ್ಲಿ ಪಂಜಾಬ್ ಯಾವ ರೀತಿ ಇದೆಯೋ ಅದೇ ರೀತಿಯಲ್ಲಿ ಕರ್ನಾಟಕ ಆಗುತ್ತದೆ ಅದೇ ರೀತಿಯಲ್ಲಿ ಹೇಮಾವತಿ ಮತ್ತು ಕಾವೇರಿ ನದಿ. ಇವರೆಡರಲ್ಲೂ ಮಾಡಬಹುದು. ಉದಾಹರಣೆಗೆ ತುಮಕೂರು ಜಿಲ್ಲೆ, ತುಮಕೂರು ಜಿಲ್ಲೆಯಲ್ಲಿ ಇವತ್ತು ತೆಂಗನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಅಲ್ಲಿ ತೋಟಗಾರಿಕೆ ಇದೆ. ಅಲ್ಲಿ ದೊಡ್ಡ ಪ್ರಮಾಣದಲ್ಲಿ ನೀರಿನ ಅವಶ್ಯಕತೆಯಿಲ್ಲ. ಅದಕ್ಕೆ ಅವರು ನಮಗೆ ಕೆರೆ ತುಂಬಿಸಿ, ಕೆರೆ ತುಂಬಿಸಿ ಎಂದು ಹೇಳುತ್ತಿರುತ್ತಾರೆ. ಅಲ್ಲಿ Micro irrigation ಮಾಡಿದರೆ, ನಾನು ಆ ಸಂದರ್ಭದಲ್ಲಿ estimate ಮಾಡಿಸಿದ್ದೆ. ಸುಮಾರು 8–10 ಟಿ.ಎಂ.ಸಿ. ನೀರನ್ನು ಉಳಿತಾಯ ಮಾಡಬಹುದು. ಅಲ್ಲಿ Micro irrigation ಮಾಡಬಹುದು. ಅದೇ ನೀರನ್ನು ಬಯಲುಸೀಮೆ ಭಾಗದಲ್ಲಿ ಎಲ್ಲೋ ನಾವು ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಅದನ್ನು ಬಳಕೆ ಮಾಡುವುದಕ್ಕೆ ಸಾಧ್ಯತೆಯಿದೆ. ಇದನ್ನು ನಮ್ಮ ಟಿಪ್ಪಣಿಯಲ್ಲಿ ನಾವು ಈ ಹಿಂದೆ ಹೇಳಿದ್ದೇವೆ. ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಮತ್ತೆ ನಮ್ಮ ನೀರಾವರಿ ಸಚಿವರಿಗೆ ಗೊತ್ತಿದೆ. World Bank team ಬಂದಾಗ ನಾವು ಎರಡು ಪ್ರಯೋಗಗಳಿಗೆ ಅನುಮತಿ ಕೊಟ್ಟಿದ್ದೇವೆ. ಕಬ್ಬು ಮತ್ತು ಭತ್ತ ಇವೆರಡೂ ಕೂಡ ನೀರನ್ನು ಅತೀ ಹೆಚ್ಚು ಬಳಕೆ ಮಾಡುವಂತಹ ಬೆಳೆಗಳು, ನೀರನ್ನು ದೊಡ್ಡ ಪ್ರಮಾಣದಲ್ಲಿ ಕುಡಿಯುವಂತಹವು. ಇವುಗಳಿಗೆ ಇವತ್ತು Micro irrigation ಮಾಡುವುದಕ್ಕೆ ಸಾಧ್ಯವೆಂದು ಕೆಲವು ರೈತರೇ ಪ್ರಯೋಗ ಮಾಡಿದ್ದರು. ಅದನ್ನು 5–5 ಸಾವಿರ ಎಕರೆ plot ನಲ್ಲಿ ಮಾಡಬೇಕೆಂದು ಈ ಪ್ರಯೋಗವನ್ನು ನೀರಾವರಿ ಇಲಾಖೆಯಲ್ಲಿ ಮಾಡುತ್ತಿದ್ದಾರೆ. ಅದು ಯಶಸ್ವಿಯಾದರೆ ಕಬ್ಬಿಗೂ ಕೂಡ ಇವತ್ತು ನಾವು Micro irrigation ಮಾಡಬಹುದು. ಕಬ್ಬಿಗೆ ಮತ್ತು ಭತ್ತಕ್ಕೆ ನಾವು ಮಾಡಿದರೆ ನಮಗೆ ನೀರಿನ ಬರವೇ ಇರುವುದಿಲ್ಲ. ಇದನ್ನು ನಾವೇಕೆ ಗಂಭೀರವಾಗಿ

ತೆಗೆದುಕೊಳ್ಳಬಾರದು ? ಕೃಷಿ ಇಲಾಖೆ ಮತ್ತು ನೀರಾವರಿ ಇಲಾಖೆ ಇದರ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಅವರ ಕಾರ್ಯಕ್ರಮಗಳನ್ನು extension programme ಗಳನ್ನು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಮಾನ್ಯ ಉಪಾಧ್ಯಕ್ಷರಿಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೃಷಿ ಒಂದು ರೀತಿಯಲ್ಲಿ open laboratory ಇದ್ದ ಹಾಗೆ. ಇದರಲ್ಲಿ ಹಲವಾರು ಸವಾಲುಗಳು ಬರುತ್ತವೆ ಮತ್ತು ಕೃಷಿ ಸಮಸ್ಯೆ ಒಂದು ರೀತಿಯಲ್ಲಿ ಈ ವರ್ಷ ಈ ಸಮಸ್ಯೆ ಬಂದಿದೆ. ಮುಂದಿನ ವರ್ಷ ಇದೇ ಸಮಸ್ಯೆ ಬರುತ್ತದೆ ಎನ್ನುವ ಹಾಗಿಲ್ಲ. ಈ ವರ್ಷ ಬೇರೆ ಬೇರೆ ತರಹ ಸಮಸ್ಯೆ ಬರಬಹುದು. ಅದು dynamic situation. ಆದ್ದರಿಂದ ಕೃಷಿ ಇಲಾಖೆ ಬೇರೆ ಇಲಾಖೆ ರೀತಿ ನಡೆದುಕೊಂಡರೆ ನಡೆಯುವುದಿಲ್ಲ. ಅದು ಕೂಡ ಯಾವ ರೀತಿ ಸನ್ನಿವೇಶ ಬದಲಾವಣೆಯಾಗುತ್ತವೆ. ಸಂದರ್ಭಗಳು ಬದಲಾವಣೆಯಾಗುತ್ತವೆ, ಸವಾಲುಗಳು ಬದಲಾವಣೆಯಾಗುತ್ತವೆ.ಅದೇ ರೀತಿ ಅವರು ಬದಲಾವಣೆಯಾಗಬೇಕು. ಅದೇ ರೀತಿ ಅವರು move ಆಗಬೇಕು. ಅದೇ ರೀತಿ ಅವರ ಚಲನ-ವಲನಗಳ ಬದಲಾವಣೆ ಕೂಡ ಆಗಬೇಕು. ಅದರಿಂದ ದೂರದೃಷ್ಟಿ ಬಹಳ ಮುಖ್ಯ ಮತ್ತು precautionary actions ಬಹಳ ಮುಖ್ಯ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಮಾಡುವುದು ಬಹಳ ಮುಖ್ಯ. ಅಂತಹದ್ದು ಈ ಬಜೆಟ್‌ನಲ್ಲಿ ದೂರದೃಷ್ಟಿ ಇಟ್ಟುಕೊಂಡು ಮಾಡಿರುವಂತಹ ಕಾರ್ಯಕ್ರಮಗಳು ಯಾವುದೂ ಇಲ್ಲ. ಹಿಂದಿನ ಹಳೆಯ ಕಾರ್ಯಕ್ರಮಗಳನ್ನೇ ಪುನರಾವರ್ತನೆ ಮಾಡಿದ್ದಾರೆ. ಆದ್ದರಿಂದ, ಕೃಷಿ ಇಲಾಖೆ ಮತ್ತು ರೆವಿನ್ಯೂ ಇಲಾಖೆಗೆ ಬಹಳ ಹತ್ತಿರವಾದ ಸಂಬಂಧವಿದೆ. ಇವತ್ತು ರೆವಿನ್ಯೂ ಇಲಾಖೆಗೆ ಮತ್ತು ಕೃಷಿ ಇಲಾಖೆಗೆ ಸಂಬಂಧವಿಲ್ಲವೆಂದರೆ ಆ ರೈತ ಸಾಯುತ್ತಾನೆ. ಬೇರೆ ಏನೂ ಆಗುವುದಿಲ್ಲ. ಇವತ್ತು ರೆವಿನ್ಯೂ ಇಲಾಖೆಯಲ್ಲಿ ಅಣ್ಣ-ತಮ್ಮಂದಿರು ಬೇರೆಯಾದರೆ ಪೋಡಿ ಮಾಡಿದರೆ ಅದನ್ನು ರಿಜಿಸ್ಟರ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, map ಆಗುವುದಿಲ್ಲ. ಅದು comprised ಅದು ಸರಿಯಾಗುವುದಿಲ್ಲ. ಎಷ್ಟು ಪೆಂಡಿಂಗ್ ಇದೆ ಎಂದರೆ 2005-06 ಹಾಗೂ 2006-07ರ ಕೇಸ್‌ಗಳು ಪೋಡಿ ಆಗುವವು ಇನ್ನೂ ಪೆಂಡಿಂಗ್ ಇವೆ. ರೈತರು ದಿನವೂ ತಹಶೀಲ್ದಾರ್

ಆಫೀಸ್‌ಗೆ ಅಲೆದಾಡಿ ಅಲೆದಾಡಿ ಚಪ್ಪಲಿಗಳು ಸವೆದು ಹೋಗಿವೆ. ಯಾರೂ ಮಾತನಾಡಿಸುವವರು ಇಲ್ಲ. ಯಾರೂ ಕೂಡ ಅದರ ಬಗ್ಗೆ ಚಿಂತನೆ ಮಾಡುವವರು ಇಲ್ಲ. ಎಲ್ಲಾ ಅರ್ಥಂಬರ್ಥ comprise ಆಗಿದೆ. ಆ ಭೂಮಿ ಮತ್ತು ಕಾವೇರಿ ಜೋಡಿಸಿದ್ದಾರೆ. ಭೂಮಿ ಮತ್ತು ಕಾವೇರಿ ಆ ತಾಲ್ಲೂಕು ಲೆವೆಲ್‌ಗಳಲ್ಲಿ ಎಲ್ಲಿ ಆಗುತ್ತದೆ ? ಅದು ಬೆಂಗಳೂರು ಲೆವೆಲ್‌ನಲ್ಲಿ ಬಂದು ಎಲ್ಲಾ comprise ಆಗಿ analysis ಆಗಿ ಮತ್ತೆ ವಾಪಸ್ಸು ಹೋಗಿವೆ. ಈ ತರಹ ಅವ್ಯವಸ್ಥೆಯ ಒಂದು ದೊಡ್ಡ ಕೂಪವಾಗಿವೆ. ಇದರಿಂದ ರೈತರಿಗೆ ಎಷ್ಟು ತೊಂದರೆಯಾಗಿದೆ? ಅವನಿಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಅಣ್ಣ ತಮ್ಮಗಳನ್ನು ಬೇರೆ ಮಾಡುವುದಕ್ಕೆ ಆಗುವುದಿಲ್ಲ. ಈ document ಇಲ್ಲವೆಂದರೆ ಅವನಿಗೆ ಕೃಷಿ ಸಾಲ ಸಿಗುವುದಿಲ್ಲ. ಬ್ಯಾಂಕ್‌ನಲ್ಲಿ ಸಿಗುವುದಿಲ್ಲ. ಸೊಸೈಟಿಯಲ್ಲಿ ಸಿಗುವುದಿಲ್ಲ. ಎಲ್ಲಿಯೂ ಸಿಗುವುದಿಲ್ಲ. ಅವರೂ ಏನು ಮಾಡಬೇಕು? ರೆವಿನ್ಯೂ ಇಲಾಖೆ ಮತ್ತು ಕೃಷಿ ಇಲಾಖೆ ನಡುವೆ ಒಂದು ರೀತಿಯಲ್ಲಿ ಅತ್ಯಂತ ಅನ್ಯೋನ್ಯವಾಗಿರುವ ಒಂದು ಸಂಬಂಧವಿರಬೇಕು. ರೈತನಿಗೆ ಯಾವುದೇ ಒಂದು certificate ಬೇಕಾದರೆ ಬಹಳ ಸುಲಭವಾಗಿ ಸಿಗಬೇಕು. ಅದು ಇವತ್ತಿನವರೆಗೂ ಆಗಿಲ್ಲ. ನಾವೆಲ್ಲಾ ಭೂಮಿಗೆ ಪ್ರಶಸ್ತಿ ತೆಗೆದುಕೊಂಡಿದ್ದೇನೆ. ಅವೆಲ್ಲಾ ಬಿಡಿ. ಅವನು ಯಾವನೋ ಕಂಟ್ರಾಕ್ಟರ್ ತೆಗೆದುಕೊಂಡಿರುತ್ತಾನೆ.

ಉಪಾಧ್ಯಕ್ಷರು : ಯಾವುದಾದರೂ ರಾಜ್ಯದಲ್ಲಿ ಆ ತರಹ effective ಆಗಿ ಮಾಡಿದ್ದಾರಾ? ಯಾವುದಾದರೂ ರಾಜ್ಯದಲ್ಲಿ ಮಾಡಿರುವ ಬಗ್ಗೆ ನಿಮಗೆ ಏನಾದರೂ ಮಾಹಿತಿ ಇದೆಯೇ?

ಶ್ರೀ ಬಸವರಾಜ್ ಬೊಮ್ಮಾಯಿ : ಇಲ್ಲ ಏನಾಗಿದೆ ಎಂದರೆ, ಭೂಮಿಯನ್ನು ಮೊದಲು ಮಾಡಿಬಿಟ್ಟೆವು, ಆಮೇಲೆ ಕಾವೇರಿ ಎಂದರೆ ಅದನ್ನು registration ವಿಷಯದಲ್ಲಿ Separate ಮಾಡಿದ್ದೆವು. ಅದನ್ನು interlink ಮಾಡಿದ್ದೇವೆ. ಆ interlink ಮಾಡುವುದರಲ್ಲಿ ಅವ್ಯವಸ್ಥೆಯಿದೆ. ಬರೀ ಭೂಮಿಯಲ್ಲಿ cetificate ತೆಗೆದುಕೊಳ್ಳುವ ಮಾತು ಬೇರೆ ಮತ್ತೆ ಈಗ ಹೊಸ ಆದೇಶ ಏನೆಂದರೆ, ಆ digitalized computer map ಬಂದರೆ ಮಾತ್ರ Sub Register

ಕಛೇರಿಯಲ್ಲಿ ಅದನ್ನು ಒಪ್ಪಿಕೊಳ್ಳುತ್ತಾರೆ. ಇಲ್ಲದಿದ್ದರೆ ಒಪ್ಪಿಕೊಳ್ಳುವುದಿಲ್ಲ. ಈ ತರಹ ರೆವಿನ್ಯೂ ಇಲಾಖೆ independent ಆಗಿ Agriculture ಇಲಾಖೆಗೆ ಆದೇಶಗಳನ್ನು ತಿಳಿಸುತ್ತಿರುತ್ತದೆ. ರೈತನಿಗೆ ಏನು ತೊಂದರೆಯಾಗುತ್ತದೆ ಎನ್ನುವುದನ್ನೆಲ್ಲಾ ನೋಡುವುದಿಲ್ಲ. ಆದ್ದರಿಂದ, ಎಲ್ಲೋ ಒಂದು ಕಡೆ ಇವರೆಡೂ ಇಲಾಖೆಯ ಒಳ್ಳೆಯ ಸಂಬಂಧವಿರುವ ಅವಶ್ಯಕತೆ ಬಹಳವಿದೆ. ನೀವು ದಯವಿಟ್ಟು ರೆವಿನ್ಯೂ ಮಂತ್ರಿಗಳ ಹತ್ತಿರ ಮಾತನಾಡಿ ರೈತನಿಗೆ ಏನು ತೊಂದರೆಯಾಗಿದೆ ಎಂದು ಒಂದು ಪಟ್ಟಿ ಮಾಡಿ, ತಾಲ್ಲೂಕು ಲೆವೆಲ್‌ನಲ್ಲಿ ಯಾವ್ಯಾವ ವ್ಯವಹಾರಗಳಾಗುತ್ತದೆ. ಆ ವ್ಯವಹಾರಗಳಿಗೆ ಯಾವ certificate ತೆಗೆದುಕೊಳ್ಳುವುದಕ್ಕೆ ಏನು ತೊಂದರೆಯಾಗಿದೆ ಎನ್ನುವುದನ್ನೆಲ್ಲಾ ನಿಮ್ಮ ರೆವಿನ್ಯೂ ಅಧಿಕಾರಿಗಳು ಮತ್ತು ಕೃಷಿ ಅಧಿಕಾರಿಗಳು ಒಂದು ಸಲ ಕುಳಿತುಕೊಂಡು ಅದನ್ನು ಸರಿಪಡಿಸಲಿ ತಲತಲಾಂತರಗಳಿಂದ ಇದೇ ರೀತಿಯ ಸಮಸ್ಯೆಗಳು ಬಂದಿದೆ. ಒಂದು department ಏನು ಮಾಡುತ್ತದೆ ಎಂಬುದು ಇನ್ನೊಂದು department ಗೆ ಗೊತ್ತಿಲ್ಲ. ಆದ್ದರಿಂದ ಈ ಸಮಸ್ಯೆಯಾಗಿದೆ. ದಯವಿಟ್ಟು ಇದನ್ನು ಮಾಡಿ. ಇದನ್ನು ಮಾಡಿದರೆ ರೈತರಿಗೆ ನಿಜವಾಗಲೂ ಕೂಡ ಒಂದು ದೊಡ್ಡ ಉಪಕಾರ ಮಾಡಿದ ಹಾಗೆ ಆಗುತ್ತದೆ. ಇವೆಲ್ಲಾ ನಮ್ಮ ಶಾಸಕರ ಅನುಭವಕ್ಕೆ ಬಂದಿರುವಂತಹ ವಿಚಾರಗಳು. ಆದರೆ, ಯಾರೂ ಕೂಡ ಮಾಡುತ್ತಿಲ್ಲ. ಕೃಷಿ ಇಲಾಖೆ ಮತ್ತು ಸಹಕಾರ ಇಲಾಖೆಗೆ ಯಾವುದೇ ಸಂಬಂಧ ಇಲ್ಲ. ಸಹಕಾರ ಇಲಾಖೆಯವರು ಅವರೇ decide ಮಾಡುತ್ತಾರೆ. scale of finance ಮಾಡುತ್ತಾರೆ. ಹೊಸ ಸಾಲ ಎಷ್ಟು ಕೊಡಬೇಕೆಂದು ಅವರೇ decide ಮಾಡುತ್ತಾರೆ. ಹೊಸ ರೈತರು ಎಷ್ಟು ಬಂದಿದ್ದಾರೆ. fragmentation ಎಷ್ಟು ಆಗಿದೆ? ಎನ್ನುವುದು ನಿಮ್ಮ ಕಡೆ ಮಾಹಿತಿ ಇರುತ್ತದೆ. ಅವರ ಕಡೆ ಬರೀ ದುಡ್ಡಿನ ಮಾಹಿತಿ ಇರುತ್ತದೆ. ಆದರೆ, ಅವರು independent ಆಗಿ ಕೆಲಸ ಮಾಡುತ್ತಾರೆ. ಕೃಷಿ ಎಂದರೆ, ಮಾನ್ಯ ಕೃಷಿ ಸಚಿವರೆ, ಅದನ್ನು compartmentalize ಮಾಡುವುದಕ್ಕೆ ಆಗುವುದಿಲ್ಲ, ಯಾವ ರೀತಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು campus ಮಾಡುವುದಕ್ಕೆ ಆಗುವುದಿಲ್ಲ. ಅದೇ ರೀತಿ ಕೃಷಿಯನ್ನು compartment ಮಾಡುವುದಕ್ಕೆ ಆಗುವುದಿಲ್ಲ. Agriculture is a culture, Agriculture

ನಲ್ಲಿ culture ಇದೆ, Agriculture ಇದೆ, Horticulture ಇದೆ, Sericulture ಇದೆ, ಎಲ್ಲವೂ ಇದೆ, ಯಾವುದು ಇಲ್ಲ? ರೆವಿನ್ಯೂ ಇದೆ, ಬ್ಯಾಂಕ್ ಇದೆ, Finance ಇದೆ, Co-operation ಇದೆ, Marketing ಇದೆ ಮತ್ತು Veterinary ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ, Marketing ಎಲ್ಲಿದೆ?

ಶ್ರೀ ಬಸವರಾಜ್ ಬೊಮ್ಮಾಯಿ : APMC ಇದೆ, ಇಷ್ಟೆಲ್ಲಾ ಇದ್ದರೂ ನೀವು ನಮ್ಮ ಕ್ಯಾಬಿನೆಟ್ ದರ್ಜೆ ಬೇಡವೆಂದರೆ ನಾನು ಏನು ಹೇಳಲಿ, ಸ್ವಾಮಿ? ಇಷ್ಟೊಂದು ಮಹತ್ವದ್ದು ಇದೆ. ಇದು ದಿನನಿತ್ಯ ನಮಗೆ ಅವಶ್ಯಕತೆ ಇರುವಂತಹ department ಏನಾದರೂ ತೀರ್ಮಾನವಾಗಬೇಕಾದರೆ ಕ್ಯಾಬಿನೆಟ್ ನಲ್ಲಿ ಆಗಬೇಕಲ್ಲವೇ. ಸ್ವಾಮಿ? ಅಲ್ಲಿ ಕ್ಯಾಬಿನೆಟ್‌ನಲ್ಲಿ ನಿಮ್ಮ ಧ್ವನಿಯಿದ್ದರೆ ಅಲ್ಲವೇ ಸ್ವಾಮಿ ನಮ್ಮ ರೈತನ ಧ್ವನಿ ಕೇಳುವುದು? ರೈತನ ಧ್ವನಿ ಇಲ್ಲದೇ ಇರುವಂತಹ ಕ್ಯಾಬಿನೆಟ್‌ಅನ್ನು ಕ್ಯಾಬಿನೆಟ್ ಎನ್ನುವುದಕ್ಕೆ ಸಾಧ್ಯವೇ ಸ್ವಾಮಿ? ಮಾನ್ಯ ಕೃಷ್ಣಬೈರೇಗೌಡರೇ ಇದು ನಿಮಗೆ ಬೇಕಾಗಿರಲಿಕ್ಕಿಲ್ಲ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) : ರೈತರ ವಿಚಾರ ಬಂದಾಗ ಎಲ್ಲಾ ಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಇರುತ್ತಾರೆ. ಅವರನ್ನು ಕ್ಯಾಬಿನೆಟ್ ಸಚಿವರನ್ನಾಗಿ ಮಾಡಬಹುದು ಇದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ರೈತರ ವಿಚಾರ ಬರುವಂತಹ ಸಂದರ್ಭದಲ್ಲಿ ಅವರು ಕ್ಯಾಬಿನೆಟ್‌ನಲ್ಲಿ ಪ್ರತಿನಿಧಿಸುತ್ತಾರೆ.

ಶ್ರೀ ಬಸವರಾಜ್ ಬೊಮ್ಮಾಯಿ: (ಶಿಗ್ಗಾಂವಿ) : As a mater of right ಬರುವುದು ಬೇರೆ ನೀವು invitation ಕೊಟ್ಟಾಗ ಬರುವುದು ಬೇರೆ ವಿಷಯ. ಇದರಿಂದ ನೀವು ರೈತರನ್ನು ಯಾವ ರೀತಿ ಇಟ್ಟೀದ್ದೀರೆಂದು ಗೊತ್ತಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್ : ಬಸವರಾಜ್ ಬೊಮ್ಮಾಯಿಯವರೆ, ನೀವು ತಾರತಮ್ಯ ಮಾಡುವುದಕ್ಕಾಗುವುದಲ್ಲ. As a mater of right ನಲ್ಲಿ he will be representing in the cabinet, ಅವರಿಗೆ ಎಲ್ಲಾ ಅಧಿಕಾರವಿದೆ, ಮಾಡುತ್ತಿದ್ದಾರೆ, ಕೃಷಿ ವಿಚಾರದಲ್ಲಿ ನಾವು ಯಾವುದನ್ನೂ ಕಡೆಗಣಿಸುವುದಿಲ್ಲ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ (ಅಥಣಿ) : ಕೃಷ್ಣೇಭೈರೇಗೌಡರವರನ್ನು ಕ್ಯಾಬಿನೆಟ್‌ಗೆ ತೆಗೆದುಕೊಳ್ಳಬೇಕೆಂಬುದಿಲ್ಲ. ಆದರೆ ಅವರು ಇಡೀ ರಾಜ್ಯದ ರೈತರ ಪ್ರತಿನಿಧಿಯಾಗಿ ಪ್ರತಿನಿಧಿಸುವುದರಿಂದ ಅವರನ್ನು ತೆಗೆದುಕೊಳ್ಳಬೇಕು.

ಶ್ರೀ ಕೆ.ಜೆ. ಜಾರ್ಜ್ ಅವರು MInister of State of Independent charge Independent charge ಎಂದರೆ ತಮಗೆ ಗೊತ್ತಿರಬಹುದು ಯಾವುದೇ ಕೃಷಿ ವಿಚಾರದಲ್ಲಿ ಅವರಿಗೆ rights ಇದೆ. ಕೃಷಿ ವಿಚಾರದಲ್ಲಿ ಕ್ಯಾಬಿನೆಟ್‌ನಲ್ಲಿ represent ಮಾಡುವ ಸಂಪೂರ್ಣ ಅಧಿಕಾರ ಅವರಿಗಿದೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ : ಮಾನ್ಯ ಉಪಾಧ್ಯಕ್ಷರೆ, ಅವರು defend ಮಾಡಿಕೊಳ್ಳುವುದಕ್ಕೆ ಹೋಗುತ್ತಿದ್ದಾರೆ. ಅವರು defend ಮಾಡಿಕೊಳ್ಳುವುದಕ್ಕಿಂತ ಮುಂಚೆ ನಮ್ಮ ಕಳಕಳಿಯೇನೆಂದರೆ ಇಡೀ ರಾಜ್ಯದ ರೈತರನ್ನು ಪ್ರತಿನಿಧಿಸುವಂತಹ ಒಬ್ಬ ಯುವಕ ಕೃಷಿ ಸಚಿವರು ಅವರಿಗೆ independent charge ಕೊಡುವುದಕ್ಕಿಂತಲೂ ಅವರನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡಿದ್ದರೆ ಇಡೀ ರೈತ ಕುಲಕ್ಕೆ ಸನ್ಮಾನ ಮಾಡಿದಂತಾಗುತ್ತದೆ. ಆದ್ದರಿಂದ ದಯವಿಟ್ಟು ಅವರನ್ನು ಕ್ಯಾಬಿನೆಟ್‌ಗೆ ತೆಗೆದುಕೊಳ್ಳುವಂತೆ senior ಆಗಿರುವ ನೀವೆಲ್ಲರೂ ಶಿಫಾರಸ್ಸು ಮಾಡಬೇಕು. ಯುವಕರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. Horticulture Minister, ನೀವು ಎಲ್ಲಾ ಸೀನಿಯರ್ ಇದ್ದೀರಿ ನಮಗೆ ಓಡಾಡುವುದಕ್ಕಾಗುವುದಿಲ್ಲವಾದ್ದರಿಂದ ಇಂತಹವರಿಗೆ ಕೆಲಸ ಕೊಡಿ ಎಂದು ನೀವು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : ಜಾರ್ಜ್‌ರವರೆ ತಾವು ಕೃಷ್ಣ ಭೈರೇಗೌಡರಿಗಿಂತ ಸಣ್ಣ ವಯಸ್ಸಿನಲ್ಲಿ ಕ್ಯಾಬಿನೆಟ್ ಮಂತ್ರಿಗಳಾದ್ದೀರಲ್ಲವೇ? ನಿಮ್ಮ ಸ್ನೇಹಿತರು ಕೂಡ ಕ್ಯಾಬಿನೆಟ್ ಮಂತ್ರಿಗಳಾಗಲಿ ಎಂದು support ಮಾಡಬೇಕು.

ಶ್ರೀ ಕೆ.ಜೆ. ಜಾರ್ಜ್ : ಬಸವರಾಜ ಬೊಮ್ಮಾಯಿಯವರೆ 1989 ರಲ್ಲಿ ವಿರೇಂದ್ರ ಪಾಟೀಲ್ ರವರ ಮಂತ್ರಿ ಮಂಡಲದಲ್ಲಿ ನನ್ನನ್ನು ಮಂತ್ರಿ ಮಾಡಿದಾಗ ರಾಜ್ಯ ಸಚಿವನಾಗಿದ್ದೆ. Youth Services or Fisheries ಖಾತೆ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಆದರೆ ಅವರು ನನಗೆ independent charge ಕೊಟ್ಟು

Food and civil Supplies and Transport Minister ಮಾಡಿದ್ದರು. ಒಂದು ವರ್ಷಕಾಲ ನಾನು ಕೂಡ ಕೆಲಸ ಮಾಡಿದ್ದೇನೆ. ನಂತರ ನಾನು ಕ್ಯಾಬಿನೆಟ್ ಸಚಿವನಾಗಿದ್ದೇನೆ.

ಶ್ರೀ ಬಸವರಾಜ್ ಬೊಮ್ಮಾಯಿ : Still my statement is correct ಕೃಷ್ಣ ಭೈರೇಗೌಡರಿಗಿಂತ ಚಿಕ್ಕವಯಸ್ಸಿನಲ್ಲಿ ತಾವು ಕ್ಯಾಬಿನೆಟ್ ಸಚಿವರಾಗಿದ್ದೀರೆಂಬ ನನ್ನ statement ಸರಿಯಿದೆ. ನನಗೆ ಎಲ್ಲಾ ಇತಿಹಾಸ ಗೊತ್ತಿದೆ.

ಶ್ರೀ ಕೆ.ಜೆ. ಜಾರ್ಜ್ ಅವರಿಗೆ ಕ್ಯಾಬಿನೆಟ್ ಸಚಿವರಾಗುವುದಕ್ಕೆ ಎಲ್ಲಾ ಯೋಗ್ಯತೆಯಿದೆ ಅವರು ಮುಂದೆ ಏನೆಲ್ಲಾ ಆಗುತ್ತಾರೆಂಬುದನ್ನು ಕಾದು ನೋಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಈ ಬಗ್ಗೆ ನಮಗೆಲ್ಲಾ ಸಂತೋಷವಿದೆ, ಅವರನ್ನು ಮುಖ್ಯಮಂತ್ರಿ ಮಾಡುತ್ತೇವೆಂದರೂ ಕೂಡ ನಾವು ಸಂತೋಷಪಡುತ್ತೇವೆ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ : ನಾವ್ಯಾರೂ ಅವರ ಸಾಮರ್ಥ್ಯದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಅವರ ಸಾಮರ್ಥ್ಯವೇನೆಂದು ರಾಜ್ಯಸಭಾ ಚುನಾವಣೆಯಲ್ಲಿ ಗೊತ್ತಾಗಿದೆ. ಅದರ ಬಗ್ಗೆ ನಮ್ಮದು ಎರಡು ಮಾತಿಲ್ಲ. ಆದರೆ ಒಬ್ಬ ಸಾಮರ್ಥ್ಯವಿರುವ ಯುವಕನನ್ನು ಒಳ್ಳೆಯ ಸ್ಥಾನದಲ್ಲಿ ಕೂರಿಸಿ ಎಂಬುದು ನಮ್ಮ ಕೋರಿಕೆಯಾಗಿದೆ ಅಷ್ಟೇ.

ಶ್ರೀ ಬಸವರಾಜ ಬೊಮ್ಮಾಯಿ : ರಾಜ್ಯದ ಇಬ್ಬರು ಪ್ರಮುಖ ಯುವ ಮಂತ್ರಿಗಳಾದ ಶ್ರೀ ಕೃಷ್ಣಭೈರೇಗೌಡ ಮತ್ತು ದಿನೇಶ್ ಗುಂಡೂರಾವ್‌ರವರು ಸಮರ್ಥವಾದ ಯುವಕರಾಗಿದ್ದು, ನೀವು ಸ್ಟೇಟ್ ದರ್ಜೆ ಕೊಟ್ಟು ಯುವಕರ ಪರವಾಗಿ ನೀವಿಲ್ಲವೆಂಬುದನ್ನು ತೋರಿಸಿಕೊಟ್ಟಿದ್ದೀರಿ. ಅವರಿಗೂ ಕೂಡ ಕ್ಯಾಬಿನೆಟ್ ಕೊಟ್ಟಿದ್ದರೆ. ಏನು ತೊಂದರೆಯಾಗುತ್ತಿತ್ತು? ನೀವು ಏನನ್ನು ಕಳೆದುಕೊಳ್ಳುತ್ತಿದ್ದೀರೆಂದು ಹೇಳಿ. Food and Civil Supplies ಮತ್ತು Agriculture ಖಾತೆಗಳು ಕೂಡ ಅಷ್ಟೇ ಪ್ರಮುಖ ಖಾತೆಗಳಾಗಿದ್ದು, ಆ ಖಾತೆಗೂ ಕೂಡ ಗೌರವ ಬರುತ್ತಿತ್ತು. ನೀವು ತಪ್ಪು ಮಾಡಿದ್ದೀರಿ ಇದನ್ನು ತಾವು ಒಪ್ಪಿಕೊಳ್ಳಬೇಕು.

ಉಪಾಧ್ಯಕ್ಷರು : ಆಯಿತು, ಈಗ ವಿಷಯವನ್ನು ಮುಂದುವರೆಸಿ ಬೇಗ conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಉಪಾಧ್ಯಕ್ಷರೆ, ನಾನು ಕೊನೆಯದಾಗಿ ಇಷ್ಟನ್ನು ಹೇಳಬಯಸುತ್ತೇನೆ. ಕೃಷಿಯಲ್ಲಿ ಆಮೂಲಾಗ್ರವಾದ ಚಿಂತನೆ ಮತ್ತು ಬದಲಾವಣೆಯನ್ನು ತರದಿದ್ದರೆ ಯಥಾವತ್ತಾಗಿ ಚರ್ವಿತಚರ್ವಣವಾಗಿರುವಂತಹ ಒಂದು ಬಜೆಟ್ ಬೇಡಿಕೆಯಾಗುತ್ತದೆ. ನೀವೇನು ಹಣವನ್ನು ಕೊಟ್ಟಿದ್ದೀರಿ ಇದರಲ್ಲಿ plan and non plan ಎಲ್ಲವನ್ನೂ ನೋಡಿದಾಗ ಇದಕ್ಕೆ ಅರ್ಧಕ್ಕಿಂತ ಹೆಚ್ಚು ನೀವು ಯಾವುದೇ ರೀತಿಯ productivity ಕೊಡುವುದಕ್ಕೆ ಸಾಧ್ಯವಿಲ್ಲ. ಮೂರು ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಲ್ಲಿ extension services ಗೆ, ಬೀಜ, ಗೊಬ್ಬರಕ್ಕೆ equipments ಎಷ್ಟು ಕೊಡುತ್ತೀರಿ ಮತ್ತು ಬೇರೆ ಬೇರೆ ಹೆಡ್‌ನಲ್ಲಿ ಏನೇನು ಖರ್ಚು ಮಾಡುತ್ತೀರಿ, ನಿಮ್ಮ ಇಲಾಖೆಯ ನಿರ್ವಹಣೆಗೆ ಎಷ್ಟು ಖರ್ಚು ಮಾಡುತ್ತಿದ್ದೀರಿ? ಇದರಲ್ಲಿ salaryಗೆ ಎಷ್ಟು ಹೋಗುತ್ತಿದೆ, non-producivity ಗೆ ಎಷ್ಟು ಖರ್ಚಾಗುತ್ತದೆ? productivity ಎಷ್ಟು ಖರ್ಚಾಗುತ್ತದೆಂಬ ? ಬಗ್ಗೆ ವಿವರವಾಗಿ ತಮ್ಮ ಉತ್ತರದಲ್ಲಿ ಹೇಳಿದರೆ ಯಾವ್ಯಾವ ಯೋಜನೆಗಳು ಅನುಷ್ಠಾನವಾಗುತ್ತವೆ? ಯಾವ್ಯಾವುದು ಆಗುವುದಿಲ್ಲವೆಂಬ ಬಗ್ಗೆ ನಮಗೆ ಕನಿಷ್ಠ ಪಕ್ಷ ಸ್ಪಷ್ಟವಾಗುತ್ತದೆ. ರೈತರ ಪರವಾಗಿ ಆಗಬೇಕಾದರೆ ಇದು ಸಂಪೂರ್ಣವಾಗಿ, ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವ ಚಿಂತನೆಯಲ್ಲಿ ಬದಲಾವಣೆಯಾಗಬೇಕು. ಇವರೇನು 4–5 paragraph ನಲ್ಲಿ ಹೇಳಿದ್ದಾರೆ. ಮತ್ತು ಉಳಿದ ಇಲಾಖೆಯ supplementary ಬಗ್ಗೆ ಏನು ಕೊಟ್ಟಿದ್ದಾರೆ ಇದು ಹಳೆ ಕಾಲದ ವ್ಯವಸ್ಥೆಯಾಗಿದ್ದು, ಇದು ಮುಂದುವರೆದರೆ ಆಯಕಟ್ಟಿನಲ್ಲಿ ಕೆಲವು ಅಧಿಕಾರಿಗಳಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆಯೇ ಹೊರತು ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಇವತ್ತು Agriculture Department ಪರಿಸ್ಥಿತಿ ಬಗ್ಗೆ ಹೇಳಬೇಕೆಂದರೆ, ಎಲ್ಲಾ ವ್ಯವಸ್ಥೆ ಮುಖಾಂತರ ರೈತರಿಗೆ ಗುಡಾರ ಕೊಡುವುದಕ್ಕೆ ಮಾತ್ರ ಸೀಮಿತವಾಗಿದೆ. ಗುಡಾರವೆಂಬ ಶಬ್ದಕ್ಕೆ ಈ ಕಡೆ ಏನೆಂದು ಹೇಳುತ್ತಾರೆಂದು ಗೊತ್ತಿಲ್ಲ. ನಮ್ಮ ಕಡೆ ಗುಡಾರವೆಂದು ಹೇಳುತ್ತಾರೆ. ಅದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಪರಿಣಾಮಕಾರಿಯಾಗಿ ಕೃಷಿ ಇಲಾಖೆ ಜೀವಂತವಾಗಿದೆ, ರೈತರ ಸಂಕಷ್ಟದಲ್ಲಿ ನಾವು ನಿಲ್ಲುತ್ತೇವೆ. ರೈತರಿಗೆ ಸ್ಥೈರ್ಯವನ್ನು ತುಂಬುತ್ತೇವೆ. ಯಾವುದೇ ಕಾರಣಕ್ಕೂ

ಕೂಡ ಆತ್ಮಹತ್ಯೆ ಎನ್ನುವಂತಹ ಶಬ್ದವೂ ಕೂಡ ಬರಬಾರದು ಎನ್ನುವ ದೊಡ್ಡ ಸಂಕಲ್ಪವನ್ನು, ಆ ಪರಿಕಲ್ಪನೆಯನ್ನು ಇಟ್ಟುಕೊಂಡು ಮಾಡಿದ್ದೇ ಆದರೆ ಖಂಡಿತವಾಗಿ ಎಲ್ಲ ರೀತಿಯ ಸಹಕಾರವನ್ನು ನಾವು ಕೊಡುತ್ತೇವೆ. ಇದನ್ನು ಮಾಡದೆ 131 ಲಕ್ಷ ಟನ್ ಮಾಡಿದ್ದೇವೆ ಅದೇ ನಮ್ಮ ಸಾಧನೆ ಎಂದು ಹೇಳಿದರೆ ಅದು ನಿಮ್ಮ ಸಾಧನೆಯಲ್ಲ. ಕೃಷಿ ಇಲಾಖೆ ಇಲ್ಲದಿದ್ದರೂ ಕೂಡ ಅಷ್ಟು ಉತ್ಪಾದನೆಯಾಗುತ್ತಿತ್ತು. ಆದರೆ ಇವತ್ತು ಕೃಷಿಯ ಜೊತೆಗೆ ಆ ರೈತ ಕೂಡ ಅಷ್ಟೇ ಗಟ್ಟಿಯಾಗಬೇಕು, ಸ್ವಾವಲಂಬನೆಯ ಮತ್ತು ಸ್ವಾಭಿಮಾನದ ಬದುಕನ್ನು ಬದುಕಬೇಕು. ಆ ನಿಟ್ಟಿನಲ್ಲಿ ತಾವು ಚಿಂತನೆಯನ್ನು ಮಾಡಿ, ಕೃಷಿಗೆ ಗೌರವವನ್ನು ತೆಗೆದುಕೊಂಡು ಬನ್ನಿ, ಕೃಷಿಕರಿಗೆ ಸ್ವಾಭಿಮಾನದ ಬದುಕನ್ನು ಬದುಕುವುದಕ್ಕೆ ಅವಕಾಶ ಮಾಡಿಕೊಡಿ. ಆ ಕೆಲಸವನ್ನು ತಮ್ಮಿಂದ ನಾನು ನಿರೀಕ್ಷೆ ಮಾಡುತ್ತೇನೆ. ತಾವು ದಯವಿಟ್ಟು ಈ ಕಾರ್ಯಕ್ರಮದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕು. ನಿಮ್ಮ Price Commission ನಿಂದ ಹಿಡಿದು ಇದರಲ್ಲೆಲ್ಲಾ ಏನೇನು ಬದಲಾವಣೆಯಾಗಬೇಕೆಂದು ನಾವೇನು ಸಲಹೆಯನ್ನು ಕೊಟ್ಟಿದ್ದೇವೆ. ಮತ್ತು ನಾವೇನು ಹೊಸ ವಿಚಾರಗಳನ್ನು ಹೇಳಿದ್ದೇವೆ, ಎರಡನ್ನೂ ಅಳವಡಿಸಿಕೊಳ್ಳಬೇಕೆಂಬ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬೇಡಿಕೆ ಮೇಲೆ ಪ್ರಸ್ತಾವನೆಯನ್ನು ಮಂಡಿಸಿದಾಗ ಕೃಷಿ ಮತ್ತು ತೋಟಗಾರಿಕೆ ಎರಡನ್ನೂ ಸೇರಿಸಿ ಮಂಡಿಸಿದ್ದೇವೆ. ಚರ್ಚೆಯಾದ ನಂತರ ಉತ್ತರ ಕೊಡುತ್ತೇವೆ.

ಉಪಾಧ್ಯಕ್ಷರು: ತೋಟಗಾರಿಕೆ ಕೂಡ ಇದೆ ಅದರ ಬಗ್ಗೆ ಕೂಡ ಚರ್ಚೆ ಮಾಡಬಹುದು.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಉಪಾಧ್ಯಕ್ಷರೆ, ನಾನು ತೋಟಗಾರಿಕೆ ಬಗ್ಗೆ ಎರಡು ಮಾತನಾಡುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾಗಿ ಇದು ಒಂದು ಒಳ್ಳೆಯ ಸಾಧನೆ ತರುವಂತಹ ಇಲಾಖೆಯಾಗಿದೆ. ಅಷ್ಟೇ service ಸಹ ಇದೆ. 30 ಜಿಲ್ಲೆಗಳಿಗೂ ಸಹ ಹನಿ ನೀರಾವರಿ ಮತ್ತು ತುಂತುರು ನೀರಾವರಿಯನ್ನು ಕೊಡುತ್ತೇವೆಂದು

ಸರ್ಕಾರ ಆದೇಶ ಮಾಡಿದೆ. ಕಾಫಿ, ಟೀ, ರಬ್ಬರ್ ಹೊರತುಪಡಿಸಿ ಬೇರೆ ಬೆಳೆಗಳಿಗೆ 90% ಸಹಾಯಧನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮೊತ್ತೊಂದು ಕಡೆ ಮೈದಾನ ಪ್ರದೇಶದಲ್ಲಿ ಬೋರ್‌ವೆಲ್, ಕಾಲುವೆ ಇತ್ಯಾದಿ ನೀರನ್ನು ಬಳಸಿ ಬೆಳೆದ ಅಡಿಕೆ ಬೆಳೆಗೆ ಹನಿ ನೀರಾವರಿ ಸಹಾಯಧನವನ್ನು ನೀಡುವುದಿಲ್ಲವೆಂದು ಹೇಳಿದ್ದಾರೆ, ಇದು ಸರ್ಕಾರಿ ಆದೇಶ ಇದನ್ನು ದಿ:21-04-2014 ರಲ್ಲಿ issue ಮಾಡಿದ್ದಾರೆ. ಮೂಲಭೂತವಾಗಿ ಹನಿ ಮತ್ತು ತುಂತುರು ನೀರಾವರಿಗೆ ಸಹಾಯಧನವನ್ನು ಬಯಲು ಪ್ರದೇಶಕ್ಕೆ ಕೊಡಬೇಕು. ಎಲ್ಲೆಲ್ಲಿ ಬೋರ್‌ವೆಲ್ ನೀರಿನ ಮುಖಾಂತರ ತೆಂಗು, ಅಡಿಕೆ ಇತ್ಯಾದಿ ಬೆಳೆಯನ್ನು ಬೆಳೆಯುತ್ತೇವೆ ? ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಮ್ಮ ಉದ್ದೇಶ. ಹನಿ ನೀರಾವರಿ ಮತ್ತು ತುಂತುರು ನೀರಾವರಿ ಕೊಡುವ ಮೂಲ ಉದ್ದೇಶವಾದರೂ ಏನು? ಹೆಚ್ಚು ನೀರು ಬರುವುದಿಲ್ಲ. ನೀರಿನ ಸಮಸ್ಯೆಯಿದೆ, ಆದ್ದರಿಂದ ಇರುವಂತಹ ನೀರನ್ನು ಹಂಚಿ ಪ್ರತಿಯೊಂದು ಭಾಗದಲ್ಲೂ ಕೂಡ ಗಿಡ, ತೋಟವನ್ನು ಉಳಿಸಿಕೊಳ್ಳಬೇಕೆಂಬ ಮೂಲ ಉದ್ದೇಶ. ಇಲ್ಲೇ ಕೊಡುವುದಕ್ಕಾಗುವುದಿಲ್ಲ. ಕೇವಲ ಸಾಂಪ್ರದಾಯಿಕವಾಗಿ ಮಲೆನಾಡು ಮತ್ತು ಕರಾವಳಿ ಜಿಲ್ಲೆಗೆ ಅನ್ವಯವಾಗುತ್ತದೆಂದು ಹೇಳಿದ್ದಾರೆ. ಬಹುಶಃ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿಲ್ಲ. ಒಟ್ಟಾರೆ ಅಡಿಕೆ ಮತ್ತು ತೆಂಗು ಬೆಳೆಗಾರರಿಗೆ ಹನಿ ನೀರಾವರಿಗೇನು 90% ಸಹಾಯಧನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದು ಕಡಿವಾಣವಾಗಿದೆ. ವಿಶೇಷವಾಗಿ ಬಯಲುಸೀಮೆ ಪ್ರದೇಶಕ್ಕೆ ತೊಂದರೆಯಾಗಿದೆ. ದಯಮಾಡಿ ಈ ಸರ್ಕಾರಿ ಆದೇಶವನ್ನು ಹಿಂಪಡೆಯಬೇಕೆಂಬುದು ನನ್ನ ಮೊದಲನೇ ಆದ್ಯತೆಯಾಗಿದೆ.

ನಾವು ಕುರಿ ಸತ್ತರೆ 5 ಸಾವಿರ ಹಣವನ್ನು ಕೊಡುತ್ತೇವೆ. ಮೆಕ್ಕೆಜೋಳಕ್ಕೆ ಸಬ್ಸಿಡಿ ಕೊಟಿದ್ದೇವೆಂದು ಹೇಳಿದ್ದೀರಿ. ನಮ್ಮ ಜಿಲ್ಲಾ ಸಚಿವರಾದ ಮಾನ್ಯ ಟಿ.ಬಿ. ಜಯಚಂದ್ರರವರು ಇಲ್ಲೆ ಇದ್ದಾರೆ. ಅವರೂ ಸಹ ಕ್ಯಾಬಿನೆಟ್‌ನಲ್ಲಿ ಭಾಗವಹಿಸುತ್ತಾರೆ. ಸುಮಾರು 28 ಲಕ್ಷ ತೆಂಗಿನ ಮರಗಳು ಒಣಗಿ ಹೋಗಿವೆ. ಇದರ ಬಗ್ಗೆ ಕೇಂದ್ರದಿಂದ, ರಾಜ್ಯದಿಂದ ಹತ್ತಾರು ಕಮಿಟಿ ಮಾಡಿ, ಸರ್ವೆ ಮಾಡಿ ರಿಪೋರ್ಟ್ ತೆಗೆದುಕೊಂಡರೂ ಸಹ ಇದುವರೆಗೂ ಸರ್ಕಾರ ಒಂದು ರೂಪಾಯಿಯನ್ನೂ, ಒಂದು ಚುಕ್ಕಾಣಿಯನ್ನೂ

ಸಹ ಬಿಡುಗಡೆ ಮಾಡಿಲ್ಲ. ಕಳೆದ ಬಾರಿ ಆಚೆಬಾರಿ ಇದರ ಬಗ್ಗೆ ಹಾಸನ ಸಭೆಯಲ್ಲಿ ಒತ್ತಾಯ ಮಾಡಿದ್ದೆವು, 20,000 ರೂಪಾಯಿಗಳನ್ನು ಒಂದು ಹೆಕ್ಟೇರ್‌ಗೆ ಕೊಡಬೇಕು. ಎಲ್ಲಿ ನೀರು ಬರುತ್ತದೆ. ಅಲ್ಲಿ ಗಿಡ ಬೆಳೆಸಿ ಎಂದು ಕೇಂದ್ರ ಸರ್ಕಾರ ಒಂದು ಆದೇಶ ಮಾಡಿದೆ. ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಮಳೆಯಿಲ್ಲದೆ ಗಿಡಗಳು ಒಣಗಿ ಹೋಗಿವೆ. ಅದಕ್ಕೆ ಏನಾದರೂ ಪರಿಹಾರ ಕೊಡಿ ಎಂದು ಕೇಳುತ್ತಿದ್ದೇವೆ. ಅದರಲ್ಲೂ ಮಾರ್ಚ್ 2014ಕ್ಕೆ ಉರಿ ಬೇಸಿಗೆ ಇರುತ್ತದೆ. ಆಗ ನಾವು ನೀರು ಹಾಕುವುದಕ್ಕೆ ಆಗುತ್ತದೆಯೇ ? ಸರ್ಕಾರ ಆದೇಶವನ್ನು communicate ಮಾಡಿದ್ದಾರೆ. ಕೆಲವು ಕಡೆ ನಾವು ಅದನ್ನು protest ಮಾಡಿ ಹಣವನ್ನು ಖರ್ಚು ಮಾಡದೆ ಹಾಗೇ ಉಳಿಸಿದ್ದೇವೆ. ನಮ್ಮ ಒತ್ತಾಯ ಸರ್ಕಾರಕ್ಕೆ ಏನಾದರೂ ಕಳಕಳಿ ಇದ್ದರೆ, Horticulture ಬಗ್ಗೆ, ರೈತರ ಬಗ್ಗೆ ಒಳ್ಳೆಯ ಚಿಂತನೆಯಿದ್ದರೆ ದಯಮಾಡಿ ಸರ್ಕಾರ 28 ಲಕ್ಷ ಮರಗಳೇನು ಒಣಗಿ ಹೋಗಿವೆ, ಸುಟ್ಟು ಹೋಗಿವೆ, ಅವುಗಳಿಗೆ ಎಷ್ಟು compensation ಕೊಡುತ್ತದೆ ಎನ್ನುವುದನ್ನು ಘೋಷಣೆ ಮಾಡಬೇಕೆಂದು ಈ ಸದನದ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ. ವಿಶೇಷವಾಗಿ ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಬಯಲುಸೀಮೆ ಪ್ರದೇಶವಾದ ಕೋಲಾರ ಇಲ್ಲಿ ಸಾವಿರಾರು ಜನ ರೈತರು ಸಂಪೂರ್ಣ ನಷ್ಟ ಅನುಭವಿಸಿದ್ದಾರೆ. ಅವರೆಲ್ಲರೂ ಇವತ್ತಿನ ದಿವಸ ತೆಂಗು ಮತ್ತು ಅಡಿಕೆ ಮರಗಳನ್ನು ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ರಾಗಿಯಂತೂ ಬೆಳೆಯುವುದಕ್ಕೆ ಆಗುವುದಿಲ್ಲ, ಅವರು ರಾಗಿ, ಭತ್ತ ಬೆಳೆದು ಸತತವಾಗಿ 3 ವರ್ಷವಾಯಿತು. ಬರಗಾಲದಿಂದಾಗಿ ನಾವೆಲ್ಲರೂ ತತ್ತರಿಸುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಗಮನ ಹರಿಸದಿದ್ದರೆ ರೈತ ಏನಾಗಬೇಕು? ಸನ್ಮಾನ್ಯ ಜಯಚಂದ್ರರವರು ಇಲ್ಲಿ ಇದ್ದಾರೆ. ಅವರು ನಮ್ಮ ಜಿಲ್ಲೆಯ ಮಂತ್ರಿಯಾಗಿದ್ದಾರೆ. ತುಂತುರು ನೀರಾವರಿ ಎಲ್ಲಿ ಮಾಡಬೇಕು? ಹನಿ ನೀರಾವರಿಗೆ ಏಕೆ ಸಬ್ಸಿಡಿ ಕೊಡಬೇಕು? ತೆಂಗಿನ ಮರ ಏಕೆ ಒಣಗಿದೆ? ಎಂಬುದರ ಬಗ್ಗೆ ಅವರಿಗೆ ಅರಿವು ಇದೆ. ಆದರೂ ಸರ್ಕಾರ ಇದುವರೆಗೂ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ.Horticulture Depatmentನ ಸನ್ಮಾನ್ಯ ಸಚಿವರು ಇದ್ದಾರೆ. ಕಳೆದ ಬಾರಿ ಅವರು ತೆಂಗಿನ ಮರಗಳಿಗೆ ನಾವು ಎಷ್ಟು ಬೇಕಾದರೂ ಸಬ್ಸಿಡಿ ಕೊಡುತ್ತೇವೆಂದರು. ಆದರೆ ಒಂದು ರೂಪಾಯಿಯೂ ಇದುವರೆಗೆ

ಬಿಡುಗಡೆಯಾಗಿಲ್ಲ. ಕಳೆದ 2–3 ಅಧಿವೇಶನದಿಂದಲೂ ಸತತವಾಗಿ ನಾವು ಇದರ ಬಗ್ಗೆ ಕೇಳುತ್ತಿದ್ದೇವೆ. ಏತಕ್ಕೆ ಸರ್ಕಾರ ಈ ರೀತಿಯ ಧೋರಣೆಯನ್ನು ಅನುಸರಿಸುತ್ತಿದೆ? ಈ ಸರ್ಕಾರ ರೈತರ ವಿರೋಧಿ ಸರ್ಕಾರವೆಂದು ನಾವು ಹೇಳುವುದಕ್ಕೆ ಬಯಸುವುದಿಲ್ಲ, ಆದರೆ ಮೇಲ್ನೋಟಕ್ಕೆ ಈ ಸರ್ಕಾರ 100% ರೈತರ ವಿರೋಧಿ ಸರ್ಕಾರ. ಹಾಗಾಗಿ ಇವತ್ತಿನ ದಿವಸ ಬಹಳ ರೈತರಿಗೆ ಅನ್ಯಾಯವಾಗಿದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಒಂದು ನಿಲುವು ತೆಗೆದುಕೊಂಡು announce ಮಾಡಬೇಕು. ಇವತ್ತು ನಾನು ಬಾವಿಗೆ ಬಂದು ಧರಣಿ ಮಾಡುತ್ತೇನೆ. ಏಕೆಂದರೆ ಸರ್ಕಾರ ಪದೇ ಪದೇ ಪೊಳ್ಳು ಆಶ್ವಾಸನೆಗಳನ್ನು ಕೊಡುತ್ತಿದೆ. ಇದರ ಅವಶ್ಯಕತೆಯಿಲ್ಲ. ನಾನು, ಮಾನ್ಯ ವಾಸುರವರು ಮಾನ್ಯ ಚೆಲುವರಾಯಸ್ವಾಮಿಯವರು, ಕುಮಾರಸ್ವಾಮಿಯವರು ಹೀಗೆ ನಾವೆಲ್ಲರೂ ಕಳೆದ 3–4 ಅಧಿವೇಶನಗಳಲ್ಲಿ ಈ ವಿಷಯವಾಗಿ ಚರ್ಚೆ ಮಾಡಿದ್ದೇವೆ. ಆದರೂ ಇಷ್ಟೆಲ್ಲಾ ಚರ್ಚೆ ಮಾಡಿದ ಮೇಲೂ ಸಹ ಸರ್ಕಾರ ಇದರ ಬಗ್ಗೆ ಗಮನಹರಿಸದಿದ್ದರೆ ಹೇಗೆ? ನಾನು ಸರ್ಕಾರದ ಈ ಧೋರಣಾ ನೀತಿಯನ್ನು ಖಂಡಿಸಿ ಈಗಲೇ ಬಾವಿಯಲ್ಲಿ ಧರಣಿ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಕೃಷ್ಣಪ್ಪರವರೆ, ತಾವು ಧರಣಿ ಮಾಡುವುದಲ್ಲ. ಈ ವಿಷಯವಾಗಿ ಚರ್ಚೆ ಮಾಡಿ, ಇಲ್ಲಿ ಮಂತ್ರಿಗಳಿದ್ದಾರೆ. ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಮಂತ್ರಿಗಳು ನಮ್ಮ ಹೋರಾಟಕ್ಕೆ ಸ್ಪಂದಿಸಿ ಏನಾದರೂ ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಉತ್ತರ ಕೊಡುವ ಸಂದರ್ಭದಲ್ಲಿ ಅವರು ಉತ್ತರ ಕೊಡುತ್ತಾರೆ.

ಎಂ.ಟಿ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಅವರು 3 ಬಾರಿ ಸುಳ್ಳು ಹೇಳಿದ್ದಾರೆ. not one. This is the third time they are telling lie See ಏನಾಗಿದೆ ಎಂದರೆ ರೈತ ಸಾಯುತ್ತಿದ್ದಾನೆ. 28 ಲಕ್ಷ ಮರಗಳು ಸುಟ್ಟುಹೋಗಿವೆ. ಅದರ ಬಗ್ಗೆ ಗಮನ ಹರಿಸದೆ ಹೋದರೆ ಈ ಸರ್ಕಾರ ಗೋಡೆ ಸರ್ಕಾರವೇ?

ಉಪಾಧಕ್ಷರು: ಮಾನ್ಯ ಕೃಷ್ಣಪ್ಪರವರೆ, ಮಂತ್ರಿಗಳು ಇಲ್ಲಿದ್ದಾರೆ. ಅವರು ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಉತ್ತರ ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಉಪಾಧ್ಯಕ್ಷರೆ, ತೆಂಗಿನ ಮರಗಳ ಸಮಸ್ಯೆ ನಿಮಗೂ ಗೊತ್ತಿದೆ. ತೋಟಗಾರಿಕೆ ಸಚಿವರು ಇದರ ಬಗ್ಗೆ ಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದಾರೋ ಅಥವಾ ಕೇಳಿಸಿಕೊಂಡಿದ್ದಾರೆಯೇ? ಅಥವಾ ಇಲ್ಲವೋ ಗೊತ್ತಿಲ್ಲ. ದಯಮಾಡಿ ನೀವು ಅಥವಾ ಅವರು ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರುತೇವೆಂದು ಅಥವಾ at least ಉತ್ತರ ಬರುವುದರೊಳಗೆ ಒಂದು ತೀರ್ಮಾನ ಮಾಡುತ್ತೇವೆಂದಾದರೂ ತಾವು ಹೇಳಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೃಷ್ಣಪ್ಪರವರು ಹೇಳಿದ ಹಾಗೆ ನಾವು ತೆಂಗಿನ ಮರದ ಸಮಸ್ಯೆ ಬಗ್ಗೆ ಹೋರಾಟ ಮಾಡಿದ್ದೇವೆ. ತೆಂಗು Growers ಆಯೋಗ ಕೇಂದ್ರದಿಂದ ಬಂದಾಗ ನಾವು, ಮಾನ್ಯ ದೇವೇಗೌಡರವರು ತೋಟ, ತೋಟಗಳನ್ನು ಸುತ್ತಿ ಆಯೋಗಕ್ಕೆ ಮಾಹಿತಿ ಕೊಟ್ಟಿದ್ದೆವು. ಆ ಮಾಹಿತಿಯಲ್ಲಿ ತೆಂಗಿನ ಮರಗಳು ಸುಳಿ ಕಳಚಿಕೊಂಡು ಬಿದ್ದುಹೋಗಿವೆ ಆ ತೆಂಗಿನ ಮರಗಳಿಗೆ ಪರಿಹಾರ ಕೊಡಿ ಎಂದು ಕೇಳಿದ್ದೆವು. ಆದರೆ ಇವರು ಯಾವ ಪುಣ್ಯಾತ್ಮರೋ, ತಂತ್ರಜ್ಞಾನಿಗಳೋ, ವಿಜ್ಞಾನಿಗಳೋ ನನಗೆ ಗೊತ್ತಿಲ್ಲ. ಅವರು ಸುಮಾರು ಒಂದು ಕೋಟಿ ಹಣವನ್ನು ನಮ್ಮ ಕ್ಷೇತ್ರದಲ್ಲಿ ಬಿಡುಗಡೆ ಮಾಡಿ, ಈ ತೆಂಗಿನ ಮರವನ್ನು ತೆಗೆದು ಮತ್ತೆ ಹೊಸ ಸಸಿಯನ್ನು ಹಾಕಿದರೆ 350 ರೂಪಾಯಿಗಳನ್ನು ಕೊಡುತ್ತೇವೆಂದು sub clause ನಲ್ಲಿ issue ಮಾಡಿದ್ದಾರೆ. ಮಾರ್ಚ್‌ನಲ್ಲಿ ಹಣ ಬಿಡುಗಡೆ ಮಾಡಿ, ಇನ್ನು 15 ದಿವಸಗಳಲ್ಲಿ ತಾವು ಹಣವನ್ನು ಖರ್ಚು ಮಾಡದೇ ಹೋದರೆ ನೋಡಿಕೊಳ್ಳಿ ಎಂದು ಸುಮಾರು ಒಂದು ಕೋಟಿ 30 ಲಕ್ಷ ಹಣವನ್ನು ಅವರು ಲೂಟಿ ಹೊಡೆದಿದ್ದಾರೆ. ಇದರ ಬಗ್ಗೆ ಬೇಕಾದರೆ ತನಿಖೆ ಮಾಡಲಿ. ಸರ್ಕಾರಕ್ಕೆ ಏನಾದರೂ ನೈತಿಕ ಹೊಣೆಗಾರಿಕೆ ಏನಾದರೂ ಇದ್ದರೆ ಇದನ್ನು ದಯಮಾಡಿ ತನಿಖೆಗೆ ಹಾಕಿ. ಒಂದು ವರ್ಗ ಹಣವನ್ನು ಹಂಚಿಕೊಂಡಿದೆ. ಆ ಸಂದರ್ಭದಲ್ಲಿ ನಾವು ಚುನಾವಣೆಯಲ್ಲಿ busy ಇದ್ದೆವು. ಇದು ನಮಗೆ ಗೊತ್ತಾಗಿಲ್ಲ. ತೆಂಗಿನ ಗರಿಯನ್ನು ಕತ್ತರಿಸಿ ಹಾಕಿದರೆ ಒಂದು ಹೆಕ್ಟೇರ್‌ಗೆ ಇಷ್ಟು ಹಣವನ್ನು ಕೊಡುತ್ತೇವೆಂದು, ನೀರು ಇಲ್ಲದೆ ತೆಂಗಿನ ಮರ ಒಣಗಿ ಹೋಗಿದೆ ಅಲ್ಲಿ ಬಾಳೆ ಬೆಳೆಯಿರಿ ಅದಕ್ಕೆ ಹಣ ಕೊಡುತ್ತೇವೆಂದು, ಅದರೊಳಗೆ ಕಿರಾಣಿ ಹಾಕಿ ಅದಕ್ಕೆ ಹಣ ಕೊಟ್ಟಿದ್ದೇವೆಂದು guidelines ಕೊಟ್ಟಿದ್ದಾರೆ. ಸರ್ಕಾರ ಇಲಾಖಾವಾರು

ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಈ ವಿಷಯವನ್ನು ಮಾತಾಡೋಣವೆಂದು ಇದ್ದೆ. ಮಾನ್ಯ ಕೃಷ್ಣಪ್ಪನವರು ಹೇಳಿದ ಹಾಗೆ ಒಂದು ಕ್ಷೇತ್ರಕ್ಕೆಂದು ಒಂದು ಕೋಟಿ, ಒಂದೂವರೆ ಕೋಟಿ ಹಣ ಬಿಡುಗಡೆಯಾಗಿದೆ. ಅದರೆ ಬಿಡುಗಡೆಯಾಗಿರುವ ಹಣವನ್ನು ಲೂಟಿ ಮಾಡಿದ್ದಾರೆ. ನೈತಿಕತೆ ಇದ್ದರೆ ಸರ್ಕಾರ ಇದರ ಬಗ್ಗೆ ತನಿಖೆ ಮಾಡಲು ಆದೇಶ ಮಾಡಲಿ. ನಿಮ್ಮ ಅಧಿಕಾರಿಗಳು ಯಾವುದಕ್ಕೋಸ್ಕರ ಈ ರೀತಿಯ ಆದೇಶವನ್ನು ಕೊಟ್ಟಿದ್ದಾರೆ? ಅವರು ನೀಡಿರುವ ಆದೇಶದಲ್ಲಿ ನಿಬಂಧನೆಗಳೇನಿವೆ? ಹಾಗೂ ಯಾವ ರೀತಿಯಲ್ಲಿ ಹಣವನ್ನು ಖರ್ಚು ಮಾಡಿ ಎಂದು ನಿಯಮಾವಳಿಯನ್ನು ಕೊಟ್ಟಿದ್ದಾರಲ್ಲಾ ಅದರ ಬಗ್ಗೆ ಮಾಹಿತಿಯನ್ನು ಸಂಪೂರ್ಣವಾಗಿ ಸದನಕ್ಕೆ ತರಿಸಿ. ಬೇಸಿಗೆಯಲ್ಲಿ ತೆಂಗಿನ ಮರ ನೀರು ಇಲ್ಲದೇ ಸಾಯುವಾಗ ಅದನ್ನು ಕಿತ್ತು ಮತ್ತೆ ಹೊಸದಾಗಿ ತೆಂಗಿನ ಮರವನ್ನು ನೆಟ್ಟರೆ 350 ರೂಪಾಯಿಗಳನ್ನು ಕೊಡುತ್ತೇವೆಂದು ತಾವು ನಿಯಮ ಹಾಕಿದ್ದೀರಿ. ಈ ನಿಯಮವನ್ನು ಹಣ ಲೂಟಿ ಮಾಡುವುದಕ್ಕೆ ಹಾಕಿದ್ದೀರಾ? ನಿಜವಾಗಿ ಅಲ್ಲಿ ಹಣ ಲೂಟಿ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ತನಿಖೆ ಮಾಡಿ. ಮರ ಕಳೆದುಕೊಂಡವರಿಗೆ ಒಂದು ಮರಕ್ಕೆ 200, 300 ರೂ.ಗಳು ಬರುತ್ತದೆ. ನಿಮಗೆ spot ನಲ್ಲಿ ಚೆಕ್ ಕೊಡಿಸುತ್ತೇವೆಂದು ನಾವು ಅವರಿಗೆ ಹೇಳಿಕೊಂಡು ಬಂದಿದ್ದೇವೆ. ಕೆಲವು ರೈತರು ಹಾಳಾಗಿರುವ ತಮ್ಮ ತೆಂಗಿನ ಮರಗಳನ್ನು ಕತ್ತರಿಸದೆ ಹಾಗೇ ಬಿಟ್ಟಿದ್ದಾರೆ. ನಮ್ಮ ಕ್ಷೇತ್ರದ ಬಾಣಾವಾರದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಬಿ.ಹೆಚ್. ರಾಜು ಎನ್ನುವವರು ನಿಮ್ಮಿಂದ ಪರಿಹಾರ ಬರುವುದಿಲ್ಲವೆಂದು 600 ತೆಂಗಿನ ಮರಗಳನ್ನು ಒಂದೇ ದಿವಸದಲ್ಲಿ ಕಟಾವು ಮಾಡಿದ್ದಾನೆ. ಪರಿಹಾರ ಕೊಡುತ್ತಾರೆಂದು ನಾವು ಸಹ ಸುಳ್ಳು ಹೇಳುತ್ತಿದ್ದೇವೆ. ತೋಟಗಾರಿಕೆ ಸಚಿವರು ಬಹಳ ಒಳ್ಳೆಯವರಿದ್ದಾರೆ. ಅವರಿಗೆ ದಗಲಬಾಜಿ ಬಗ್ಗೆ ಗೊತ್ತಿಲ್ಲ. ಸಚಿವರು ದಯಮಾಡಿ ರೈತರ ಬಗ್ಗೆ ಗೌರವದಿಂದ ನಡೆದುಕೊಳ್ಳಿಯೆಂದು ನಿಮ್ಮ ಅಧಿಕಾರಿಗಳಿಗೆ ಹೇಳಿ. ಒಂದು ತಿಂಗಳಿನಲ್ಲಿ ಹಣವನ್ನು ಖರ್ಚು ಮಾಡಬೇಕೆಂದು ರೈತರಿಗೆ ಹೇಳಿದರೆ ಅವರು ಬೇಸಿಗೆಯಲ್ಲಿ ಹಣವನ್ನು ಹೇಗೆ ಖರ್ಚು ಮಾಡುತ್ತಾರೆ? ಯಾರ್ಯಾರೋ ಅವರ ಹೆಸರಿಗೆ ಬರೆಸಿಕೊಂಡು ಹಣವನ್ನು ಲೂಟಿ ಮಾಡಿದ್ದಾರೆ. ನಿಜವಾಗಿ ಯಾರು ಮರ ಕಳೆದುಕೊಂಡವರಿಗೆ ಅವರಿಗೆ ಪರಿಹಾರ ಸಿಕ್ಕಿಲ್ಲ. ಇದು ನಿಜವಾದ ಪರಿಹಾರ ಅಲ್ಲ. ಈ ರೀತಿ ರೈತರನ್ನು ಉದ್ಧಾರ ಮಾಡುವಂಥ ಕೆಲಸವನ್ನು ಮಾಡಬೇಡಿ. ದಯಮಾಡಿ ನಾಳೇನೇ ಇದರ ಬಗ್ಗೆ ತನಿಖೆ ಮಾಡಿಸಿ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಸಹಾಯಧನವನ್ನು ಬಯಲು ಸೀಮೆ ಪ್ರದೇಶಕ್ಕೆ ಸ್ಥಗಿತ ಮಾಡಿದ್ದಾರೆ. ಮೈದಾನ ಪ್ರದೇಶದಲ್ಲಿ ಬೋರ್‌ವೆಲ್, ಕಾಲುವೆ ನೀರನ್ನು ಬಳಸಬಹುದು. ಅಡಿಕೆ ಬೆಳೆಗಳಿಗೆ ಹನಿ ನೀರಾವರಿ ಸಹಾಯಧನವನ್ನು ನೀಡಲಾಗುವುದಿಲ್ಲವೆಂದು ಆದೇಶ ಮಾಡಿದ್ದಾರೆ. ಬಯಲು ಪ್ರದೇಶಕ್ಕೆ ಸಹಾಯಧನವನ್ನು ಕೊಡುವುದು ಮೂಲ ಉದ್ದೇಶವಾಗಿದೆ. ಅದನ್ನು ಬಿಟ್ಟು ಕರಾವಳಿ ಪ್ರದೇಶಕ್ಕೆ ಕೊಡಿ ಎಂದು ಆದೇಶ ಮಾಡಿದ್ದಾರೆ. ಆ ಮಹಾಶಯ ಯಾರು? ನನಗೆ ಅರ್ಥವಾಗುತ್ತಿಲ್ಲ. ಸನ್ಮಾನ್ಯ ಸಚಿವರು ಹೇಳಬೇಕಾಗುತ್ತದೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ನಮ್ಮ ಮಾನ್ಯ ಶಿವಲಿಂಗೇಗೌಡರು ಆಗಲೇ ಹೇಳಿದಂತೆ ಅಧಿಕಾರಿಗಳು ಕಛೇರಿಯಲ್ಲಿ ಕುಳಿತುಕೊಂಡು ಕರಾವಳಿ ಭಾಗದವರಿಗೆ ಆದೇಶ ಮಾಡಿ ನಮ್ಮ ಭಾಗದ ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿತ್ರದುರ್ಗ, ತುಮಕೂರು ಇಲ್ಲಿರುವಂಥ ರೈತರು ನಾವು ಎಲ್ಲಿಗೆ ಹೋಗಬೇಕು? ಸಹಾಯಧನ ಏಕೆ ಕೊಡಬಾರದು ಎಂದು ಕೊನೇಪಕ್ಷ explain ಮಾಡಬೇಕು? ಏತಕ್ಕೆ ಈ ರೀತಿ ಆದೇಶ ಮಾಡಿದ್ದೀರಿ? ಇದರ ಉದ್ದೇಶವಾದರೂ ಏನು ? Major ಆಗಿ ನಮ್ಮ ಭಾಗಕ್ಕೆ ಸಹಾಯಧನ ಕೊಡಬೇಕು. ಅದನ್ನು ನಿಲ್ಲಿಸಿ, ನೀವು ಕರಾವಳಿಗೆ ಸಹಾಯಧನ ಕೊಡುತ್ತೇವೆ ಎಂದರೆ ಏನರ್ಥ? ದಯಮಾಡಿ ಸರ್ಕಾರ ಈ ಆದೇಶವನ್ನು ಕೂಡಲೇ withdraw ಮಾಡಬೇಕು. ಮಾನ್ಯ ಕೃಷಿ ಸಚಿವರು ಇದಕ್ಕೆ reply ಕೊಡಬೇಕು.

ಉಪಸಭಾಧ್ಯಕ್ಷರು : ಶ್ರೀ ಪ್ರಸನ್ನಕುಮಾರ್.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಉಪಸಭಾಧ್ಯಕ್ಷರೆ, ದಯಮಾಡಿ crop insuranceನ್ನು ಹೆಚ್ಚು ಮಾಡುವುದಕ್ಕೆ recommend ಮಾಡಬೇಕು. ಈಗಾಗಲೇ ಜುಲೈವರೆಗೂ ಇದ್ದದ್ದನ್ನು ಜೂನ್ ಎಂದು ಮಾಡಿದ್ದಾರೆ. ಈಗಾಗಲೇ ಮುಂಗಾರು ಮುಂದಕ್ಕೆ ಹೋಗಿದೆ, ಬಿತ್ತನೆ ಆಗಿಲ್ಲ ಬೆಳೆ ಬೆಳೆದಿಲ್ಲ, crop cutting experiment ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು) : ಮಾನ್ಯ ಉಪಸಭಾಧ್ಯಕ್ಷರೆ, ಶೂನ್ಯ ವೇಳೆ ಪ್ರಶ್ನೆಯನ್ನು ಈಗ ಕೇಳುತ್ತಿದ್ದಾರೆ, ಆದರೂ ತೊಂದರೆ ಇಲ್ಲ. ರೈತರ

ವಿಚಾರವಾಗಿರುವುದರಿಂದ ಉತ್ತರ ಕೊಡುತ್ತೇನೆ. ಈ ತಿಂಗಳಿಗೆ ಅಂತ್ಯಗೊಳಿಸುವುದು ಸಮಂಜಸವಲ್ಲವೆಂದು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಬಿತ್ತನೆ ಸಹ ಆಗಿಲ್ಲ. ಮೊದಲ ಬಾರಿಗೆ ಹೊಸ ಯೋಜನೆಯನ್ನು ಜಾರಿ ಮಾಡುತ್ತಿರುವುದರಿಂದ, ಇದು ಸದುಪಯೋಗವಾಗುವುದಿಲ್ಲ. ಜುಲೈ 31ರವರೆಗೆ ವಿಸ್ತರಿಸಬೇಕೆಂದು ಪತ್ರ ಬರೆದಿದ್ದೇವೆ. ಇನ್ನು ಹತ್ತು ನಿಮಿಷದಲ್ಲಿ ನಿಮಗೆ ಪತ್ರದ ನಕಲನ್ನು ಕಳುಹಿಸಿ ಕೊಡುತ್ತೇನೆ.

ಉಪಸಭಾಧ್ಯಕ್ಷರು : ಶ್ರೀ ರಾಜೀವ್ ಪಿ.

ಶ್ರೀ ರಾಜೀವ್.ಪಿ (ಕುಡಚಿ) : ಸನ್ಮಾನ್ಯ ಉಪಸಭಾಧ್ಯಕ್ಷರೆ, ರಾಷ್ಟ್ರಕವಿ ಕುವೆಂಪುರವರು ಹೇಳುತ್ತಾರೆ, "ದೇಶಗಳಳಿಯಲಿ, ದೇಶಗಳುಳಿಯಲಿ, ಹಾರಲಿ ಗದ್ದುಗೆ ಮಕುಟಗಳಲಿ, ಸೈನಿಕರೆಲ್ಲಾ ಬಿತ್ತುಳುವುದನವ ಬಿಡುವುದೇ ಇಲ್ಲ" ಎಂದು ಹೇಳಿದ್ದಾರೆ, ಈ ದೇಶದ ಬೆನ್ನೆಲುಬು ಅನ್ನದಾನ ರೈತ, ರೈತನ ಬಗ್ಗೆ, ಇತಿಹಾಸವನ್ನು ಓದುತ್ತಾ ಬಂದರೆ ಸ್ವಾತಂತ್ರ್ಯ ಪೂರ್ವದಿಂದಲೂ ರೈತನ ಬಗ್ಗೆ ಮಾತುಗಳಿವೆ. ಇವತ್ತು ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ಸಹ ರೈತ ಯಾವ ಪರಿಸ್ಥಿತಿಯಲ್ಲಿದ್ದಾನೆ? ಕೃಷಿಯನ್ನು ಅವಲಂಬನೆ ಮಾಡಿದಂಥ ಈ ಸಮುದಾಯವನ್ನು ನಾವು ಇವತ್ತಿಗೂ ಅಂಥ ಶೋಚನೀಯ ಪರಿಸ್ಥಿತಿಯಲ್ಲಿ ಏಕೆ ನೋಡುತ್ತಿದ್ದೇವೆ? ಕೃಷಿ ಇಲಾಖೆ ಅದರಲ್ಲೂ ಸಂಪೂರ್ಣವಾಗಿ ತನ್ನ ಬದ್ಧತೆಯನ್ನು ತೋರಿಸಿದ್ದರೆ ನಾವು ಏನಾದರು ಬದಲಾವಣೆ ಮಾಡುವುದಕ್ಕೆ ಸಾಧ್ಯವಿತ್ತೇ? ಈ ಎಲ್ಲಾ ಚಿಂತನೆಗಳನ್ನು ಮಾಡಬೇಕಾಗಿದೆ. ನಮ್ಮ ಆಲೋಚನೆಗಳು ಕೇವಲ ಚುನಾವಣೆಗಾಗಿ ರೈತನನ್ನು ಬಳಸಿಕೊಳ್ಳುವಂಥದ್ದು, ನಾವು ಕೂಡಾ ಈ ಸದನದಲ್ಲಿ ರೈತನ ಬಗ್ಗೆ ಮಾತನಾಡಲಿಲ್ಲವೆಂದರೆ ನಾಳೆ ನಮ್ಮ ಭಾಗದ ರೈತರು ನಮಗೆ ಬೆಂಬಲ ಕೊಡುವುದಿಲ್ಲವೆನ್ನುವ ಭಯದಿಂದ ಮಾತನಾಡುತ್ತಿದ್ದೇವೆಯೇ? ಈ ಎಲ್ಲಾ ವಿಷಯಗಳ ಆತ್ಮ ಚಿಂತನೆಯನ್ನು ನಾವು ಮಾಡಿಕೊಳ್ಳಬೇಕಾಗಿದೆ. ಇವತ್ತಿಗೂ ಶೇಕಡಾ67 ರಿಂದ 70 ರಷ್ಟು ಪ್ರತಿಶತ ಜನಸಂಖ್ಯೆ ಕೃಷಿಯನ್ನು ಅವಲಂಬನೆ ಮಾಡಿದ್ದಾರೆ. ಶೇಕಡಾ.67 ರಷ್ಟು ಕೃಷಿಯನ್ನು ಅವಲಂಬಿತವಾಗಿರುವ ರೈತರಲ್ಲಿ ಎಷ್ಟು ಜನ ರೈತರು ನಾನು ಒಬ್ಬ ಕೃಷಿಕನಾಗಬೇಕೆನ್ನುವ ಉದ್ದೇಶದಿಂದ ಬಂದಿದ್ದಾರೆ? ಬಹುಶಃ ಶೇಕಡಾ

1ರಷ್ಟು ಸಹ ಮನಗೆ ಕಾಣುವುದಿಲ್ಲ. ನಾನು ರೈತನಾಗಬೇಕು, ನಾನು ಪ್ರಗತಿಪರ ರೈತ ಎಂದು ಕರೆಸಿಕೊಳ್ಳಬೇಕು, ನಾನು ಒಳ್ಳೆಯ ಬೆಳೆಯನ್ನು ತೆಗೆಯಬೇಕು. ಅದರ ಮೂಲಕ ಈ ದೇಶದ GDPಗೆ ನನ್ನ ಕೊಡುಗೆಯನ್ನು ನಾನು ಕೊಡಬೇಕೆನ್ನುವ ಉದ್ದೇಶದಿಂದ ಯಾರೂ ಕೃಷಿಕರಾಗುತ್ತಿಲ್ಲ. ಒತ್ತಾಯದಿಂದ ಈ ವ್ಯವಸ್ಥೆ ಅವರನ್ನು ಕೃಷಿಕನನ್ನಾಗಿ ಮಾಡುತ್ತಿದೆ. ಈ ದೇಶದ ಪ್ರತಿಯೊಬ್ಬ ರೈತ ನನ್ನ ಮಗ ರೈತನಾಗಲಿ ಎಂದು ಬಯಸುತ್ತಿಲ್ಲ. ನನ್ನ ಮಗ ಯಾವುದಾದರೂ ಡಿ-ಗ್ರೂಪ್ ನೌಕರನಾದರೂ ಪರವಾಗಿಲ್ಲ, ಒಂದು ನೌಕರಿಗೆ ಹೋಗಲಿ ಎಂದು ಹೇಳಿ ಯೋಚನೆ ಮಾಡುತ್ತಾನೆ. ಏಕೆಂದರೆ, ಈ ಸದನ ಒಬ್ಬ ಸದಸ್ಯನಾಗಿ ನಾವೆಲ್ಲರೂ ಈ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ರೈತನ ಬಾಯಿಯಿಂದ ಅಂಥ ಆಲೋಚನೆ ಬರುವಂಥ ಮಟ್ಟಕ್ಕೋ ನಾವು ಇನ್ನೂ ರೈತನನ್ನು ಇಟ್ಟಿದ್ದೇವೆ ಎನ್ನುವಂಥ ಆಲೋಚನೆಯನ್ನು ಮಾಡಬೇಕಾಗಿದೆ. ಇಲಾಖೆಯ ಮೇಲೆ ತಾವೇನು ಇಲಾಖಾವಾರು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಇದು ಒಂದು ಅಂಥ ಪ್ರಾರಂಭದ ಬೆಳವಣಿಗೆ ಎಂದು ಹೇಳಿ, ತಮಗೆ ಅಭಿನಂದನೆಯನ್ನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಸನ್ಮಾನ್ಯ ಉಪಸಭಾಧ್ಯಕ್ಷರೆ, ರೈತನಿಗೆ 3 ಅಂಶಗಳು ಬಹಳ ಮುಖ್ಯ, ಮಣ್ಣಿನ ಫಲವತ್ತತೆ ಇರಬೇಕು, ಸಮರ್ಪಕವಾದ ನೀರು ಇರಬೇಕು ಹಾಗೂ ತಾನು ಬೆಳೆದಂಥ ಬೆಳೆಗೆ ಒಂದು ವೈಜ್ಞಾನಿಕವಾದ ಬೆಲೆ ಸಿಗಬೇಕು. ಈ ಮೂರು ಅಂಶಗಳನ್ನು ನಾವು ಕೊಟ್ಟರೆ ಸಾಕು ರೈತರು ಸ್ವಾವಲಂಬಿಗಳಾಗಿ ಅವರ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಮಣ್ಣಿನ ಸತ್ವವನ್ನು ಹೆಚ್ಚಿಸುವಿಕೆ ಯೋಜನೆಗೆ ಈ ಸರ್ಕಾರ ಕಳೆದ ಸಾರಿಯಲ್ಲಿ 15 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಈವರ್ಷವೂ ಸಹ 15 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಈ ಮೊತ್ತ ಯಾವುದಕ್ಕೂ ಸಾಕಾಗುವುದಿಲ್ಲ. ಮಣ್ಣಿನ ಸತ್ವವನ್ನು ಉಳಿಸಲಿಲ್ಲವೆಂದರೆ, ಇವತ್ತು ಕೃಷಿ ಅಭಿವೃದ್ಧಿ ಯೋಜನೆಯಲ್ಲಿ ನಾವು ಕಾರ್ಖಾನೆಗಳಿಗೆ ಸವಲತ್ತುನ್ನು ಕೊಡುತ್ತಿದ್ದೇವೆ, ರಾಸಾಯನಿಕ ಗೊಬ್ಬರವನ್ನು ಹಾಕಿ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡುತ್ತಿದ್ದೇವೆ. ಎಲ್ಲೋ ಒಂದು ಕಡೆ ಬಂಡವಾಳಶಾಹಿಗಳ ಕಡೆಗೆ ನಾವು ಒತ್ತು ಕೊಡುತ್ತಿದ್ದೇವೆ. ಮಣ್ಣಿನ ಫಲವತ್ತತೆಯನ್ನು ಇವತ್ತು

ಕಾಪಾಡಲಿಲ್ಲವೆಂದರೆ, ಇದೇ ವೇಗದಲ್ಲಿ ನಾವು ಹೋದೆವೆಂದರೆ ಇನ್ನು 15–20 ವರ್ಷಗಳಲ್ಲಿ ಈ ಮಣ್ಣಿನಲ್ಲಿ ಏನೂ ಹುಟ್ಟುವುದಿಲ್ಲ, ಮಣ್ಣು ತನ್ನಲ್ಲಿರುವಂಥ ಸತ್ವ ಕಳೆದುಕೊಂಡಿತೆಂದರೆ, ಅನಂತರ ನಾವು ರೈತರಿಗೆ ಏನು ಪರಿಹಾರ ಕಲ್ಪಿಸುತ್ತೇವೆ? ಅದಕ್ಕಾಗಿ ಸರ್ಕಾರ ಈ ಆಯವ್ಯಯ ಅಂದಾಜಿನಲ್ಲಿ ಇಟ್ಟಿರುವಂಥ 15 ಕೋಟಿ ರೂಪಾಯಿ ಬಹಳ ಕಡಿಮೆ ಅಂಶ ಎನ್ನುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅದೇ ರೀತಿ ರೈತ ಬಹಳ ದೊಡ್ಡ ಶೋಷಣೆಯನ್ನು ಅನುಭವಿಸುತ್ತಿದ್ದಾನೆ. ರೈತ ತಾನು ಬೆಳೆದಂಥ ಬೆಳೆಗೆ ಬೆಲೆ ಸಿಗುವುದಿಲ್ಲ. ಗ್ರಾಹಕನಿಗೂ ಸುಲಭವಾದ ದರದಲ್ಲಿ ಸಿಗುವುದಿಲ್ಲ. ಹಾಗಾದರೆ, ಹಣ ಎಲ್ಲಿ ಕಳ್ಳತನವಾಗುತ್ತಿದೆ? ಮಧ್ಯವರ್ತಿಗಳಿಂದ ಲೂಟಿ ಆಗುತ್ತಿದೆ. ಈ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು, ರೈತನಿಗೆ ಎಷ್ಟು ಜವಾಬ್ದಾರಿ ಕೊಡಬೇಕೆಂದರೆ ರೈತನಿಗೆ ಸಂಪೂರ್ಣವಾದ ಮಾಹಿತಿಯನ್ನು ಕೊಡಬೇಕು. ರೈತನಿಗೆ ಉಪಕರಣ ಕೊಡಬೇಕು, ಸೌಲಭ್ಯ ಕೊಡಬೇಕು, ತಾನು ಬೆಳೆಯನ್ನು ಬೆಳೆದಾಗ ಅದನ್ನು ಮಾರುಕಟ್ಟೆಗೆ ಸಾಗಿಸುವುದು, ಮತ್ತೆ ಮಾರುಕಟ್ಟೆಯ ವಹಿವಾಟನ್ನು ನೋಡಿಕೊಳ್ಳುವಂಥ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡಾಗ ಮಾತ್ರ ರೈತ ನೆಮ್ಮದಿಯಿಂದ ಬುದುಕುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಪಾಲು ಶೇಕಡಾ. 75 ಮತ್ತು ರಾಜ್ಯ ಸರ್ಕಾರದ ಪಾಲು ಶೇಕಡಾ.25 ಇದೆ. 2013–14ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಸಂಸ್ಕರಣ ಅಭಿಯಾನ ಏನು ಪ್ರಾರಂಭವಾಗಿದೆ, ಇವತ್ತು ಆ ಶುದ್ಧೀಕರಣ ಘಟಕಗಳನ್ನು ರೈತರಿಗೆ ಕೊಡುವಂಥ ವ್ಯವಸ್ಥೆ ಈ ಸರ್ಕಾರದಿಂದ ಕಾಣುತ್ತಿಲ್ಲ. ಈ ಬಾರಿ 1,172 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ರೈತರಿಗೆ ಮುಟ್ಟುವಂಥ ವ್ಯವಸ್ಥೆಯಾಗಬೇಕು.

ರಾಷ್ಟ್ರೀಯ ಕೃಷಿ ವಿಮಾ ಯೋಜನೆ, ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ, ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಇವು ರೈತರಿಂದ ಬಹಳಷ್ಟು ದೂರವಾಗಿವೆ. ರೈತ ಬರಗಾಲಕ್ಕೆ ತುತ್ತಾಗಿರುತ್ತಾನೆ ಅಥವಾ ಅತಿವೃಷ್ಟಿಗೆ ತುತ್ತಾಗಿರುತ್ತಾನೆ, ರೈತ ತಾನು ಬೆಳೆದಂಥ ಬೆಳೆ ನಾಶವಾಗುವುದನ್ನು ಕಣ್ಣ ಮುಂದೆ ನೋಡುತ್ತಾನೆ, ರೈತ ಬಿಸಿಲಿನಲ್ಲಿ ಬೆವರನ್ನು ಸುರಿಸಿ ಬೆಳೆಯನ್ನು

ಬೆಳೆಯುತ್ತಾನೆ. ತಾನು ಬೆಳೆಯನ್ನು ಬೆಳೆದ ನಂತರ ಈ ಬಾರಿ ನಾನು ಸಂಸಾರವನ್ನು ಕಟ್ಟಿಕೊಳ್ಳುತ್ತೇನೆ, ನನ್ನ ಕುಟುಂಬವನ್ನು ಈ ರೀತಿ ನಿರ್ವಹಣೆ ಮಾಡಿಕೊಳ್ಳುತ್ತೇನೆಂದು ಯೋಜನೆ ಮಾಡುತ್ತಿರಬೇಕಾದರೆ, ಅತಿವೃಷ್ಟಿಯಿಂದಲೋ ಅಥವಾ ಪ್ರಾಣಿಗಳ ದಾಳಿಯಿಂದಲೋ ಅಥವಾ ಬರಗಾಲದಿಂದ ಆ ಬೆಲೆ ನಷ್ಟವಾಯಿತೆಂದರೆ, ಅವನು ಬೆವರನ್ನು ಸುರಿಸಿ ತಾನು ಬೆಳೆದಂಥ ಬೆಳೆ ಕಣ್ಣಿನ ಮುಂದೆ ಹಾಳಾಗಿದ್ದಕ್ಕೆ ಪರಿಹಾರ ಕೊಡಿ ಎಂದು ಕೇಳುವುದಕ್ಕೆ ಹೋದರೆ, ಎ.ಸಿ. ರೂಮಿನಲ್ಲಿ ಕುಳಿತು ಅಧಿಕಾರಿಗಳು ಬರೆಯುತ್ತಾರೆ. ಅವನು ಬಿಸಿಲಿನಲ್ಲಿ ಬೆವರನ್ನು ಚೆಲ್ಲಿ, ಬೆಳೆಯನ್ನು ಬೆಳೆದಿರುತ್ತಾನೆ. ಅವನು ಬೆಳೆದಂಥ ಬೆಳೆಗೆ ಎಷ್ಟು ಪರಿಹಾರ ಕೊಡಬಹುದು? ಒಂದು ಎಕರೆಗೆ 1,500 ರೂಪಾಯಿ ಅಥವಾ ಒಂದು ಎಕರೆಗೆ 2,000 ರೂಪಾಯಿ ಅಷ್ಟೇ. ಹಾಗಿದ್ದರೆ, ರಾಷ್ಟ್ರೀಯ ಕೃಷಿ ವಿಮಾ ಯೋಜನೆ, ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಇವೆಲ್ಲವೂ ರೈತರ ಕಣ್ಣೀರನ್ನು ಒರೆಸುವಂತ ತಂತ್ರಗಳು, ಇದರಲ್ಲಿ ವೈಜ್ಞಾನಿಕವಾಗಿ ರೈತನಿಗೆ ಭರವಸೆಯನ್ನು ಮೂಡಿಸಬೇಕು. ಒಂದು ಎಕರೆಯಲ್ಲಿ ಬೆಳೆದಂಥ ಭತ್ತಕ್ಕೆ ಇಷ್ಟು ಆದಾಯವಿದೆ, ಅಡಿಕೆ ಬೆಳೆಗೆ ಇಷ್ಟು ಆದಾಯವಿದೆ. ತೆಂಗು ಬೆಳೆಗೆ ಇಷ್ಟು ಆದಾಯವಿದೆ, ಕಬ್ಬು ಬೆಳೆಗೆ ಇಷ್ಟು ಆದಾಯವಿದೆ ಎಂದು ತಿಳುವಳಿಕೆ ನೀಡಬೇಕು. ಒಂದು ವೇಳೆ ಈ ಸಾರಿ ಪರಿಸರ ನಮಗೆ ಬೆಂಬಲವನ್ನು ಕೊಡದೇ ಹೋದರೆ, ಪ್ರಕೃತಿ ಬೆಂಬಲವನ್ನು ಕೊಡದೇ ಹೋದರೆ, ಮಳೆ ಹಾನಿಯಾದರೆ ನಿಮಗೆ ಇಂತಿಷ್ಟು ಪರಿಹಾರವನ್ನು ಕೊಡುತ್ತೇವೆಂದು advance ಆಗಿ ಸರ್ಕಾರ ಹೇಳುವಂಥ ಘೋಷಣೆ ಮಾಡಬೇಕು. ಆದರೆ, ಇಂಥ ಯಾವುದೇ ಘೋಷಣೆ ಈ ಸರ್ಕಾರದ ಈ ಎಲ್ಲಾ ಯೋಜನೆಗಳಲ್ಲಿ ನನಗೆ ಕಾಣುತ್ತಿಲ್ಲ. 2013–14ನೇ ಸಾಲಿನಲ್ಲಿ ಈ ಎಲ್ಲಾ ಯೋಜನೆಗಳಿಗೆ ಈ ಸರ್ಕಾರ 139 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಆದರೆ, ಈ ವರ್ಷ ಆಯವ್ಯಯದ ಅಂದಾಜಿನಲ್ಲಿ ಅದನ್ನು 95 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ, ಯಾವ ರೈತ ಭರವಸೆಯಿಂದ ಬದುಕುತ್ತಾನೆ? ಯಾವ ರೈತ ಭರವಸೆಯಿಂದ ಬೆಳೆಯನ್ನು ಬೆಳೆಯುವುದಕ್ಕೆ ಮುಂದಾಗುತ್ತಾನೆ? ಅದಕ್ಕಾಗಿ ಈಗೇನು ಕೇವಲ ರೂ.95 ಕೋಟಿಗಳನ್ನು ಇಟ್ಟಿದ್ದೀರಿ, ಇದು ಕನಿಷ್ಠ ರೂ.500ಕೋಟಿಗಳನ್ನು ಇಟ್ಟಾಗ ಮಾತ್ರ ನಾವು ರೈತನಿಗೆ ಏನಾದರೊಂದು ಭರವಸೆಯನ್ನು ಮೂಡಿಸುವುದಕ್ಕೆ ಸಾಧ್ಯವಿದೆ.

ಮಾನ್ಯ ಅಧ್ಯಕ್ಷರೆ, ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಮುಖ್ಯವಾಹಿನಿಗೆ ತರಬೇಕು, ಕೃಷಿಯನ್ನು ಅವಲಂಬಿತವಾಗಿರುವಂತಹ ಈ ಜನಾಂಗವನ್ನು ಮೇಲಕ್ಕೆ ಎತ್ತಬೇಕೆಂದು ಏನು ಯೋಜನೆಗಳಿವೆ, ಕೃಷಿ ಯಾಂತ್ರೀಕರಣ, ಕೃಷಿ ನಿರ್ದೇಶನಲಯದಿಂದ ಆಗುವಂತಹ ಯೋಜನೆಗಳು ನಿಜವಾಗಿಯೂ ಆ ಜನಾಂಗದವರಿಗೆ ಮುಟ್ಟುತ್ತಿಲ್ಲ. ಕೃಷಿ ಅಧಿಕಾರಿಗಳು ಯಾರದ್ದೋ ಜಾತಿ ಪ್ರಮಾಣ ಪತ್ರವನ್ನು ತಂದು ಬೇರೆ ಯಾರಿಗೋ ಆ ಉಪಕರಣಗಳನ್ನು ಕೊಡುತ್ತಿದ್ದಾರೆ. ಕೃಷಿ ಸಚಿವರು ಬೆಳಗಾವಿಗೆ ಭೇಟಿ ನೀಡಿದಾಗ ಈ ವಿಷಯದ ಕುರಿತು ಬಹಳ ಗಂಭೀರವಾಗಿ ಅವರ ಗಮನವನ್ನು ಸೆಳೆಯುವ ಕೆಲಸವನ್ನು ನಾನು ಮಾಡಿದ್ದೆ. ಅದೇ ರೀತಿ ಸರ್ಕಾರ ಏನು ಕೃಷಿ ನಿರ್ವಹಣಾ ಅಧ್ಯಯನ ಎಂಬ ಯೋಜನೆಯನ್ನು ಹಾಕಿಕೊಂಡಿದೆ? ಅದು ಯಾವ ಮಟ್ಟದಲ್ಲಿದೆಯೆಂದರೆ, ಕೃಷಿ ನಿರ್ವಹಣಾ ಅಧ್ಯಯನಕ್ಕಾಗಿ ಯಾವುದೇ ಅನುದಾನವನ್ನು ಮೀಸಲಾಗಿ ಇಟ್ಟಿಲ್ಲ. ಅಂದರೆ ಕೃಷಿ ಅಧ್ಯಯನ ಮಾಡುವುದಕ್ಕೆ ಯಾರಿಗೂ ಇಷ್ಟವಿಲ್ಲ. ಒಂದು ಬೆಳೆ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ? ಇಂದಿನ ಮಾರುಕಟ್ಟೆ ದರ ಯಾವರೀತಿ ಇರಬೇಕು? ಅದಕ್ಕಾಗಿ 2012-13, 2013-14 ರಲ್ಲಿ ಯಾವುದೇ ಅನುದಾನವನ್ನು ಇಟ್ಟಿಲ್ಲ. ಹೊಸ ಸರ್ಕಾರ ಬಂದ ಮೇಲೆ 2014-15 ರಲ್ಲಿಯೂ ಕೃಷಿ ನಿರ್ವಹಣೆ ಅಧ್ಯಯನಕ್ಕಾಗಿ ಯಾವುದೇ ಅನುದಾನವನ್ನು ಇಟ್ಟಿಲ್ಲ. ಕೃಷಿ ನಿರ್ವಹಣಾ ಅಧ್ಯಯನ ಕೃಷಿ ಕ್ಷೇತ್ರವನ್ನು ಬದಲಾವಣೆ ಮಾಡುವುದಕ್ಕೆ ಬಹಳ ಪ್ರಮುಖವಾದ ಅಂಶ. ಕಬ್ಬನ್ನು ನಾವು ಬೆಳೆಯಬೇಕೆಂದರೆ, ಅದಕ್ಕೆ ಎಷ್ಟು ಖರ್ಚಾಗುತ್ತದೆ? ಇಂದು ಇಷ್ಟು ಖರ್ಚಾಗುತ್ತದೆಂದರೆ, ಕಾರ್ಖಾನೆಗಳಲ್ಲಿ, Cost of conversion ಎಷ್ಟಾಗುತ್ತದೆ? ಒಬ್ಬ ರೈತನಿಗೆ ಎಷ್ಟು ಕೊಡಲು ಸಾಧ್ಯವಿದೆ? ಇದನ್ನು ಅಧ್ಯಯನ ಮಾಡುವುದಕ್ಕೆ ನಾವು ಒತ್ತು ಕೊಡಲಿಲ್ಲವೆಂದರೆ ಹೇಗೆ? ಭತ್ತವನ್ನು ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ? ರೈತನಿಗೆ ಮೂಲಭೂತವಾಗಿ ಎಷ್ಟು ಬೆಲೆಯನ್ನು ನಾವು ಕೊಡಬೇಕಾಗುತ್ತದೆ? ಈ ನಿರ್ಲಕ್ಷ್ಯವನ್ನು ಸರ್ಕಾರ ಮಾಡಬಾರದು? ಸನ್ಮಾನ್ಯ ಸಚಿವರು ಇದನ್ನು ಗಂಭೀರವಾಗಿ ಪರಿಗಣನೆ ಮಾಡಿ ತಮ್ಮ ಉತ್ತರವನ್ನು ಹೇಳಬೇಕು. ಕೃಷಿ ನಿರ್ವಹಣಾ ಅಧ್ಯಯನಕ್ಕಾಗಿ ಅನುದಾನವನ್ನು ಮೀಸಲಿಡಬೇಕು, ನಾನು ಅವರಿಂದ

ಅದನ್ನು ನಿರೀಕ್ಷೆ ಮಾಡುತ್ತೇನೆ. ಅದೇ ರೀತಿ ಮಣ್ಣು ಪರೀಕ್ಷಾ ಕೇಂದ್ರಗಳು ರೈತನಿಗೆ ಬಹಳ ಪ್ರಾಮುಖ್ಯವಾದುದು, ರೈತ ಯಾರನ್ನೂ ಹುಡುಕಿಕೊಂಡು ಹೋಗುವುದಿಲ್ಲ, ಏನನ್ನೂ ಬೇಡುವುದಿಲ್ಲ. ತನ್ನಿಂದ ಎಷ್ಟು ಆಗುತ್ತದೆ ಅಷ್ಟು ಬೆವರನ್ನು ಸುರಿಸಿ ಬದುಕುತ್ತಾ ಹೋಗುತ್ತಾನೆ. ಪ್ರತಿ ತಾಲ್ಲೂಕಿನಲ್ಲಿ ಮಣ್ಣು ಪರೀಕ್ಷಾ ಕೇಂದ್ರಗಳು ಇದ್ದಾಗ ಮಾತ್ರ ರೈತರಿಗೆ ನಾವು ಮಾರ್ಗದರ್ಶನ ಕೊಡಲು ಸಾಧ್ಯವಿದೆ. ಈ ಕೃಷಿ ವಿಶ್ವವಿದ್ಯಾಲಯಗಳಿಗೆ ಮತ್ತು ರೈತರಿಗೆ ಬಹಳಷ್ಟು ಅಂತರವಿದೆ. ಕೃಷಿ ವಿಜ್ಞಾನಿಗಳು ರೈತರ ಭೂಮಿಗೆ ಬರುವುದಿಲ್ಲ. ರೈತರನ್ನು ಭೇಟಿಯಾಗುವುದಿಲ್ಲ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಈ ಸಚಿವಾಲಯದಿಂದ ಯಾವುದೇ ಮಾಹಿತಿ ಇಲ್ಲ. ಕೃಷಿ ವಿಜ್ಞಾನಿ ಪ್ರತಿ ರೈತ ಕೇಂದ್ರಗಳಿಗೆ ಅಥವಾ ಪ್ರತಿ ತಾಲ್ಲೂಕಿನ ರೈತ ಕಛೇರಿಗಳಿಗೆ ಹಾಗೂ ಆಡಳಿತಾಧಿಕಾರಿಗಳಿಗೆ ಒಂದು ಕೊಂಡಿಯನ್ನು ಮಾಡಬೇಕು. ಪ್ರತಿ ತಾಲ್ಲೂಕಿಗೆ ಒಬ್ಬ ಕೃಷಿ ವಿಜ್ಞಾನಿಯನ್ನು ನೋಡಲ್ ಆಫೀಸರ್ ಆಗಿ ನೇಮಕ ಮಾಡಿದಾಗ ಮಾತ್ರ ಏನು ಸಂಶೋಧನೆಗಳಾಗುತ್ತವೆ, ಅದು ರೈತ ಕೇಂದ್ರಗಳಿಂದ ಅಥವಾ ತಾಲ್ಲೂಕು ಕಛೇರಿಗಳಿಂದ ರೈತರಿಗೆ ಮುಟ್ಟಲು ಸಾಧ್ಯವಾಗುತ್ತದೆ. ಇಂದು ಯೂನಿವರ್ಸಿಟಿಯಲ್ಲಿ ರೈತ ವಿಜ್ಞಾನಿಗಳು ಕುಳಿತಿರುತ್ತಾರೆ, ಬಿಸಿಲಿನಲ್ಲಿ ರೈತ ದುಡಿಯುತ್ತಾ ಹೋಗುತ್ತಾನೆ. ಇಬ್ಬರಿಗೂ ಯಾವುದೇ ಸಂಬಂಧಗಳು ಬರುತ್ತಿಲ್ಲ. ರೈತನಿಗೆ ಮಾಹಿತಿ ಪತ್ರಿಕೆಗಳು ಹೋಗಿ ಮುಟ್ಟುವುದಿಲ್ಲ. ಅದಕ್ಕಾಗಿ ಪ್ರತಿ ತಾಲ್ಲೂಕಿಗೆ ಯೂನಿವರ್ಸಿಟಿಯಲ್ಲಿರುವಂತಹ ಒಬ್ಬ ವಿಜ್ಞಾನಿಯನ್ನು ನೋಡಲ್ ಆಫೀಸರ್ ಆಗಿ ಈ ಸರ್ಕಾರ ಘೋಷಣೆ ಮಾಡಿದರೆ ಆಗುವಂತಹ ಸಂಶೋಧನೆಗಳು ರೈತನ ಹೊಲದಲ್ಲಿ ಆಚರಣೆಗೆ ಬರುವ ಕೆಲಸವಾಗುತ್ತದೆ. ಇದನ್ನು ಬಹಳ ಗಂಭೀರವಾಗಿ ಮಾತನಾಡಬೇಕು. ಅದೇ ರೀತಿ ರೈತರಿಗೆ ಈ ಸರ್ಕಾರ ಮಾಡುವಂತಹ ಯೋಜನೆಯ ಘೋಷಣೆಗಳು, ಸಂಶೋಧನೆಗಳ ಮಾಹಿತಿ ಮುಟ್ಟಿಸುವ ಕೆಲಸ ಅಧಿಕಾರಿಗಳಿಂದ ಆಗಬೇಕಾಗಿದೆ. ಆದರೆ ಖಾಲಿ ಹುದ್ದೆಗಳು ಬಹಳಷ್ಟಿವೆ. ಉದಾರಣೆಗೆ ಕರ್ನಾಟಕದಲ್ಲಿ ಒಟ್ಟಾರೆ ಕೃಷಿ ಅಧಿಕಾರಿಗಳ ಹುದ್ದೆಗಳು ಇರುವುದು 1,810. ಅದರಲ್ಲಿ ಖಾಲಿ ಇರುವುದು 1144. ಅಂದರೆ 1,810 ಅಧಿಕಾರಿಗಳು ಎಲ್ಲಿ ಇರಬೇಕಿತ್ತು, ಅಲ್ಲಿ ಕೇವಲ 666 ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅಂದರೆ

ಸರ್ಕಾರ ಮಾಡಿರುವಂತಹ ಘೋಷಣೆಗಳು, ಯೋಜನೆಗಳು ರೈತರನ್ನು ಯಾವಾಗ ಮುಟ್ಟುತ್ತವೆ? ಅದೇ ರೀತಿ ಬಹಳಷ್ಟು ನ್ಯೂನತೆಗಳನ್ನು ನಾವು ನೋಡುತ್ತಿದ್ದೇವೆ. 'ಬಿ' ಗ್ರೂಪ್ ನೌಕರರು ಒಟ್ಟಾರೆ 5,433 ರಲ್ಲಿ ಖಾಲಿಯಿರುವುದು 2565. ಇಷ್ಟೊಂದು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ಸರ್ಕಾರ ಏನು ಘೋಷಣೆ ಮಾಡಿದರೆ ಅದು ರೈತರಿಗೆ ಹೋಗಿ ಮುಟ್ಟುತ್ತದೆ? ಅದೇ ರೀತಿ ಹಿಂದಿನ ಬಜೆಟ್‌ನಲ್ಲಿ ಸರ್ಕಾರ ಘೋಷಣೆ ಮಾಡಿತ್ತು. ಈ ಬಜೆಟ್‌ನಲ್ಲಿಯೂ ಕೂಡಾ ಕೃಷಿ ಆಯೋಗ ರಚನೆ ಮಾಡಿರುವುದಾಗಿ ಹೇಳಿದೆ. ಆದರೆ ಈವರೆಗೆ ಕೃಷಿ ಆಯೋಗ ರಚನೆಯಾಗಲೇ ಇಲ್ಲ. ಕೃಷಿ ಆಯೋಗ ರಚನೆಯಾಗದೇ ರೈತರನ್ನು ನಾವು ಯಾವ ರೀತಿ ಬದಲಾವಣೆಗೆ ತರುತ್ತೇವೆ? ಸನ್ಮಾನ್ಯ ಮುಖ್ಯಮಂತ್ರಿಗಳು ಕೃಷಿ ಆಯೋಗವನ್ನು ಘೋಷಣೆ ಮಾಡಿ ರೈತರಿಗೆ ವೈಜ್ಞಾನಿಕವಾದ ಬೆಲೆ, ಅದು ಬಿತ್ತನೆ ಮಾಡುವಂತಹ ಸಮಯದಲ್ಲಿಯೋ ಘೋಷಣೆಮಾಡಬೇಕು. ಅಂತಹ ಆಯೋಗವನ್ನು ಭಾರತದಲ್ಲಿ ಮಾದರಿ ಆಯೋಗವನ್ನು ನಾನು ಕರ್ನಾಟಕದಲ್ಲಿ ತರುತ್ತೇನೆ. ಇನ್ನು ಮುಂದೆ ಯಾವ ಒಬ್ಬ ರೈತನೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ ಎಂದು ಸನ್ಮಾನ್ಯ ಸಿದ್ದರಾಮಯ್ಯನವರು ಘೋಷಣೆ ಮಾಡಿದ ಮೇಲೆ ವಿಠ್ಠಲ್ ಅರಬಾವಿಯವರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಅಂದರೆ ನಾವು ರೈತರನ್ನು ಮತ್ತೆ ಕೇವಲ ಭ್ರಮೆಯಲ್ಲಿ, ಮತ್ತೆ ಸುಳ್ಳು ಭರವಸೆಯಲ್ಲಿ ಮತ್ತೆ ಕನಸಿನಲ್ಲಿ ಇಡುವಂತಹ ಕೆಲಸ ಈ ಸದನದಿಂದ ಆಗಬಾರದು. ಅದಕ್ಕಾಗಿ ಇದನ್ನು ಗಂಭೀರವಾಗಿ ಪರಿಗಣಿಸಿ, ಕೃಷಿ ಆಯೋಗವನ್ನು ಆದಷ್ಟು ಬೇಗ ರಚಿಸಿ ರೈತರ ಹಿತ ರಕ್ಷಣೆ ಮಾಡುವ ಕೆಲಸಕ್ಕೆ ಈ ಸರ್ಕಾರ ಒತ್ತು ಕೊಡಬೇಕೆಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಈಗ ಜೆ.ಟಿ.ಪಾಟೀಲ್ ರವರು.

ಶ್ರೀ ಜೆ.ಟಿ.ಪಾಟೀಲ್ (ಬೀಳಗಿ) : ಮಾನ್ಯ ಉಪಾಧ್ಯಕ್ಷರೆ, ಈ ವರ್ಷದಿಂದ ಏನು ಪ್ರತಿಯೊಂದು ಇಲಾಖೆಯ ಮೇಲೆ ಚರ್ಚೆ ಮಾಡುವುದಕ್ಕೆ ನಿಮ್ಮ ಸರ್ಕಾರ ಅವಕಾಶ ಮಾಡಿಕೊಟ್ಟಿದೆ, ನಿಜವಾಗಿಯೂ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಭಾಷಣಕ್ಕೆ ಹೋಗದೆ ಕೆಲವು ಸಲಹೆಗಳನ್ನು ಮಾನ್ಯ ಕೃಷಿ ಮಂತ್ರಿಗಳಿಗೆ

ಕೊಡಲಿಚ್ಛಿಸುತ್ತೇನೆ. ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದರಿಂದ ವಿದ್ಯುತ್ ತೊಂದರೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ, ಜೊತೆಗೆ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ, Labour Management ಅನ್ನು ಕಡಿಮೆ ಮಾಡಿಕೊಳ್ಳಲು ಒಂದು ಮಾರ್ಗೋಪಾಯ ಎಂದರೆ, drip irrigation ಮತ್ತು sprinkler irrigation. ಇಂದು ಏನು 5 ಎಕರೆಗೆ ನಮ್ಮ ಸರ್ಕಾರ ಸೀಮಿತ ಮಾಡಿದೆ, ಸರ್ಕಾರದ ಉದ್ದೇಶವೇನೆಂದರೆ, ನೀರಿನ ಸದ್ಬಳಕೆ ಆಗಬೇಕು, ನೀರಿನ ಉಳಿತಾಯ, ವಿದ್ಯುತ್ ಉಳಿತಾಯ ಮತ್ತು ಗೊಬ್ಬರದ ಉಳಿತಾಯ ಆಗಬೇಕೆಂಬ ಇಚ್ಛೆಯಿದ್ದರೆ ಅದನ್ನು ಇನ್ನೂ 10 ಎಕರೆಗೆ ಏರಿಸಿದರೆ ಉತ್ತಮ ಎಂಬ ಮಾತನ್ನು ಹೇಳುತ್ತೇನೆ. ಇದು ರೈತರಿಗೂ ಉಪಕಾರ ಮಾಡುವಂತಹ ಯೋಜನೆ, ಎರಡನೆಯದಾಗಿ, ನಮ್ಮ ಭಾಗದಲ್ಲಿ ಬೇಸಿಗೆಯಲ್ಲಿ ವಿದ್ಯುತ್ ಇಲ್ಲದೆ ಪ್ರತಿ ವರ್ಷ ಕನಿಷ್ಠ ಇಳುವರಿಯಲ್ಲಿ 30% ನಾವು ಹಾನಿ ಮಾಡಿಕೊಳ್ಳುತ್ತಿದ್ದೇವೆ. ಯಾವುದೇ ಬೆಳೆ ಇರಬಹುದು, ನೀರಾವರಿ ಮುಖಾಂತರ ಮಾಡುವ ಬೆಳೆಗಳು ವಿದ್ಯುತ್ತಿನ ಕಣ್ಣಾಮುಚ್ಚಾಲೆಯಿಂದ ನಾವು 30% ಬೆಳೆ ಹಾನಿ ಮಾಡಿಕೊಳ್ಳುತ್ತಿದ್ದೇವೆ. ಅದಕ್ಕಾಗಿ ಎಲ್ಲೆಲ್ಲಿ Pump set ಇದೆ, ಅಲ್ಲಿ ಕನಿಷ್ಠ 90% ಸಬ್ಸಿಡಿ ಮುಖಾಂತರ, ಈ ಸೋಲರ್ ಮುಖಾಂತರ ವಿದ್ಯುತ್ ಪಂಪ್‌ಸೆಟ್‌ಗಳನ್ನು ಕೊಟ್ಟರೆ ಎರಡು ರೀತಿಯ ಲಾಭ. ರೈತರಿಗೂ ಇಳುವರಿ ಹೆಚ್ಚಾಗುತ್ತದೆ, ಇದರಿಂದ ಸರ್ಕಾರದ ಉತ್ಪನ್ನವನ್ನು ಸಹ ಜಾಸ್ತಿ ಮಾಡಬಹುದೆಂಬ ಸಲಹೆಯನ್ನು ಇಲಾಖೆಗೆ, ಹಾಗೂ ಕೃಷಿ ಮಂತ್ರಿಗಳಿಗೆ ಕೊಡಲಿಚ್ಛಿಸುತ್ತೇನೆ, ಆನಂತರ ನಮ್ಮ ಬೊಮ್ಮಾಯಿಯವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಮಣ್ಣು ಪರೀಕ್ಷೆ ಎನ್ನುವುದು ಏನಿದೆ, ಯಾವೊಬ್ಬ ರೈತನೂ 100ಕ್ಕೆ 95ರಷ್ಟು ರೈತರು ಮಣ್ಣು ಪರೀಕ್ಷೆ ಮಾಡಿಸಿರುವುದಿಲ್ಲ. ನಾನು ಸಹ ಕೃಷಿ ಕುಟುಂಬದಿಂದ ಬಂದಿದ್ದು, ಸ್ವತಃ ಕೃಷಿಯನ್ನು ಮಾಡಿದ್ದು, ಸ್ವಂತ ನೀರಾವರಿ ಇದೆ, ಆದರೆ ಇದರ ತಿಳುವಳಿಕೆ ಇದ್ದುಕೊಂಡು ನಾನೇ ಇಂದು ಪ್ರತಿ ವರ್ಷವಾಗಲಿ, 2-3 ವರ್ಷಕ್ಕೆ ಒಮ್ಮೆಯಾದರು ಸಹಿತ ಭೂಮಿಯ ಫಲವತ್ತತೆಯನ್ನು ನಾನು ಪರೀಕ್ಷೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಮಣ್ಣು ಪರೀಕ್ಷೆ Mandatory ಆಗಬೇಕಾಗಿದೆ. ನಾನು ನಿಶ್ಚಿತವಾಗಿ ಹೇಳುವುದೇನೆಂದರೆ Soil Conservation Department ಮಲಗಿಕೊಂಡಿದೆ, ರೈತ ಇಂದು laboratory ಗೆ ಹೋಗುವ ಬದಲು

laboratory ರೈತನ ಭೂಮಿಗೆ ಹೋಗಬೇಕು. Lab to Land ಇದು ಆಗಬೇಕಾಗಿದೆ. ಇದನ್ನು ನಿಶ್ಚಿತವಾಗಿಯೂ ಮಾಡುವುದರಿಂದ ರೈತನಿಗೆ ನೇರವಾಗಿ ಲಾಭ ತಟ್ಟಲಿದೆ. ಜೊತೆಗೆ ಎಷ್ಟೋ ರೈತರು ನಾವು ಯಾರೂ ಸಹ ವೈಜ್ಞಾನಿಕವಾಗಿ ಕೃಷಿ ಮಾಡುತ್ತಿಲ್ಲ. ಆದುದರಿಂದ ದಯಮಾಡಿ ಈ ಕುರಿತು ರೈತರಿಗೆ ತಿಳಿವಳಿಕೆ ಕೊಡುವ ಮುಖಾಂತರ ಪ್ರತಿ ವರ್ಷ, ಕೊನೆಗೆ ಎರಡು ವರ್ಷಕ್ಕೆ ಒಮ್ಮೆಯಾದರೂ ರೈತನ ಭೂಮಿಯ ಫಲವತ್ತತೆಯನ್ನು ಸರ್ಕಾರ compulsorty ಯಾಗಿ test ಮಾಡಲು ಅವಕಾಶ ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ. ಇದರ ಜೊತೆಗೆ ನೀರಾವರಿ ಪ್ರದೇಶದಲ್ಲಿ, ಅದರಲ್ಲೂ ವಿಶೇಷವಾಗಿ ಈ ಡ್ಯಾಂ ಮತ್ತು ಕೆನಾಲ್ ಮೂಲಕ ಜಮೀನುಗಳಿಗೆ ನೀರಾವರಿಯಾಗುತ್ತಿದೆ, ಇವತ್ತು ಹೆಚ್ಚಿನ ಭೂಮಿ ಸವಳು ಮತ್ತು ಜವಳಾಗಿದೆ. 5 ವರ್ಷದಿಂದ ಮಹಾರಾಷ್ಟ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಎಲ್ಲೆಲ್ಲಿ ಜಮೀನು ಸವಳು ಮತ್ತು ಜವಳಾಗಿದೆ ಅದನ್ನು ಸರ್ಕಾರದ ಮೂಲಕವೇ ಸಂಪೂರ್ಣವಾಗಿ ಸವಳು, ಜವಳು ತೆಗೆಯುವ ಕಾರ್ಯಕ್ರಮವಿದೆ. ಅದ್ಯಾಕೆ ತಾವು ಕರ್ನಾಟಕದಲ್ಲಿ ಈ ಕ್ರಮ ತೆಗೆದುಕೊಳ್ಳಬಾರದು? ಇಲ್ಲಿ ಒಂದು ಹಳ್ಳಿಯಲ್ಲೋ ಅಥವಾ ಒಂದು ಭಾಗದಲ್ಲಿ ಸವಳು, ಜವಳು ತೆಗೆಯುವ ಒಂದು ಪೈಲಟ್ ಪ್ರಾಜೆಕ್ಟ್ ತೆಗೆದುಕೊಂಡರೆ, ಯಾವುದೇ ಕೃಷಿಕನ ಭೂಮಿ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲ. ಇದರಿಂದ ರಾಜ್ಯಕ್ಕೂ ಹಾನಿ ಇದೆ, ರೈತನಿಗೂ ಹಾನಿ ಇದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲಿಯೂ ಕೂಡ ಮಹಾರಾಷ್ಟ್ರದ ಮಾದರಿಯಲ್ಲಿ ಸವಳು-ಜವಳು ತೆಗೆಯಲು ಕೃಷಿ ಸಚಿವರಾದ ಬೈರೇಗೌಡರಲ್ಲಿ ವಿನಂತಸುವೆ ನಾನು ಮೊದಲನೆ ಸಾರಿ ಶಾಸಕನಾಗಿದ್ದಾಗ ಇವರ ತಂದೆಯವರು ಕೃಷಿ ಮಂತ್ರಿಗಳಾಗಿದ್ದರು. ಆಗ ಬೈರೇಗೌಡರೆಂದರೆ ಕೃಷಿಮಂತ್ರಿ, ಕೃಷಿ ಇಲಾಖೆ ಎಂದರೆ ಬೈರೇಗೌಡರು ಎನ್ನುವ ರೀತಿಯಲ್ಲಿ ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಆ ಅಪೇಕ್ಷೆಯನ್ನು ಕೃಷ್ಣ ಬೈರೇಗೌಡರ ಮೇಲೆಯೂ ಸಹಿತ ಇಟ್ಟುಕೊಂಡಿದ್ದೇವೆನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೇಪಡುತ್ತೇನೆ. ಜೊತೆಗೆ ಇವತ್ತು ಮಾರುಕಟ್ಟೆಯಲ್ಲಿ, ಕಳಪೆಮಟ್ಟದ ಬೀಜ, ಗೋಬ್ಬರದ ಸರಬರಾಜಿನ ಬಗ್ಗೆ ಸಾಕಷ್ಟು ಸಾರಿ ಕೃಷ್ಣ ಬೈರೇಗೌಡರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಮೊದಲನೆಯದಾಗಿ ರೈತನಿಗೆ ಹಾನಿಯಾಗುವುದು ಯಾವುದರಿಂದ ಎಂದರೆ, ಕಳಪೆ ಮಟ್ಟದ ಬೀಜ ಮತ್ತು

ಗೊಬ್ಬರದ ಪೂರೈಕೆಯಿಂದಾಗಿದೆ. ಇದರಲ್ಲಿ ಇಲಾಖೆಯ ತಪ್ಪಿರಬಹುದು ಇಲ್ಲವೇ ವ್ಯಾಪಾರಿಗಳು ಬೇಗನೆ ಕೋಟ್ಯಾಧೀಶರಾಗಬೇಕೆನ್ನುವ ವಿಚಾರವನ್ನಿಟ್ಟುಕೊಂಡಿರುವುದರಿಂದ ಇವತ್ತು ರೈತನಿಗೆ ಮೋಸವಾಗುತ್ತಿದೆ. ಇದನ್ನು ತಡೆಗಟ್ಟಲು ಶ್ರೀಘ್ರವಾಗಿ ಹೆಚ್ಚಿನ ಒಂದು ಕಾನೂನನ್ನು ಸರ್ಕಾರ ತರಬೇಕಾಗಿದೆ. ಯಾರು ಕಳಪೆ ಮಟ್ಟದ ಬೀಜ ಮತ್ತು ಗೊಬ್ಬರವನ್ನು ಪೂರೈಕೆ ಮಾಡುತ್ತಾರೆಯೋ ಅಂಥವರಿಗೆ ಏನಾದರು ಕಠಿಣವಾದ ಶಿಕ್ಷೆಯನ್ನು ನಾವು ಕೊಡದಿರುವುದರಿಂದ ರೈತನಿಗೆ ಹಾನಿ ಮಾಡುವಂಥ ಕೆಲಸ ಇವತ್ತು ನಡೆಯುತ್ತಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ 4 ತಿಂಗಳ ಹಿಂದೆ ಆಲಿಕಲ್ಲು ಮಳೆಯಾಯಿತು. ಆಲಿಕಲ್ಲು ಮಳೆಯಿಂದ ಹಾನಿಗೆ ಸರ್ಕಾರ ಇವತ್ತು ಕೇವಲ ತೋಟಗಾರಿಕೆ ಬೆಳೆಗಳಿಗೆ ಪರಿಹಾರವನ್ನು ಕೊಡುತ್ತಿದೆ. ಯಾವ ರೈತ, ಜೋಳ, ಗೋವಿನ ಜೋಳ, ಸೂರ್ಯಕಾಂತಿ ಮತ್ತು ಗೋಧಿ ಬೆಳೆಗಳನ್ನು ಬೆಳೆದು ಹಾನಿಗೊಳಗಾಗಿದ್ದಾನೆ, ಅವನಿಗೆ ಇನ್ನೂ ಪರಿಹಾರವನ್ನು ಕೊಡುತ್ತಿಲ್ಲ. ದಯಮಾಡಿ, ಸನ್ಮಾನ್ಯ ಮಂತ್ರಿಗಳು ಗಮನವನ್ನು ಹರಿಸಿ ಈ ರೈತರಿಗೂ ಪರಿಹಾರ ಕೊಡಲು ಪ್ರಯತ್ನ ಮಾಡಬೇಕೆಂದು ಸಹಿತ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಗಾದೆ ಇದೆ, ಒಕ್ಕಲಿಗ ಒಕ್ಕದಿರೇ, ಬಿಕ್ಕುವುದು ಜಗವೆಲ್ಲಾ, ಎನ್ನುವ ರೀತಿಯಲ್ಲಿ ನಾವು ರೈತನ ಬಗ್ಗೆ ಕೇವಲ ಭಾಷಣದ ಮೂಲಕ ಸವಲತ್ತನ್ನು ಕೊಡುತ್ತೇವೆಂದರೆ, ಅದರಿಂದ ಉಪಯೋಗವಾಗುವುದಿಲ್ಲ. ದಯಮಾಡಿ, ಇವತ್ತು ರೈತನ ಸಹಾಯಕ್ಕೆ ಸರ್ಕಾರ ಬರಲಾರದೇ ಹೋದರೆ, ರೈತ ಇವತ್ತು ಕಂಗಾಲಾಗಿ ಹೋಗಿದ್ದಾನೆ. ಒಂದು ಕಡೆ ಲೇಬರ್ ಪ್ರಾಬ್ಲಂ ಇದೆ, ಕೃಷಿ ಕೂಲಿಕಾರರು ಸಿಗುತ್ತಿಲ್ಲ, ರೈತರು ಇವತ್ತು ಕೃಷಿಯನ್ನು ಬಿಟ್ಟು ಎಲ್ಲಾದರೂ ಕಛೇರಿಯಲ್ಲಿ ಅಟೆಂಡರ್ ಕೆಲಸ ಮಾಡಿಕೊಂಡು ಹೋಗಲು ಜಾಗ ಕೊಡಿ ನಾವು ಹೋಗುತ್ತೇವೆ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೆಚ್ಚಿನ ಒತ್ತನ್ನು ರೈತರ ಸಲುವಾಗಿ ಕೊಡಬೇಕು ಎಂದು ತಮ್ಮ ಮೂಲಕ ಮಾನ್ಯಮುಖ್ಯಮಂತ್ರಿಗಳಲ್ಲಿ ಕೃಷಿ ಸಚಿವರಲ್ಲಿ ಮತ್ತು ತೋಟಗಾರಿಕೆ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

(ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ)

ಶ್ರೀ ಕೆ.ಬಿ. ಪ್ರಸನ್ನ ಕುಮಾರ್ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೆ, ನಗರ ಪ್ರದೇಶಗಳಲ್ಲಿ ಕಳೆದ ವರ್ಷ ಈ ಮನೆಗಳ ತಾರಸಿಯ ಮೇಲೆ ತೋಟಗಾರಿಕೆಯನ್ನು ಮಾಡುವಂಥ ಒಂದು ಕೆಲಸವನ್ನು ನಮ್ಮ ಕ್ಷೇತ್ರದಲ್ಲಿ ಮಾಡಿದೆವು. ತಾರಸಿಯ ಮೇಲೆ ಪಾಟ್ ನಲ್ಲಿ ತರಕಾರಿ, ಹೂವು ಮತ್ತು ಹಣ್ಣಿನ ಗಿಡಗಳನ್ನು ಬೆಳೆಸುವಂಥ ಕೆಲಸವನ್ನು ಇಲಾಖೆಯ ವತಿಯಿಂದ ನಾಗರಿಕರ ಬೆಂಬಲದೊಂದಿಗೆ, ನಾಗರಿಕರ ವೇದಿಕೆಗಳೊಂದಿಗೆ ಮಾತುಕತೆ ನಡೆಸಿ ಇಲಾಖೆಯ ವತಿಯಿಂದ ಈ ಒಂದು ಪ್ರಯತ್ನವನ್ನು ಮಾಡಿದೆವು. ಇದು ತುಂಬಾ ಒಳ್ಳೆಯ ಪ್ರಯತ್ನ, ಅದಕ್ಕೋಸ್ಕರ ಇಲಾಖೆ ಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಂತರದಲ್ಲಿ ಕೇವಲ ರೂ.5 ಲಕ್ಷ ಅನುದಾನವನ್ನು ಇದಕ್ಕಾಗಿ ಇಟ್ಟಿದ್ದಾರೆ, ಅದನ್ನು ಹೆಚ್ಚಿಸಬೇಕು. ನಗರ ಪ್ರದೇಶಗಳಲ್ಲಿ ಇದಕ್ಕೆ ಹೆಚ್ಚಿನ ಬೆಂಬಲವನ್ನು ಕೊಟ್ಟರೆ ಒಳ್ಳೆಯ ಪ್ರಯತ್ನವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ನಗರಸಭೆಗಳಿಗೆ ಈ ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಹಣದ ಕೊರತೆ ಇದೆ. ಕೇವಲ ಫೆನ್ಸಿಂಗ್ ಹಾಕಿ ನಗರಸಭೆಯ ವತಿಯಿಂದ ಬಿಟ್ಟುಬಿಡುತ್ತೇವೆ. ಸಾಕಷ್ಟು ಪಟ್ಟಬದ್ಧ ಹಿತಾಸಕ್ತಿಗಳಿಂದ ಪಾರ್ಕ್‌ಗಳೆಲ್ಲಾ ಕಳೆದು ಹೋಗುತ್ತಿದೆ. ಈ ತೋಟಗಾರಿಕೆ ಇಲಾಖೆಯಿಂದ ಪಾರ್ಕ್‌ಗಳ ಅಭಿವೃದ್ಧಿಗೆ ಹಣವನ್ನು ನೀಡಿದರೆ ತುಂಬಾ ಒಳ್ಳೆಯ ಪ್ರಯತ್ನವಾಗುತ್ತದೆ ಎಂದು ಮಾನ್ಯ ಉಪಾಧ್ಯಕ್ಷರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ನಮ್ಮ ಶಿವಮೊಗ್ಗ ನಗರದಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿರುವ ಗ್ಲಾಸ್ ಹೌಸ್, ಒಂದು ಔಷಧಿಯ ವನವನ್ನು ಸುಮಾರು ರೂ.5 ಕೋಟಿಯ ಅನುದಾನವನ್ನು ಕೊಟ್ಟು ನಮ್ಮ ನಗರಕ್ಕೆ ಮಾನ್ಯ ಸಚಿವರು ಗ್ಲಾಸ್‌ಹೌಸ್ ಮಾಡಿಸಿ ಕೊಡಬೇಕಾಗಿ ಕಳಕಳಿಯ ಪ್ರಾರ್ಥನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೃಷಿ ಇಲಾಖೆಯಿಂದ ಟ್ರ್ಯಾಕ್ಟರ್, ಟಿಲ್ಲರ್ ಹಾಗೂ ಇತರೆ ಕೃಷಿ ಯಂತೋಪಕರಣಗಳಿಗೆ ಸಬ್ಸಿಡಿಯನ್ನು ಕೊಡುವುದನ್ನು ಪಡೆಯಲು ರೈತರು ತುಂಬಾ ಓಡಾಡಬೇಕಾದ ಕೆಲಸವಾಗುತ್ತಿದೆ. ಈ ಕಂಪನಿಗಳಿಗೆ, ಕಛೇರಿಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಸಾಕಷ್ಟು ಅಲೆದಾಟವನ್ನು ಮಾಡಿಸುತ್ತಿದ್ದಾರೆ. ಇದನ್ನು ಸರಳೀಕರಣ ಮಾಡುವ ದೃಷ್ಟಿಯಲ್ಲಿ ಮಾನ್ಯ ಸಚಿವರು ಯೋಜನೆ ಮಾಡಬೇಕಾಗಿದೆ. ನಮ್ಮಲ್ಲಿ ಅಡಿಕೆ ಕೊಳೆರೋಗಕ್ಕೆ ಒಂದು ಎಕರೆಗೆ ರೂ.15,000 ಕೊಡುತ್ತಿದ್ದಾರೆ. ಇದು ತುಂಬಾ ಕಡಿಮೆಯಾಗಿದೆ

ಎಂದು ರೈತರ ಕೂಗಿದೆ, ಕನಿಷ್ಠ ರೂ.40–45,000 ಕೊಡಬೇಕೆನ್ನುವ ಒಂದು ಕೂಗಿದೆ. ದಯಮಾಡಿ ಮಾನ್ಯ ಸಚಿವರು ಈ ಒಂದು ಪರಿಹಾರಧನವನ್ನು ರೂ.45,000 ಹೆಚ್ಚಿಸಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಅದೇ ರೀತಿ ಅಡಿಕೆ ಸುಲಿಸುವ ಯಂತ್ರಗಳನ್ನು ಕೊಡುವ ಪ್ರಯತ್ನ ನಡೆಯುತ್ತಿದೆ ಅದು ಸಾಕಾಗುತ್ತಿಲ್ಲ, ಅದನ್ನು ಹೆಚ್ಚಿಗೆ ಮಾಡಬೇಕೆಂದು ಹೇಳಿ, ಇದುವರೆಗೆ ಮಾತನಾಡುವುದಕ್ಕೆ ಅವಕಾಶ ಮಾಡಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ರಾಜಣ್ಣ (ಶಿಡ್ಲಘಟ್ಟ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಕೃಷಿ ಇಲಾಖೆಯಲ್ಲಿ ವಿಶೇಷವಾಗಿ ನಮ್ಮ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ದ್ರಾಕ್ಷಿ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿದ್ದೇವೆ, ಸುಮಾರು ಒಂದು ತಿಂಗಳ ಹಿಂದೆ ಆಕಾಲಿಕ ಆಲಿಕಲ್ಲು ಮಳೆಯಿಂದಾಗಿ ಕಟಾವಿಗೆ ಬಂದಂಥ ಆ ರೈತರ ವಿಶೇಷ ತಳಿಗಳಿಗೆ, ಇವತ್ತು ಒಂದು ಹೆಕ್ಟೇರ್‌ಗೆ ಕೇವಲ ರೂ.9000 ಪರಿಹಾರವನ್ನು ಕೊಡುತ್ತೀರಿ ಅದು ಯಾವುದಕ್ಕೂ ಸಾಕಾಗುವುದಿಲ್ಲ. ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ಘನ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ವಿಶೇಷವಾಗಿ ನಮಗೆ ನೀರಿಲ್ಲ. ಕೇವಲ ಹನಿ ನಿರಾವರಿಯು ಮೂಲಕ ಇವತ್ತು ಒಂದೊಂದು ಹನಿಯನ್ನೂ ಕೂಡ ಅಮೃತದ ರೀತಿಯಲ್ಲಿ ಉಪಯೋಗಿಸಿ ರೇಷ್ಮೆ, ದ್ರಾಕ್ಷಿ, ಗೋಡಂಬಿ ಮತ್ತು ಇತ್ತೀಚಿನ ದಿನಗಳಲ್ಲಿ ದಾಳಿಂಬೆ ಬೆಳೆಯೂ ಕೂಡ ನಮ್ಮಲ್ಲಿ ಹೆಚ್ಚು ಪ್ರಸಿದ್ಧಿಯಾಗುತ್ತಿದೆ. ಮೊನ್ನೆ ಆಲಿಕಲ್ಲು ಮಳೆ ಬಂದದ್ದರಿಂದ ನನ್ನ ಕ್ಷೇತ್ರದಲ್ಲೇ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಇಲಾಖೆಯವರು ಅಂದಾಜು ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ಅವರಿಗೆ ಪರಿಹಾರ ಕೊಡದಿದ್ದರೆ ಕೃಷಿ ಸಂಪೂರ್ಣವಾಗಿ ನಶಿಸಿ ಹೋಗುತ್ತದೆ. ಯಾರಾದರೂ ಸಾಲದ ಹೊರೆಯನ್ನು ಎಷ್ಟು ಹೊತ್ತಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಬಯಲು ಸೀಮೆಯ ಈ ಕ್ಷೇತ್ರಗಳಿಗೆ, ವಿಶೇಷವಾಗಿ ದ್ರಾಕ್ಷಿ, ರೇಷ್ಮೆ ತೋಟಗಾರಿಕೆ ಬೆಳೆ ಬೆಳೆದಂಥ ಪ್ರದೇಶದಲ್ಲಿ ಇವತ್ತು ಆಲೂಗಡ್ಡೆ ಇರಬಹುದು, ಜೋಳವಿರಬಹುದು, ಒಂದು ಸಾರಿ ಹೋಯಿತೆಂದರೆ, ಆ ರೈತರಿಗೆ ಅಲ್ಪಸ್ವಲ್ಪ ನಷ್ಟವಾಗುತ್ತದೆ, ಆದರೆ ಒಂದು ಎಕರೆ ದ್ರಾಕ್ಷಿ

ಬೆಳೆಗೆ, ಕ್ರಿಮಿನಾಶಕವಿರಹುದು, ವಿಶೇಷವಾಗಿ ಇವತ್ತು ವಿಶೇಷ ತಳಿಗಳಿರಬಹುದು ಸರಿತ ಕೃಷ್ಣ, ಇರಬಹುದು, ರೆಡ್ ಗ್ಲೋಬ್ ಇರಬಹುದು, ದ್ರಾಕ್ಷಿ ಬೆಳೆ ಒಂದು ವರ್ಷಕ್ಕೆ ಒಂದೇ ಬೆಳೆ ಬರುತ್ತದೆ, ಒಂದು ಎಕರೆಯಲ್ಲಿ ದ್ರಾಕ್ಷಿ ಬೆಳೆಯಲು ಸುಮಾರು ಕನಿಷ್ಠ ರೂ.70–80,000 ಖರ್ಚು ಬರುತ್ತದೆ. ಇಂಥ ಸಂದರ್ಭದಲ್ಲಿ ಒಂದು ಹೆಕ್ಟೇರ್‌ಗೆ ಕೇವಲ ರೂ.9,000 ಪರಿಹಾರ ಕೊಟ್ಟರೆ ಸಾಲದು ಅದನ್ನು ಪರಿಶೀಲನೆ ಮಾಡಿ, ವಿಶೇಷವಾಗಿ ನಮ್ಮ ರೇಷ್ಮೆ ಇಲಾಖೆಯವರು ಕೃಷಿ ಪರಿಕರಗಳೇನಿವೆ, ಅದು ಪವರ್ ಟಿಲ್ಲರ್ ಇರಬಹುದು, ಮಿನಿ ಟ್ರ್ಯಾಕ್ಟರ್ ಇರಬಹುದು, ಅವನ್ನು ಸಾಮಾನ್ಯ ಜನರಿಗೆ ಕೊಟ್ಟೇ ಇಲ್ಲ, ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಮಾತ್ರ ಕೊಟ್ಟಿದ್ದೀರಿ, ಖಂಡಿತ ಅದನ್ನು ಸಹ ತಾವು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಹಳ್ಳಿಯಲ್ಲಿ ಸಾಮಾನ್ಯ ರೈತ ಕುಟುಂಬದವರಿಗೆ ಇವತ್ತು ಒಬ್ಬ ಸಣ್ಣ ರೈತನಿಗೆ ಕೂಲಿಕಾರ್ಮಿಕರ ಬಹಳ ತೊಂದರೆ ಇರುವುದರಿಂದ, ಅವನು ಒಂದು ಟಿಲ್ಲರ್ ತೆಗೆದುಕೊಳ್ಳುವುದಕ್ಕೆ ಸರ್ಕಾರಿ ಸವಲತ್ತು ತೆಗೆದುಕೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರ ಜೊತೆಗೆ ಸಾಮಾನ್ಯ ವರ್ಗದವರಿಗೂ ಈ ಸೌಲಭ್ಯ ಕೊಟ್ಟು ತಾವು ಉತ್ತೇಜನ ಮಾಡಿದರೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಉಳಿಯುತ್ತದೆ ಎಂದು ಹೇಳಿ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ(ಮಾಯಕೊಂಡ) : ಮಾನ್ಯ ಅಧ್ಯಕ್ಷರೆ, ಇವತ್ತು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಜೊತೆಗೆ ಮೀನುಗಾರಿಕೆ ಮತ್ತಿತರೆ subsidiary ಇಲಾಖೆಗಳು ಸೇರಿಕೊಂಡು ಬಹಳ ಮಹತ್ವವಾದ ಇಲಾಖೆಗಳಾಗಿವೆ. ನಮಗೆ ಈ ಸದನದಲ್ಲಿರುವ ಶಾಸಕರು ಯಾರೂ ಬೇಸಾಯ ಮಾಡಿಲ್ಲವೆಂದು ಕಾಣುತ್ತದೆ. ಪ್ಯಾಂಟ್‌ನವರು, ಪಂಚೆಯವರು ಹಾಗೂ ಕಚ್ಚೆ ಪಂಚೆಯವರು ಇದ್ದಾರೆ. ಹಿಂದಿನ MLA ಗಳಲ್ಲಿ ಸ್ವಾತಂತ್ರ್ಯ ಬಂದಂತಹ ಸಂದರ್ಭದಲ್ಲಿ ಬಹಳ ಜನ agriculturists ಇದ್ದರು. ಎಮ್ಮೆ ತೊಳೆಯುವರು, ಎತ್ತು ತೊಳೆಯವವರು, ಬಹಳ ಜನ ಓದಿದವರು

ಇದ್ದಾರೆ ಇಲ್ಲವೆಂದಲ್ಲ, ಅವರಿಗೆಲ್ಲಾ ಅಭಿನಂದನೆಗಳು. ನಾನು ಪತ್ರಿಕೆಯಲ್ಲಿ ಓದಿದೆ, ಕೆಲವು ಶಾಸಕರುಗಳು ಬೆಳಗಿನ ಜಾವ ಹಸುಗಳಿಗೆ ಮುಸುರೆ ಹಾಕುತ್ತಾರೆ, ಹುರುಳಿ ಇಡುತ್ತಾರೆ, ಪ್ರೀತಿ ಮಾಡುತ್ತಾರೆಂದು ನೋಡಿದೆ. ನಮ್ಮ ಕೃಷಿ ಅವಲಂಬಿತವಾಗಿರತಕ್ಕಂತಹ ಭೂಮಿ ಮೇಲೆ ನಮಗಿರುವ ಪ್ರೀತಿ ಅದು. ನಮ್ಮ ಜೀವನ ಅಲ್ಲಿಂದಲೇ ಪ್ರಾರಂಭವಾಗುವುದು. ಬೆಳಗಿನ ಜಾವ ಐದು ಗಂಟೆಗೆ ನಾವು ಬೇಸಾಯ ಹೂಡುತ್ತಿದ್ದೇವು. ಕಬ್ಬಿಗೆ ನೇಗಿಲು ಹೊಡೆಯಬೇಕು, ಕರ್ಕಿ ಹೊಲ ಹೂಳಬೇಕು, ಎಡೆಕುಂಟೆ ಹೊಡೆಯಬೇಕು, ನೇಗಿಲು ಹೊಡೆಯಬೇಕು, ಕುಂಟೆ ಹೊಡೆಯಬೇಕು, ನೇಗಿಲು ಹೊಡೆಯಬೇಕು. ಕೂರ್ಗಿ ಹೊಡೆಯಬೇಕು, ಎತ್ತುಗಳನ್ನು ಸಾಕಬೇಕು, ಅವುಗಳಿಗೆ ತಿಕ್ಕಬೇಕು, ಹಾಲು ಹಿಂಡಬೇಕು, ಹಸುಗೆ ರಂಚು ಹಾಕಬೇಕು, ಹುಲ್ಲು ಕೊಯ್ಯಬೇಕು. ಈಗೆಲ್ಲಾ modern technology ಬಂದು ಸ್ವಲ್ಪ ಬದಲಾವಣೆಯಾಗಿದೆ. ಐದು ಗಂಟೆಗೆ ಎದ್ದು ಕೆಲಸ ಮಾಡದೇ ಇದ್ದರೆ ನಮ್ಮ ಅಪ್ಪ ಕಬ್ಬಿನ ಎಂಡೆಯಲ್ಲಿ ಹೊಡೆಯುತ್ತಿದ್ದರು. ಐದು ಗಂಟೆಗೆ ನಾವು ಹೊಲದಲ್ಲಿರಬೇಕಾಗಿತ್ತು. ಇದು compulsory. ನಾವು ಈ ಸದನಕ್ಕೆ ಬಂದು ಒಂದು ವರ್ಷ ನಾಲ್ಕು ತಿಂಗಳಾಯಿತು. ಶಾಸಕರಾಗಿ ನಾವು ಇದರ ಬಗ್ಗೆ ಬಹಳ ತಿಳಿದುಕೊಳ್ಳಬೇಕಾಗಿದೆ. ಮಾನ್ಯ ಪುಟ್ಟಣ್ಣಯ್ಯನವರ ಭಾಷಣ ಕೇಳಬೇಕೆಂದು ನಾವು ಕಾತುರತೆಯಿಂದ ಕೂತಿದ್ದೇವೆ. ಕೃಷಿ ನೀತಿ ಬಗ್ಗೆ ಕೃಷಿ ಯಾವ ರೀತಿ ಇರಬೇಕು, ರೈತರನ್ನು ನಾವು ಇವತ್ತು ಓಲೈಸುವುದು ಅಲ್ಲ, ಅವನು ಕೆಲಸ ಮಾಡುವುದಕ್ಕೆ ತಯಾರಾಗಿದ್ದಾನೆ. ಅವನಿಗೆ ಮೈ ತುಂಬ ಕೆಲಸ ಕೊಡಬೇಕು, ಅವನಿಗೆ ಶಕ್ತಿ ತುಂಬಬೇಕು ಅವನಿಗೆ ನೀರು ಕೊಡಬೇಕು, ಅವನಿಗೆ ಒಳ್ಳೆಯ ಬೀಜ, ಗೊಬ್ಬರ ಕೊಡಬೇಕು, ಅವನಿಗೆ ಬೇಕಾದ ಸವಲತ್ತುಗಳನ್ನು ಕೊಡಬೇಕು. ಅವನಿಗೆ ಎಲ್ಲಾ ರೀತಿಯ ತಾಂತ್ರಿಕ ಸಲಹೆ ಕೊಟ್ಟು ಅವನಿಗೆ ಕೈ ತುಂಬ ಕೆಲಸ ಕೊಡಬೇಕು. ಅದು ಬಿಟ್ಟು ಇತ್ತೀಚೆಗೆ ರೈತರನ್ನು ಓಲೈಸತಕ್ಕಂತಹ ಕೆಲಸ ಆಗುತ್ತಿದೆ. ಮೊನ್ನೆ ತಾನೆ ಮಾನ್ಯ ಪ್ರಧಾನ ಮಂತ್ರಿಗಳು This is skill India' ಎನ್ನುತಕ್ಕಂಥ ಮಾತನ್ನು ಹೇಳಿದರು. 'This is not scheme India, this is skill India' ಎನ್ನುತಕ್ಕಂತಹ ಮಾತನ್ನು ಹೇಳಿದರು. skill India ಎಂದರೆ degree ಓದತಕ್ಕಂತಹವರು ಬೇಕಾಗಿಲ್ಲ. ಈ ಕೃಷಿ ಪ್ರಧಾನವಾಗಿರತಕ್ಕಂತಹ ದೇಶದಲ್ಲಿ skill ಆ ತಾಂತ್ರಿಕತೆ ಕೆಲಸ ಮಾಡತಕ್ಕಂಥಹ ಅವಶ್ಯಕತೆ ಇದೆ ಎನ್ನತಕ್ಕಂಥಹ

ಮಾತನ್ನು ಬಹಳ ಮಾರ್ಮಿಕವಾಗಿ ಒಳ್ಳೆಯ ಮಾತನ್ನು ಹೇಳಿದರು, Education ಅನ್ನು agriculture ಗೆ ಹೇಗೆ ಜೋಡಣೆ ಮಾಡಬೇಕೆಂಬ ಮಾತನ್ನು Practical ಆಗಿ ಹೇಳಿದರು, ಅದನ್ನು ಇನ್ನೂ ಆಳವಾಗಿ ಹೇಳಿದರು. ಅದರೆ ಈ ಸದನಕ್ಕೆ ಬಂದ ಮೇಲೆ ನಮಗೇನಾಗಿದೆ, ನಾವು ಬೇರೆ ಬೇರೆ ದೇಶಗಳ ಬಗ್ಗೆ ಪತ್ರಿಕೆಗಳಲ್ಲಿ ಕೇಳಿದ್ದೇವೆ. ಚೈನಾದಲ್ಲಿ ಕೃಷಿ ಹೇಗಿದೆ, ಇಸ್ರೇಲ್‌ನಲ್ಲಿ ಹೇಗಿದೆ, ಬೇರೆ ದೇಶದಲ್ಲಿ ಹೇಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ತಾವು ನಿಜವಾಗಿಯೂ ನಮ್ಮನ್ನೆಲ್ಲಾ ಹೊರದೇಶಗಳಿಗೆ ಅಧ್ಯಯನ ಮಾಡುವುದಕ್ಕೆ ಒಂದು 8–10 ದಿವಸಗಳ ಕಾಲ ಕಳುಹಿಸಿದ್ದರೆ, ನಾವು ಅಲ್ಲಿ ನೀರು ಹೇಗಿದೆ, sprinkler ಹೇಗಿದೆ drip irrigation ಹೇಗಿದೆ, ಅಲ್ಲಿ ಯಾವ ಗಿಡ ಬೆಳೆಯುತ್ತಾರೆ, ಯಾವ ಮರ ಬೆಳೆಯುತ್ತಾರೆ, ಯಾವ ಪ್ರಮಾಣದಲ್ಲಿ ಬೆಳೆಯುತ್ತಾರೆ? ಅವರ ಸ್ಥಿತಿ ಗತಿ ಯಾವ ರೀತಿ ಇದೆ ಎಂದು ನಾವು ಅಧ್ಯಯನ ಮಾಡಬಹುದು. ಅವೆಲ್ಲಾ ಏನೂ ಹೇಳದೆ ಯಾರೋ ಜನ ಹೇಳುತ್ತಾರೆಂದು ನಾವು ಟೂರ್ ಮಾಡುವುದನ್ನೇ ಮೊಟಕು ಮಾಡಿಸಿಬಿಟ್ಟಿರಿ. Especially agriculture field ನಲ್ಲಿ ಕೃಷಿ ಆಧಾರಿತ ಸಮಾಜದಲ್ಲಿರುವ ನಾವೆಲ್ಲರೂ ಬೇರೆ ಬೇರೆ ದೇಶಗಳಿಗೆ ಹೋಗಬೇಕಾಗಿತ್ತು. ತಾವು ನಮಗೆ ಕಳುಹಿಸಿಕೊಡಬೇಕಾಗಿತ್ತು. ಯಾರೋ ಏನೋ ಹೇಳಿದರು ಎಂದು ವಿರೋಧ ಪಕ್ಷದವರು ಹಾಗೂ ಆಡಳಿತ ಪಕ್ಷದವರು ಸೇರಿ ನಮಗೆ ಬ್ಲಾಕ್ ಮಾಡಿ ಬಿಟ್ಟರು. ಅಲ್ಲಿಗೆ ನಮ್ಮ ಕಲಿಯತಕ್ಕಂತಹ knowledge ಅನ್ನು block ಮಾಡಿದ ಹಾಗಾಯಿತು. ನಾವು ಜನಗಳ ಪರವಾಗಿ ಹೇಳುತ್ತಿದ್ದೇವೆ. ನಾವು ನೋಡಿಕೊಂಡು ಬಂದದ್ದನ್ನು ಸದನದಲ್ಲಿ ಬೆಳಕು ಚೆಲ್ಲಬಹುದಾಗಿತ್ತು. ಅದನ್ನು ಕಾನೂನು ರೂಪದಲ್ಲಿ ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತಿತ್ತು. ಆದರೆ ಆ ಸೌಲಭ್ಯವನ್ನು ನಾವು ಕಳೆದುಕೊಂಡಿದ್ದೇವೆ ಎಂದು ನಾನು ತಮ್ಮ ಮೂಲಕ ಜನತೆಗೆ ಹಾಗೂ ಈ ಸದನಕ್ಕೆ ಕೇಳುತ್ತಿದ್ದೇನೆ. ಇಂತಹ ಕ್ಷೇತ್ರಕ್ಕೆ ಅಧ್ಯಯನ ನಮಗೆ ಬಹಳ ಮುಖ್ಯವಾಗಿದೆ. ನಮಗೆ ನೀವು foreign tour ಕಳುಹಿಸಬೇಕಾಗಿತ್ತು. ನಾವು ಫಾರಿನ್ ಟೂರ್ ಹೋಗುವುದು ಮಜಾ ಮಾಡುವುದಕ್ಕಲ್ಲ. ಓದಿ ತಿಳಿದುಕೊಂಡು ನಮ್ಮ ಜ್ಞಾನ ಜಾಸ್ತಿ ಮಾಡಿಕೊಂಡು ಇಲ್ಲಿ ಮಾತನಾಡುವುದಕ್ಕೆ ನಮಗೆ ಟೂರ್ ಬೇಕಾಗಿತ್ತು. ಅಲ್ಲಿಗೆ ಹೋಗಿ ನಾವೇನು pant, shirt ಹಾಕಿಕೊಂಡು ಹೋಟೆಲ್‌ನಲ್ಲಿ ಕುಳಿತು ಊಟ ಮಾಡಿಕೊಂಡು

ಬರುತ್ತಿರಲಿಲ್ಲ. ಎಲ್ಲರಿಗೂ sugar, BP ಬಂದು ಬಿಟ್ಟಿದೆ. ಯಾರೇನೂ ಜಾಸ್ತಿ ಊಟ ಮಾಡುವುದಿಲ್ಲ. ಆದರೆ ಅಧ್ಯಯನಕ್ಕೋಸ್ಕರ ಹೋಗಬೇಕಾಗಿದ್ದ ಪ್ರವಾಸವನ್ನು ಈ ಸದನ ತಡೆಗಟ್ಟುಬಿಟ್ಟಿತು. knowledge ಬೇಕಾಗಿತ್ತು. knowledge ಇದ್ದಿದ್ದರೆ ನಾವು ಇಲ್ಲಿ ಮಾತನಾಡುವುದಕ್ಕೆ ಇನ್ನೂ ಹೆಚ್ಚಿನ ಪುಷ್ಠಿ ಸಿಗುತ್ತಿತ್ತು. ಈ ಪುಸ್ತಕ ನೋಡಿದರೆ ಹಳೆಯ ಕಾಲದ piano ಪೆಟ್ಟಿಗೆ ಬಾರಿಸಿದ ಹಾಗೆ ಇದೆ. ಹಿಂದೆ ಹೈಬ್ರಿಡ್ ಬೀಜ ಗೊಬ್ಬರ ಏನೂ ಬಂದಿರಲಿಲ್ಲ. ಹಳೆಯ ಕಾಲದಲ್ಲಿ ಬಯಲು ಸೀಮೆಯಲ್ಲಿ ಬರೀ ಹುರುಳಿ ಬೆಳೆಯುತ್ತಿದ್ದರು. ಇತ್ತೀಚೆಗೆ ಮೆಕ್ಕೆ ಜೋಳ, ಹೈಬ್ರಿಡ್ ತಳಿಗಳು ಎಲ್ಲಾ ಬಂದು ಬಿಟ್ಟಿವೆ. High speed ನಲ್ಲಿದ್ದಾರೆ. Agriculture ಹೇಗಾಗಿದೆ ಎಂದರೆ, agriculture is not profitable. Hand to mouth ಮಾಡಬೇಕು, ಮಾಡುತ್ತಾರೆ ಅಷ್ಟೇ, ತಮ್ಮ ಜೀವನ ಸಾಗಿಸುವುದಕ್ಕೆ, ಹೊಟ್ಟೆ ತುಂಬಿಸುವುದಕ್ಕೆ ಮಾಡುತ್ತಾರೆ. ದುಡ್ಡು ಇದ್ದವರು ಮಾತ್ರ ತೋರಿಕೆಗೋಸ್ಕರ ತೋಟ ಮಾಡುತ್ತಾರೆ, agriculture ಮಾಡುತ್ತಾರೆ. Un-accumulated money will be utilized, will be invested in agriculture sector. ಇದು ವಿಪರ್ಯಾಸ. ಕೃಷಿಗೆ ಸಂಬಂಧ ಇಲ್ಲದೇ ಇರುವವರು ನಮಗೆ ತಾಂತ್ರಿಕತೆ ಬಗ್ಗೆ ಹೇಳುತ್ತಾರೆ. ರೈತನ ಮಗ ಅಲ್ಲದೇ ಇರುವವನ್ನು, ಕೃಷಿ ಬಗ್ಗೆ ಗೊತ್ತಿಲ್ಲದೇ ಇರುವವರು ಅಲ್ಲಿ Agriculture Secretary ಯಾಗಿ, Agriculture Officer ಆಗಿ, scientist ಆಗಿ ಕೂತಿರುತ್ತಾರೆ. ಆದರೆ ಅದೇ scientist ಇಲ್ಲಿಗೆ ಬರಬೇಕು. Agriculture ನಲ್ಲಿ ಓದಿರತಕ್ಕಂತಹ, ಈ ಮಣ್ಣಿನಲ್ಲಿ ಬೆಳೆದಿರತಕ್ಕಂತಹ ಮಗ agriculture scientist ಆಗಬೇಕೆಂದು ಹೇಳತಕ್ಕಂತಹದು Practical knowledge is very very important. ಹಾಗಾಗಿ ಇತ್ತೀಚಿನ ದಿವಸಗಳಲ್ಲಿ ನಾವು green revolution ಹಾಗೂ ದೊಡ್ಡ ದೊಡ್ಡ ರೆವಲ್ಯೂಷನ್‌ಗಳ ಬಗ್ಗೆ ಹೇಳುತ್ತಿದ್ದೇವೆ. ಬದಲಾವಣೆ ಆಗಬೇಕೆಂದರೆ, ನಮ್ಮ ಸಿಸ್ಟಮ್‌ನಲ್ಲಿ ಎಲ್ಲೋ ಒಂದು ಕಡೆ ತೊಂದರೆ ಆಗುತ್ತಿದೆ. Agriculture University ಗೂ, scientist ಗೂ, ಬೇಸಾಯ ಮಾಡತಕ್ಕಂತಹವನಿಗೂ ಸಂಬಂಧವೇ ಇಲ್ಲ. ಅವರ ನೀತಿಗೆ, ಅವರ ಆಡಳಿತಕ್ಕೆ ಒಂದಕ್ಕೊಂದು ಸಂಬಂಧವೇ ಇಲ್ಲ. ಆದ್ದರಿಂದ ನಾವು ನಮ್ಮ ವ್ಯಾಪ್ತಿಯಲ್ಲಿ ಸಾಕಷ್ಟು ಮಟ್ಟಿಗೆ ನೋಡುತ್ತೇವೆ. ಇವತ್ತು ಬೀಜ, ಗೊಬ್ಬರ, ಕ್ರಿಮಿನಾಶಕ, ಉಪಕರಣಗಳನ್ನು ಕೊಡತಕ್ಕಂಥದ್ದು, ತೋಟಗಾರಿಕೆ ಮಾಡತಕ್ಕದ್ದನ್ನು ಇವೆಲ್ಲವನ್ನೂ

ನಾವು ನೋಡುತ್ತಿದ್ದೇವೆ. ಆದರೆ ಇದರ University knowledge, science knowledge, research knowledge ನಮ್ಮ ಕೊನೆಯ ವ್ಯಕ್ತಿಯಾದ ರೈತನಿಗೆ ಸರಿಯಾದ ರೀತಿಯಲ್ಲಿ ಮುಟ್ಟುತ್ತಿಲ್ಲ. ಅದನ್ನು ತಲುಪಿಸುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಮಧ್ಯಮರ್ತಿಗಳ ಹಾವಳಿ ಬಹಳ ಇದೆ. ಈ ದೇಶದಲ್ಲಿ ರೈತರ ಹೆಸರಿನಲ್ಲಿ ಮಧ್ಯವರ್ತಿಗಳು ಲಾಭ ಮಾಡಿಕೊಳ್ಳುತ್ತಿದ್ದಾರೆ. ನಿಜವಾದ ಲಾಭ ರೈತರಿಗೆ ಆಗುತ್ತಿಲ್ಲ. ರೈತ ಏನು ಉತ್ಪಾದನೆ ಮಾಡುತ್ತಿದ್ದಾನೆ? ಅವನು ಮಾರುಕಟ್ಟೆಗೆ ಹೋಗಿ ಕೈ ಕಟ್ಟಿಕೊಂಡು ನಿಂತುಕೊಳ್ಳಬೇಕು ಅಷ್ಟೇ ಆದರೆ ಅವರು ಕೇಳತಕ್ಕಂತಹ ಹಕ್ಕು ಅಥವಾ ಅವನು ಬೆಳೆದ ಬೆಳೆ ಮೇಲೆ ತನ್ನ ಅಧಿಕಾರ ಇದೆ ಕೇಳತಕ್ಕಂಥದ್ದನ್ನು ಅವನು ಕಳೆದುಕೊಂಡಿದ್ದಾನೆ. ಮಧ್ಯವರ್ತಿಗಳ ಹಾವಳಿ ಬಹಳ ಇದೆ. ಈ ದೇಶದಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು. ರೈತರ ಶೋಷಣೆ ಮಧ್ಯವರ್ತಿಗಳಿಂದ, ಕಮೀಷನ್ ಏಜೆಂಟ್‌ಗಳಿಂದ, ಯಾರೋ artifical market ಮಾಡುವವರಿಂದ ಅವನಿಗೆ ತೊಂದರೆಯಾಗುತ್ತಿದೆ. ಅದಕ್ಕೋಸ್ಕರ ಇದಕ್ಕೆ ಒಂದು ಸಮಗ್ರವಾದ ನೀತಿ ಬೇಕು. ಇಷ್ಟು discrimination ನಡೆಯುತ್ತಿದೆ, ಬೇಸಾಯ ಮಾಡುವವರಿಗೆ, ಕೃಷಿ ಮಾಡುವವರಿಗೆ ನಿಜವಾದ ಪರಿಣಿತರಿಗೆ ಭೂಮಿ ಇಲ್ಲ. ಭೂಮಿ ಇದ್ದರೆ ನೀರಿಲ್ಲ. ನೀರಿದ್ದರೆ ಸಾಲ ಇಲ್ಲ, ಸಾಲ ಇದ್ದರೆ ಮತ್ತೊಂದು ರೀತಿಯ ಸಪೋರ್ಟ್ ಇಲ್ಲ. ಕರೆಂಟ್ ಇಲ್ಲ. ಇತ್ತೀಚೆಗೆ ಒಂದು ಟ್ರೆಂಡ್ ಬೆಳೆದು ಬಿಟ್ಟಿದೆ. ಏನೂ ಸಿಗಲಿಲ್ಲವೆಂದರೆ ಆತ್ಮಹತ್ಯೆ ಮಾಡಿಕೊಳ್ಳುವುದು. Fashionಗೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಅದರ ಹಿಂದೆ ನಾವು ಬಹಳಷ್ಟು ಗಂಭೀರವಾಗಿ ಆಲೋಚನೆ ಮಾಡಬೇಕು. ರೈತ ಸಮುದಾಯದ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಅದು ಅಷ್ಟು ಸುಲಭದ ಮಾತಲ್ಲ. ಇವತ್ತು ಹೆಣ್ಣು ಮಕ್ಕಳು ಕೃಷಿ ಹೆಚ್ಚು ಮಾಡುತ್ತಿದ್ದಾರೆ. ಸ್ವಲ್ಪ ಸ್ವಲ್ಪ ಸಾಲ ಮಾಡಿರುತ್ತಾರೆ. ಮೆಕ್ಕೆ ಜೋಳ ಬೆಳೆದ ಸಮಯದಲ್ಲಿ ಮೆಟಾಸಿಡ್ ಕುಡಿದು ಬಿಡುತ್ತಾರೆ. ಕೃಷಿ ಮಾಡತಕ್ಕಂಥ ಹೆಣ್ಣು ಮಕ್ಕಳು ಮೆಟಾಸಿಡ್ ಕುಡಿಯುತ್ತಿದ್ದಾಳೆ. The burden of the family lies on the women. ಆ ತಾಯಿ ಮೇಲಿರುತ್ತದೆ. ಆ ತಾಯಿಗೆ ಮಕ್ಕಳನ್ನು ಕೂಡ ಸಾಕುವುದಕ್ಕೆ ಆಗುವುದಿಲ್ಲ. ಸಾಲವನ್ನು ಕೂಡ ತೀರಿಸುವುದಕ್ಕೆ ಆಗುವುದಿಲ್ಲ. ಮರ್ಯಾದೆಯನ್ನು ಕೂಡ

ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅವಳ ಗಂಡ ಕೂಡ ಕುಡಕನಾಗಿರುತ್ತಾನೆ, ಬಿತ್ತನೆ ಬೀಜ ಕೂಡ ಹಾಳಾಗಿರುತ್ತದೆ. ಇಂಥ ಸಂದರ್ಭದಲ್ಲಿ ಅವಳೇನು ಮಾಡುತ್ತಾಳೆಂದರೆ, ಇಂಥದ್ದನ್ನು ನೋಡಿ ನೋಡಿ ಸಾಕಾಗಿ ಹೊಲದಲ್ಲಿ ಮೆಕ್ಕೆಜೋಳ ಬೆಳೆಯುವ ಟೈಂನಲ್ಲಿ, ಆತ್ಮಹತ್ಯೆ ಮಾಡಿಕೋಳ್ಳುತ್ತಾಳೆ.

ಶ್ರೀ ಬಿ.ಬಿ. ನಿಂಗಯ್ಯ : ಶಿವಮೂರ್ತಿಯವರೆ ಒಂದ್ನಿಮಿಷ,

ಶ್ರೀ ಕೆ. ಶಿವಮೂರ್ತಿ : ಹೇಳಿ ಸರ್.

ಶ್ರೀ ಬಿ.ಬಿ. ನಿಂಗಯ್ಯ : ಹಳ್ಳಿಗಳಲ್ಲಿ ವಿದ್ಯಾವಂತ ಹೆಣ್ಣು ಮಗಳು ಇವತ್ತು ರೈತನ ಮಗನನ್ನು ಮದುವೆಯಾಗುವುದಕ್ಕೆ ಸಿದ್ಧಳಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಇವತ್ತು ಕೃಷಿ ಲಾಭದಾಯವಾಗಿಲ್ಲದಿರುವುದೇ ಮುಖ್ಯ ಕಾರಣವೆಂದು ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಕೃಷಿ ಆಧಾರಿತ ಸಮಾಜದಲ್ಲಿರತಕ್ಕಂಥ ಹೆಣ್ಣು ಮಗಳು ಬಹಳಷ್ಟು ಪ್ರಕರಣಗಳಲ್ಲಿ suicide ಮಾಡಿಕೊಳ್ಳುತ್ತಿದ್ದಾಳೆ. ಅದರ ಬಗ್ಗೆ ಹೆಚ್ಚು ಪ್ರಚಾರವಾಗುತ್ತಿಲ್ಲ. ಏಕೆ suicide ಮಾಡಿಕೊಳ್ಳುತ್ತಿದ್ದಾಳೆಂದರೆ ಸಾಲದ ಬಾಧೆಯಿಂದ. ಮಾಡಿದ ಸಾಲವನ್ನು ತೀರಿಸುವುದಕ್ಕೆ ಆಗುವುದಿಲ್ಲ. ಕೃಷಿಯಲ್ಲಿ ಲಾಭ ಬರುತ್ತಿಲ್ಲ. ಅವಳಿಗೆ support ಇರುವುದಿಲ್ಲ. ಸಂಸಾರದ ಹೊಣೆಯನ್ನು ಹೊತ್ತುಕೊಂಡಿರುತ್ತಾಳೆ. ಆದರೆ ಸಂಸಾರವನ್ನು ನಡೆಸುವುದಕ್ಕೆ ಆಗುವುದಿಲ್ಲ, ಮಕ್ಕಳನ್ನು ಸಾಕುವುದಕ್ಕೆ ಆಗುವುದಿಲ್ಲ. ಆಕಾಶ ಮತ್ತು ಭೂಮಿಯನ್ನು ನೋಡುತ್ತಾಳೆ, ಮಳೆ ಬರುವುದಿಲ್ಲ, ಆಗ ಏನು ಮಾಡುತ್ತಾಳೆಂದರೆ, ಒಂದು ಸಲ ನೋಡಿಕೊಂಡು ಸ್ವಲ್ಪ ಸಾರಾಯಿ ಜೊತೆಗೆ ಮೆಟಾಸಿಡ್ ಕುಡಿದುಬಿಡುತ್ತಾಳೆ. ಏಕೆ ಸಾರಾಯಿ ಕುಡಿಯುತ್ತಾಳೆಂದರೆ ನಿಶೆ ಆಗಬೇಕು ಮತ್ತು ಅದರ ನೋವು ಗೊತ್ತಾಗಬಾರದೆಂದು. ಏಕೆಂದರೆ ಮೆಟಾಸಿಡ್ ಕುಡಿದರೆ sudden death ಆಗುತ್ತದೆ. ತಾವು ಇದರ ಬಗ್ಗೆ ದಯವಿಟ್ಟು ಸರ್ವೇ ಮಾಡಿಸಬೇಕು. ಕೃಷಿ ಕ್ಷೇತ್ರದಲ್ಲಿರುವ ಹೆಣ್ಣು ಮಕ್ಕಳು, ಅದರಲ್ಲಿಯೂ ಜವಾಬ್ದಾರಿ ಹೊತ್ತುಕೊಂಡಿರುವಂಥವರು, ಮದುವೆ ಮತ್ತು ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಿರುವಂಥವರು, ಸಾಲ ಮಾಡಿರತಕ್ಕಂಥವರು, ಮಳೆ ಬರದೆ

ಆ ಸಾಲದ ಬಾಧೆಯಿಂದ ಸಂಸಾರ ಸಾಗಿಸುವುದಕ್ಕೆ ಆಗದೇ ಮರ್ಯಾದೆಗೋಸ್ಕರ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಆದರೆ ಕೃಷಿ ನೀತಿಯಲ್ಲಿ ಕೃಷಿಗೆ ಯಾವ ರೀತಿಯಲ್ಲಿ ಬೆಂಬಲವನ್ನು ಕೊಡಬೇಕು? ಅದರಲ್ಲಿ ಭೂಮಿ ಇರಬಹುದು, ಬೀಜವಿರಬಹುದು, ಕ್ರಿಮಿನಾಶಕ ಅಥವಾ ನೀರಿರಬಹುದು. ಇವತ್ತು ನೀರಿನ ವಿಚಾರದಲ್ಲಿ ಏನಾಗಿದೆ ಗೊತ್ತೆ? ಇವತ್ತು ಚಾನಲ್‌ನಲ್ಲಿ ನೀರು ಹೋಗುತ್ತಿರುವುದೇ ಕೇವಲ ಸಾಹುಕಾರರಿಗೆ. ನಮ್ಮ ಬಡವರ ಹೊಲಕ್ಕೆ ನೀರು ಬರುತ್ತಿಲ್ಲ. Landless, small farmers, marginal farmers. big farmers ಎಂದು ಇದ್ದಾರೆ. ನಮ್ಮಲ್ಲಿ ಸಣ್ಣ ಸಣ್ಣ ರೈತರಿಗೆ, ಗುಡ್ಡಗಾಡಿನಲ್ಲಿರತಕ್ಕಂಥವರಿಗೆ ನೀರಾವರಿ ಸೌಲಭ್ಯವೇ ಇಲ್ಲ. ಎಲ್ಲೆಲ್ಲಿ ಸ್ವಲ್ಪ ಸಮತಟ್ಟಾಗಿದೆ ಅಲ್ಲೆಲ್ಲಾ ನೀರಾವರಿಯಿದೆ, ಪಾಪ ಅವರಿಗೆ ಜಮೀನೇ ಇಲ್ಲ. ಮನೆ ಕಟ್ಟಿಕೊಳ್ಳುವುದಕ್ಕೆ ಎಲ್ಲೋ ಗುಡ್ಡದಲ್ಲಿ ಆಗಬೇಕು. ಫಾರೆಸ್ಟ್ ಪ್ರದೇಶದಲ್ಲಿ ಕಟ್ಟಿಕೊಂಡರೆ ಅಲ್ಲಿ ಅವರನ್ನು ಬಿಡುಸುತ್ತಾರೆ. ಯಾವುದಾದರೂ ಖಾಲಿ ಜಮಿನಿನಲ್ಲಿ ಕಟ್ಟಿಕೊಳ್ಳಬೇಕೆಂದರೆ, ಅಲ್ಲಿ ಹಳ್ಳ, ಈ ಗುಡ್ಡದಲ್ಲಿ ಕಟ್ಟಿಕೊಳ್ಳಿ ಎಂದು ಹೇಳುತ್ತಾರೆ. ಗುಡ್ಡದಲ್ಲಿ ಕಟ್ಟಿಕೊಂಡರೆ ಅಲ್ಲಿಗೆ ನೀರನ್ನು ಹೇಗೆ ಏರಿಸಬೇಕು ಹೇಳಿ ಎನ್ನುತ್ತಾರೆ. ನಾನು ಕೆಲವು ಕೃಷಿ ತಜ್ಞರಿಗೆ ಗುಡ್ಡದಲ್ಲಿ ನೀರಾವರಿ ಮಾಡುವುದಕ್ಕೆ ಮತ್ತು ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ ಪ್ಲ್ಯಾನ್ ಮಾಡಿ ಎಂದು ಹೇಳಿದೆ. ಆಗ ಅವರು ಸರ್ ಎತ್ತರವಾಗಿರುವ ಗುಡ್ಡಕ್ಕೆ ಹೇಗೆ ನೀರು ಹೋಗುತ್ತದೆ ಎಂದು ನನ್ನನ್ನೇ ಕೇಳಿದರು. ಈಗಾಗಲೇ ಜಪಾನ್‌ನಲ್ಲಿ, ನಾಗಾಲ್ಯಾಂಡ್‌ನಲ್ಲಿ ಮತ್ತು ಬೇರೆ ಬೇರೆ ದೇಶಗಳಲ್ಲಿ ಗುಡ್ಡಗಾಡಿಗೆ ನೀರನ್ನು ಸರಬರಾಜು ಮಾಡುತ್ತಿದ್ದಾರೆ, ಅಲ್ಲಿ ಎತ್ತರದಲ್ಲಿರುವ ಮತ್ತು ಗುಡ್ಡಗಳಲ್ಲಿರುವ ಜಮೀನಿಗೆ ಹೇಗೆ ನೀರನ್ನು ಸರಬರಾಜು ಮಾಡುತ್ತಿದ್ದಾರೆ. crop pattern ಹೇಗಿದೆ ಎಂಬ ಬಗ್ಗೆ ಕೂಡ ನಾವು ಅಧ್ಯಯನ ಮಾಡುವುದಕ್ಕೆ ಹೋಗುತ್ತಿರುವುದು. ಏಕೆಂದರೆ ನಮ್ಮ ಇಂಜಿನಿಯರ್‌ಗಳಿಗೆ ಮತ್ತು ಕೃಷಿ ತಜ್ಞರಿಗೆ ಕೇಳಿದರೆ ಗುಡ್ಡಗಾಡಿಗೆ ಹೇಗೆ ನೀರನ್ನು ಕೊಡುವುದು ಎಂದು ಅವರು ನಮ್ಮನ್ನೇ ಕೇಳುತ್ತಾರೆ. ಗುಡ್ಡಗಾಡಿನಲ್ಲಿರುವವರು ಏನು ಹೇಳುತ್ತಾರೆಂದರೆ, why this discrimination? ನಮಗೆ ಯಾವ ರೀತಿಯಲ್ಲಿ ತಾರತಮ್ಯವಾಗಿದೆ ನೋಡಿ ಸ್ವಾಮಿ' ಎಂದು ಹೇಳುತ್ತಾರೆ. ಗುಡ್ಡದಲ್ಲಿರುವವರಿಗೆ, ಎತ್ತರದಲ್ಲಿರುವವರಿಗೆ, ಬಹಳ ಮೇಲೆ ಮನೆಗಳನ್ನು ಕಟ್ಟಿಕೊಂಡಿರುವವರಿಗೆಲ್ಲರಿಗೂ

ನೀರೇ ಬರುವುದಿಲ್ಲವೆಂದು ಅಲ್ಲಿರುವವರು ಹೇಳುತ್ತಾರೆ. ಹೀಗಾಗಿ ಬಯಲು ಸೀಮೆ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ನೀರಾವರಿ ಒದಗಿಸುವ ವಿಚಾರದಲ್ಲಿ ತಾರತಮ್ಯವಾಗಿದೆ, ಇಲ್ಲಿ ಕುಡಿಯುವ ನೀರಿಲ್ಲ, ನೀರಾವರಿ ಸೌಲಭ್ಯವಿಲ್ಲ, ವಿದ್ಯುಚ್ಛಕ್ತಿ ಸರಬರಾಜಿಲ್ಲ. ಈಗೇನು 28 ಸಾವಿರ ಕುಗ್ರಾಮಗಳೇನಿವೆ ಅಲ್ಲಿರುವವರು ಕುರಿ ಮೇಯಿಸುವುದು, ಮೇಕೆ ಸಾಕುವುದು, ಕೃಷಿ ಕೆಲಸಗಳನ್ನು ಮಾಡಿಕೊಂಡಿದ್ದಾರೆ, ಈ ಕುಗ್ರಾಮಗಳಲ್ಲಿರತಕ್ಕಂಥವರಿಗೆ ಈಗಲೂ ಕೂಡ ಒಂದು ಸ್ಥಾನಮಾನ ಸಿಕ್ಕಿಲ್ಲ. They are not recognized, they are not independent, they are dependants. These villages, these gramas are dependants. They are agriculturists, they are artisans. ಅವರು ಹಾಲು ಉತ್ಪಾದನೆಯನ್ನು ಮಾಡುತ್ತಾರೆ, ಕೃಷಿ ಕೆಲಸಗಳನ್ನು ಮಾಡತಕ್ಕಂಥವರು, ಮೇಕೆ ಮತ್ತು ಕುರಿ ಕಾಯತಕ್ಕಂಥವರು, ಅವರಿಗೆ ಈಗಲೂ ಭೂಮಿಯಿಲ್ಲ. ಕೆಲವರು ಬಿಲ್ಡಿಂಗ್ ಕಟ್ಟಿದ್ದಾರೆ, ಹೋಗುತ್ತಾರೆ, ಅಲ್ಲಿ ಕೆಲವರು ಕೂಲಿಯಾಳುಗಳಾಗಿ ಸೇರಿಕೊಳ್ಳುತ್ತಾರೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಈಗಿರತಕ್ಕಂಥ 28 ಸಾವಿರ ಕುಗ್ರಾಮಗಳು ಮತ್ತು ಅಲ್ಲಿರತಕ್ಕಂಥವರು ಈಗಲೂ ಕೂಡ they are all second rate villages, second rate citizens. ಸಂವಿಧಾನದಲ್ಲಿ ಈ ಪದವಿದೆಯೆಂದು ತಾವು ಅವರಿಗೆ ಹೇಳಬೇಕೆಂದೇ ಹೇಳುತ್ತಿದ್ದೇನೆ. ಶಾಸನವನ್ನು ಮಾಡತಕ್ಕಂಥ ಈ ಸಭೆಯಲ್ಲಿ ಬಹಳಷ್ಟು ಬಾರಿ ನಾನು ಒತ್ತಾಯವನ್ನು ಮಾಡಿದ್ದೇನೆ, 28 ಸಾವಿರ ಕುಗ್ರಾಮಗಳಲ್ಲಿ ನೀರಾವರಿಯಿಲ್ಲ, ಅಲ್ಲಿಗೆ ಯಾವುದೇ ಸೌಲಭ್ಯವನ್ನೂ ಕೂಡ ಕೊಟ್ಟಿಲ್ಲ, ಕೃಷಿ ಸೌಲಭ್ಯವಿಲ್ಲ, ಮಾಹಿತಿ ತಂತ್ರಜ್ಞಾನದ ಸೌಲಭ್ಯವಿಲ್ಲ, ಪೋಸ್ಟಲ್ ವ್ಯವಸ್ಥೆಯಿಲ್ಲ, ರೋಡ್ ಇಲ್ಲ, ಹೀಗೆ ಈ ರೀತಿಯಲ್ಲಿ ತಾರತಮ್ಯವಾಗಿದೆ. ಅದಕ್ಕೋಸ್ಕರ ಈ ತಾರತಮ್ಯವನ್ನು ಹೋಗಲಾಡಿಸಬೇಕಾದರೆ ಅಲ್ಲಿರತಕ್ಕಂಥ ಊರುಗಳಿಗೆ ಮಾನ್ಯತೆ ಕೊಡಿ, ಇಲ್ಲಿರತಕ್ಕಂಥ ಸಂಸಾರಗಳು ಕೃಷಿಯನ್ನೇ ಪ್ರಧಾನವಾಗಿ ನಂಬಿಕೊಂಡು ಆ ವೃತ್ತಿಯನ್ನು ಮಾಡುತ್ತಿದ್ದಾರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಕೃಷಿ ವಿಚಾರದಲ್ಲಿ ಕೆಲವೊಂದು ಬದಲಾವಣೆಗಳನ್ನು ತಾವು ಸಭಾಧ್ಯಕ್ಷರಿಗೆ ಹೇಳಿ ಮಾಡಿಸಬೇಕಾಗುತ್ತದೆ. The attitude should be changed. ನಾವೇನು ಮಜಾ ಮಾಡುವುದಕ್ಕೆ ಅಲ್ಲಿಗೆ ಹೋಗುವುದಿಲ್ಲ. We want to study, we want to know

the countries. ತಾವು ಮತ್ತು ಸರ್ಕಾರ ನಮ್ಮನ್ನೆಲ್ಲರನ್ನೂ ವಿದೇಶಕ್ಕೆ ಕಳುಹಿಸಿಕೊಡಬೇಕು. ನಾವೆಲ್ಲರೂ ಹೋಗಿ ಅಧ್ಯಯನವನ್ನು ಮಾಡಿಕೊಂಡು ಬರುತ್ತೇವೆ. ನೀವು ಬೇಕಾದರೆ ತದನಂತರ ನಮ್ಮನ್ನು ಕೇಳಿ. you take a class. Then we can control these officers, we can ask the officers. Unless ನಮಗೆ ಮೆಟೀರಿಯಲ್ಸ್ ಇಲ್ಲದೆ, ಸಬ್ಜೆಕ್ ಇಲ್ಲದೆ, ಹೀಗಾದರೆ ಶಾಸನವನ್ನು ಮಾಡಿ ಎಂದರೆ ಏನು ಶಾಸನ ಮಾಡುವುದು? ಕುಳಿತುಕೊಂಡು ಅವರೇನು ಹೇಳುತ್ತಾರೋ ಅದನ್ನೇ ನಾವು ಕುಳಿತುಕೊಂಡು ಮಾಡಬೇಕಾಗುತ್ತದಷ್ಟೆ. Agriculture review meeting ನಲ್ಲಿ ಕೃಷಿ ಬಗ್ಗೆ ಮಾತನಾಡುತ್ತಾರೆ, ಮಾತನಾಡುತ್ತಾರೆ, ಅದನ್ನು ಇಲ್ಲಿ ನಾವು ಹೇಳಬಾರದು, ಬೀಜ ಇರಲಿ, ಗೊಬ್ಬರವಿರಲಿ, ಬಿತ್ತನೆ ಮಾಡುವ ಟೈಂನಲ್ಲಿ ಬೀಜ ಮತ್ತು ಗೊಬ್ಬರವನ್ನು ಕೊಡುವುದಿಲ್ಲ. ಬೇಸಿಗೆಯಲ್ಲಿ ಬೀಜ ಮತ್ತು ಗೊಬ್ಬರವನ್ನು ಕೊಡುತ್ತಾರೆ. ಯಾವ ಸೀಸನ್‌ನಲ್ಲಿ ಏನು ಕೊಡಬೇಕೋ ಅದನ್ನು ಅವರು ಕೊಡುವುದಿಲ್ಲ. ಅದುದರಿಂದ ತಾವು ನಮ್ಮ ಬಗ್ಗೆ ದಯವಿಟ್ಟು ಮಾನ್ಯ ಅಧ್ಯಕ್ಷರಿಗೆ ಹೇಳಬೇಕು. ಈ ಸದನದಲ್ಲಿರತಕ್ಕಂಥ ಮಾನ್ಯ ಶಾಸಕರಲ್ಲಿ ಕೆಲವರು ಹೊರದೇಶಕ್ಕೆ ಹೋಗಿ ತಿಳಿದುಕೊಂಡಿರುತಕ್ಕಂಥವರಿದ್ದಾರೆ. ನೋಡದೇ ಇರತಕ್ಕಂಥವರು knowledge ಪಡೆಯಬೇಕಾಗುತ್ತದೆ. ಈಗ ನೋಡಿ ಮಾನ್ಯ ಪುಟ್ಟಣ್ಣಯ್ಯನವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಇದೀಗ ತಾನೆ ಮಾನ್ಯ ಬಸವರಾಜ ಬೊಮ್ಮಾಯಿಯವರೂ ಕೂಡ ಬಹಳ ಚೆನ್ನಾಗಿ ಮಾತನಾಡಿದರು. ಅದೇ ರೀತಿ ನಮ್ಮ ಗೌಡರೇನಿದ್ದಾರೆ ಅವರೆಲ್ಲರೂ they are all experts. ಇವರುಗಳಿಂದ ನಾವು ಕಲಿಯಬೇಕಾಗುತ್ತದೆ. ಅದಕ್ಕೋಸ್ಕರ ಇಂಥ ಜ್ಞಾನ ಶಾಸನಗಳನ್ನು ಮಾಡುವುದಕ್ಕೆ ಈ ಸದನಕ್ಕೆ ಬೇಕು. ಅದಕ್ಕೋಸ್ಕರ ಈ ಸದನ ಅದರ ಬಗ್ಗೆ ಗಂಭೀರವಾಗಿ ಯೋಚನೆಯನ್ನು ಮಾಡಿ ಈ ಒಂದು ಕ್ಷೇತ್ರಕ್ಕೆ ಹೆಚ್ಚು ಶಕ್ತಿಯನ್ನು ತುಂಬೇಕೆನ್ನುವ ಮಾತನ್ನಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಆಗಮಿಸಿ ಅಧ್ಯಕ್ಷ ಪೀಠದಲ್ಲಿ ಆಸೀನರಾದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಶಿರಸಿ) : ಮಾನ್ಯ ಅಧ್ಯಕರೆ, ಬೇಡಿಕೆ ಸಂಖ್ಯೆ 01 ರಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಿಷಯಗಳಿಗೆ ಕುರಿತಂತೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿರುವುದಕ್ಕೆ ಪ್ರಥಮವಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈ ನಾಡಿನ ಜನತೆಯೇ ಬಯಸಿದಂತೆ ಈ ರೀತಿ ವಿಸ್ತೃತವಾಗಿ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕೆಂದು ತಾವುಗಳು ಎಲ್ಲರಿಗೂ ಇಂಥ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ಒಳ್ಳೆಯದಾಗಿದೆ ಎನ್ನುವ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ವಿಸ್ತರಿಸಿ ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ to the point ಕೆಲವು ವಿಷಯಗಳನ್ನು ಹೇಳುವುದಕ್ಕೆ ಹೋಗುತ್ತೇನೆ. ಈಗಾಗಲೇ ಶ್ರೀಯುತ ಬಸವರಾಜ ಬೊಮ್ಮಾಯಿಯವರು ಅಂಕಿ ಸಂಖ್ಯೆಗಳ ಸಹಿತವಾಗಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ಬಜೆಟ್‌ನಲ್ಲಿ ಶೇ. 10 ರಷ್ಟು ಯೋಜನೆಯಲ್ಲಿ ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದ ಇಲಾಖೆಗಳಿಗೆ ಕೊಟ್ಟಿರುವಂಥದ್ದು, ಈ ಇಲಾಖೆಗಳು ಎಷ್ಟು ಬೃಹದಾಕಾರವಾಗಿದೆ ಎಂಬ ಬಗ್ಗೆ ಅಂಕಿ ಸಂಖ್ಯೆಗಳ ಮೂಲಕ ನಮಗೆಲ್ಲರಿಗೂ ಅದರ ಅರಿವು ಇದ್ದೇ ಇದೆ. ನಮ್ಮ ರಾಜ್ಯದಲ್ಲಿ ಶೇ. 73 ರಷ್ಟು ಗ್ರಾಮೀಣ ಭಾಗಗಳು ನಮ್ಮ ರಾಜ್ಯದಲ್ಲಿವೆ. ಸುಮಾರು 80 ಲಕ್ಷ ರೈತಾಪಿ ಕುಟುಂಬಗಳೇ ಇವೆ. ಈ ರೀತಿಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭೌಗೋಳಿಕವಾಗಿ ವಿಸ್ತರಿಸಿಕೊಂಡಿರುವಂಥ ಸಾಮಾಜಿಕವಾಗಿ ಜನಸಂಖ್ಯೆಯನ್ನು ಹೊಂದಿರುವಂಥ ಈ ಒಂದು ಪ್ರತಿನಿಧಿಸುವಂಥ ನಮ್ಮ ಕೃಷಿ ತೋಟಗಾರಿಕಾ ಕ್ಷೇತ್ರವೇನಿದೆ ಇದರ ಬಗ್ಗೆ ಸರ್ಕಾರಗಳು ಇನ್ನೂ ಹೆಚ್ಚು ಆದ್ಯತೆಯನ್ನು ಕೊಡಬೇಕು. ನಾನು ಇದನ್ನು ಮಾತನಾಡಿದರೆ ಇದು ರಾಜಕೀಯ ದೃಷ್ಟಿಕೋನದಲ್ಲಿ ಎಂದು ಯಾರೂ ಭಾವಿಸಬಾರದು. ನಮ್ಮ ಭಾರತೀಯ ಜನತಾ ಪಕ್ಷದ ಸರ್ಕಾರವಿದ್ದಾಗ ಕೃಷಿಗೆ ಪ್ರತ್ಯೇಕವಾದಂಥ ಬಜೆಟ್‌ಅನ್ನು ಕೊಟ್ಟು, ದೇಶದಲ್ಲಿ ಇನ್ನೂ ಎಲ್ಲೂ ಇಲ್ಲದೇ ಇರತಕ್ಕಂಥದ್ದನ್ನು, ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಕೃಷಿ ಬಜೆಟ್‌ನ್ನು ಕೊಟ್ಟು ಕೃಷಿಗೆ ಒಂದು ಆದ್ಯತೆಯಿದೆ, ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೆ ಎನ್ನುವಂಥ ಸಂದೇಶವನ್ನು ನಾಡಿನ ರೈತ ಸಮುದಾಯಕ್ಕೆ ಕಳುಹಿಸುವಂಥ ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆ. ಆದರೆ ಈಗಿನ ಮುಖ್ಯಮಂತ್ರಿಗಳು ಬಜೆಟ್‌ಅನ್ನು ಮಂಡಿಸುವಾಗ ಅದರಲ್ಲೇನೂ ವಿಶೇಷತೆಯಿಲ್ಲ. ಇದಕ್ಕೆ ಆದಾಯವಿಲ್ಲ,

ಹೀಗಾಗಿ ಖರ್ಚಿನದೊಂದನ್ನೇ ಏನು ಬಜೆಟ್ ಎಂದು ಮಾಡುವುದು, ಈ ರೀತಿ ಕೆಲವು ತಾಂತ್ರಿಕ ಕಾರಣಗಳನ್ನು ಹೇಳಿ ಕೃಷಿಯದ್ದನ್ನು main budget ನಲ್ಲಿ ಸೇರಿಸಿ ಹೇಳಿದ್ದಾರೆ. ನಾವು ಇದಕ್ಕೆ ಕೊಡಬೇಕಾದಂಥ ಒಂದು Focus ಏನಿದೆ ಅದು ಸಿಗಬೇಕು ಎನ್ನುವ ಕಾರಣಕಾಗಿಯೇ ಪ್ರತ್ಯೇಕವಾದ ಬಜೆಟ್‌ಅನ್ನು ನಮ್ಮ ಸರ್ಕಾರದಲ್ಲಿ ನಾವು ಮಾಡಿದ್ದೆವು. ಪ್ರತ್ಯೇಕವಾದಂಥ ಬಜೆಟ್‌ಅನ್ನು ಕೊಡುವುದೇ ಈ Focus ಇರಬೇಕು ಎನ್ನುವ ಉದ್ದೇಶಕ್ಕಾಗಿ. ಆದರೆ ಈ ಸರ್ಕಾರದಲ್ಲಿ ಅದರ ಬಗ್ಗೆ ನಿರ್ಲಕ್ಷ್ಯವಾಯಿತು. ಇದನ್ನು ನಾವು ನೋಡಿದ್ದೇವೆ. ಹೀಗಾಗಬಾರದು, ಇದಕ್ಕೆ ಇರಬೇಕಾದಂಥ ಪ್ರಾಮುಖ್ಯತೆಯನ್ನು ಸರ್ಕಾರ ಕೊಡಲೇಬೇಕು. ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರು ಆಹಾರ ಉತ್ಪಾದನೆಯನ್ನು ಮಾಡಿಕೊಳ್ಳುತ್ತಿದ್ದಾರೆ, ಸ್ವಯಂ ಉದ್ಯೋಗಿಗಳಾಗಿದ್ದಾರೆ, ಸ್ವಾವಲಂಬಿ ಜೀವನವನ್ನು ನಡೆಸುತ್ತಿದ್ದಾರೆ, ನಮ್ಮ ಇಡೀ ಒಂದು ವ್ಯವಸ್ಥೆಗೆ ಇಷ್ಟು ದೊಡ್ಡ ಶಕ್ತಿಯನ್ನು ಕೊಟ್ಟಿದ್ದಾರೆ, ಈ ಎಲ್ಲಾ ಕಾರಣಗಳಿಂದ ಕೃಷಿಗೆ ಅದರದೇ ಅದಂಥ ಪ್ರಾಮುಖ್ಯತೆಯನ್ನು ಪ್ರತ್ಯೇಕವಾಗಿ ಸರ್ಕಾರ ಕೊಡಬೇಕಾಗಿತ್ತು ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಕೇವಲ ಕೃಷಿ ಮತ್ತು ತೋಟಗಾರಿಕೆಗೆ ಮಾತ್ರವಲ್ಲದೆ ಸರ್ಕಾರದ ಇತರ ಕೆಲವು ಇಲಾಖೆಗಳಿಗೆ ಸಂಬಂಧಪಟ್ಟಂತೆ ಕೂಡ ಹೇಳುವ ಕೆಲವು ವಿಚಾರಗಳಿವೆ. ಮಾನ್ಯ ಕೃಷ್ಣ ಬೈರೇಗೌಡರು ಗಮನಕೊಟ್ಟು ಕೇಳಿಸಿಕೊಳ್ಳಿ, ತಾವು ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕು. ಹಿರಿಯ ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಕೇಳಿಸಿಕೊಳ್ಳಬೇಕು. ತಾವುಗಳು ಗಮನಿಸಬೇಕಾದಂತಹ ವಿಷಯವನ್ನು ಹೇಳುತ್ತಿದ್ದೇನೆ. ಈಗ ಸರ್ಕಾರ ಪ್ರಾರಂಭವಾದಾಗ ಅಥವಾ ಈ ವ್ಯವಸ್ಥೆ ಪ್ರಾರಂಭವಾದಾಗ ಅಥವಾ ಈ ಕೃಷಿ ಇಲಾಖೆ 1915ರಲ್ಲಿ ಪ್ರಾರಂಭವಾದಾಗ ಈ ಒಂದು ವ್ಯವಸ್ಥೆ ಏನು ಮುಂದುವರೆದು ಬಂದಿದೆ, ಇದರಲ್ಲಿ ಒಂದು ಚಿಕ್ಕ ಪರಿವರ್ತನೆಯನ್ನು, ನಿಮ್ಮೆಲ್ಲರ ಹಿರಿತನದ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಬರುವಂತಹ ದಿನದಲ್ಲಿ ಇದನ್ನು ಮಾಡಬೇಕು, ಇಡೀ ನಾಡಿನ ಜನತೆಗೆ ಹಾಗೂ ದೇಶಕ್ಕೆ ಅಗತ್ಯತೆ ಇದೆ. ಇಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಮೀನುಗಾರಿಕೆ, ಹೈನುಗಾರಿಕೆ ಈ ರೀತಿ ಅನೇಕ ಇಲಾಖೆಗಳು ನೇರವಾಗಿ ರೈತರಿಗೆ ಸಂಬಂಧಪಡುವುದಿದೆ. ನಮ್ಮ ತೋಟಕ್ಕೆ ನಿಮ್ಮ ಕೃಷಿ ಇಲಾಖೆಯವರು ಯಾರಾದರೂ ಬಂದಾಗ, ಆ ತೆಂಗಿನ

ಮರಕ್ಕೆ ಏನಾಗಿದೆ ಎಂದು ಕೇಳಿದರೆ, ಅವರು ಅದು ನಮಗೆ ಬರುವುದಿಲ್ಲ, ತೋಟಗಾರಿಕೆ ಇಲಾಖೆಗೆ ಬರುತ್ತದೆಂದು ಹೇಳುತ್ತಾರೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕರೆ, ನಾನು ಮಾತನಾಡುವಾಗ ತಾವು ಇರಲಿಲ್ಲ, ಈಗ ಬಂದಿರಿ. ಶಾಸಕರಿಗೆ ಕೃಷಿ ಬಗ್ಗೆ ಅಧ್ಯಯನ ಮಾಡುವುದಕ್ಕೆ ವಿದೇಶ ಪ್ರವಾಸ ಮಾಡುವುದಕ್ಕೆ ಅವಕಾಶವಿದ್ದು, ಈಗಾಗಲೇ ನಾವುಗಳು ಬಂದು ಒಂದು ವರ್ಷ ನಾಲ್ಕು ತಿಂಗಳಾಯಿತು. ಯಾವುದೋ ಕಾರಣದಿಂದ ವಿದೇಶಕ್ಕೆ ಹೋಗುವುದನ್ನು ಬಂದ್ ಮಾಡಲಾಗಿದೆ, ಅದರ ಕಾರಣ ನನಗೆ ಗೊತ್ತಿಲ್ಲ.

ಅಧ್ಯಕ್ಷರು : ನೀವು ವಿದೇಶಕ್ಕೆ ಹೋಗಬೇಕಾಗಿದೆಯೇ ?

ಶ್ರೀ ಕೆ. ಶಿವಮೂರ್ತಿ : ಹೌದು. ನಮಗೆ ಅಲ್ಲಿ ಹೋಗಿ ತಿಳಿದುಕೊಳ್ಳುವುದಕ್ಕೆ ಅವಕಾಶವಿದೆ.

ಅಧ್ಯಕ್ಷರು : ಸ್ವಾಮಿ ಈ ಬೇಡಿಕೆಗಳ ಬಗ್ಗೆ ಚರ್ಚೆಗಳು ಪೂರೈಸಲಿ. ಜುಲೈ 30ರವರೆಗೆ ಶಾಸನಸಭೆ ಇದೆ. ನೀವು ಹೋಗುವುದು ಹೇಗೆ ಹೋಗುತ್ತೀರಿ? ಇದು ಸಾಮಾನ್ಯ ಆಡಳಿತ ಬರುತ್ತದೆಯಲ್ಲ, ಆಗ ವಿಸ್ತೃತವಾದ ಭಾಷಣವನ್ನು ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಎಲ್ಲಾ ಇಲಾಖೆಗಳ ಮಾನ್ಯ ಹಿರಿಯ ಸಚಿವರುಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಇಚ್ಛಾಶಕ್ತಿಯನ್ನು ತೋರಿಸಿ ಈ ಇಲಾಖೆಯ ಜೊತೆಯಲ್ಲಿ ಒಂದು ಸಮನ್ವಯತೆ ಸಾಧಿಸುವಂತಹ ಪ್ರಯತ್ನವನ್ನು ಮಾಡಬೇಕು. ಈ ಸಮನ್ವಯತೆ ಸಾಧಿಸಿಲ್ಲವೆಂದರೆ ಸರ್ಕಾರಿ ವ್ಯವಸ್ಥೆಯನ್ನು ನಾವು ಇನ್ನಷ್ಟು ಹೆಚ್ಚು ಜಟಿಲಗೊಳಿಸುತ್ತಾ, ಭಾರಗೊಳಿಸುತ್ತಾ ಹೋಗುತ್ತೇವೆಯೇ ಹೊರತು, ರೈತ ಸಮುದಾಯಕ್ಕೆ ಯಾವ ಪ್ರಮಾಣದಲ್ಲಿ ನ್ಯಾಯ ಸಿಗಬೇಕು? ಸಹಾಯ ಸಿಗಬೇಕು ಅದು ಸಿಗುವುದಿಲ್ಲ. ಎಲ್ಲಾ ಇಲಾಖೆಗಳಲ್ಲಿ ಹುದ್ದೆಗಳು ಖಾಲಿಯಿವೆ. ಎಲ್ಲಾ ಇಲಾಖೆಗಳಲ್ಲಿ ಹೆಡ್‌ಗಳು ಜಾಸ್ತಿಯಾಗಿ ಹಣ ಖರ್ಚಾಗುತ್ತಿದೆ. ಆದರೆ ರೈತರಿಗೆ ಏನು ಉಪಯೋಗವಾಗಿದೆ ಎಂದರೆ ಏನೂ ಇಲ್ಲವೆನ್ನುವಂತಹ ಸ್ಥಿತಿ ಇರುತ್ತದೆ. ಆ ಹಿನ್ನೆಲೆಯಲ್ಲಿ ಇದಕ್ಕೆ ಒಂದು ಸಮನ್ವಯತೆ

ಸಾಧಿಸುವುದಕ್ಕೆ ಬೇಕಾದಂತಹ ಎಲ್ಲಾ ಇಲಾಖೆಗಳನ್ನು ಕ್ರೋಢೀಕರಿಸಿ, ಈಗ ಖರ್ಚು ಮಾಡುತ್ತಿರುವಂತಹ ಹಣವನ್ನೆಲ್ಲಾ common pool ನಲ್ಲಿಟ್ಟು, ಯಾವ್ಯಾವುದು, ಎಲ್ಲೆಲ್ಲಿ. ಏನೇನು ಬೇಕು ಅದು ರೈತ ಸಮುದಾಯಕ್ಕೆ ಹೋಗುವ ಹಾಗೆ ನೋಡಿ ಮಾಡಬೇಕು. ಉದಾಹರಣೆಗೆ ರೇಷ್ಮೆ ಎಲ್ಲಿ ಬೆಳೆಯುತ್ತಾರೆ ಎಂದು ತಮಗೆ ಗೊತ್ತಿದೆ. ಆದರೆ ರೇಷ್ಮೆ ಆಗದಿರುವಂತಹ ಪ್ರದೇಶಗಳಲ್ಲಿ ಕೂಡ ರೇಷ್ಮೆ ಇಲಾಖೆಯ ಕೆಲಸ ಕಾರ್ಯಗಳು ಹೇಗಿದೆ ಎಂದು ನೋಡಿದರೆ ಅಧಿಕಾರಿಗಳನ್ನು/ನೌಕರರನ್ನು ಸಾಕುವುದಕ್ಕೆ ಆ ಇಲಾಖೆ ಇದೆ ಎಂದು ಆಗುತ್ತದೆ. ಎಲ್ಲಿ ಯಾವುದು ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಿ ಅಲ್ಲಿಗೆ ಸಂಬಂಧಪಟ್ಟಂತಹ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಯೋಚನೆ ಮಾಡಬೇಕು. ಅದು ಸರ್ಕಾರದ ಆದ್ಯತೆಯಾಗಬೇಕು. ಎಲ್ಲಾ ಇಲಾಖೆಗಳಲ್ಲಿ ಸಮನ್ವಯತೆ ಸಾಧಿಸಬೇಕು. ಯಾವ ಇಲಾಖೆಯ ಪ್ರಾಮುಖ್ಯತೆ ಯಾವ ಭಾಗದಲ್ಲಿದೆ ಎಂದು ನೋಡಿ ಮಾಡಬೇಕು. ಇನ್ನು ಹೈನುಗಾರಿಕೆ ವಿಚಾರದಲ್ಲಿ ಹೇಳುವುದಾದರೆ ಯಾವ್ಯಾವ ಭಾಗದಲ್ಲಿ ಪಶುಸಂಗೋಪನೆಗೆ ಆದ್ಯತೆ ಕೊಡಬೇಕು ಮತ್ತು ಅಲ್ಲಿ ಕೊಟ್ಟರೆ ರೈತರು ಪಶುಸಂಗೋಪನೆಯಲ್ಲಿ ತಮ್ಮನ್ನು ತಾವು ಹೆಚ್ಚು ತೊಡಗಿಸಿಕೊಳ್ಳುತ್ತಾರೆನ್ನುವುದು ನಮಗೆ ಗೊತ್ತಿದೆ. ಆದರೆ ಇಡೀ ರಾಜ್ಯದಲ್ಲಿ ಏಕರೀತಿಯಾದಂತಹ ನೀತಿಯನ್ನು ಅನುಸರಿಸಿ, ಬೇಕಾಗಿರುವಲ್ಲಿ ಬೇಡದಿರುವಲ್ಲಿ ಒಂದೇ ಅಳತೆಗೋಲಿನ ಮಾನದಂಡವನ್ನು ನಾವು ಇಟ್ಟುಕೊಂಡು ಹೋಗುವುದರಿಂದ ನಿಜವಾಗಿ ಯಾರು ಆಸಕ್ತರಿದ್ದಾರೆ, ಯಾವ ಭೂಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ಮತ್ತು ಅದರ ಸಂಬಂಧಿತ ಚಟುವಟಿಕೆಗಳು ನಡೆಯುತ್ತವೋ, ಅದನ್ನು ಗುರುತಿಸಿ ಪ್ರೋತ್ಸಾಹಿಸಿದಂತೆ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಇಲಾಖೆಗಳ ಮಧ್ಯೆ ಸಮನ್ವಯತೆ ಬೇಕು ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹೇಗೆ ನಿರ್ಲಕ್ಷ್ಯಕ್ಕೊಳಪಟ್ಟಿದೆ ಎಂದರೆ, ನನ್ನ ಹತ್ತಿರ ತೋಟಗಾರಿಕೆ ಇಲಾಖೆಯ ವಾರ್ಷಿಕ ವರದಿ ಇಲ್ಲಿದೆ. ಇದರಲ್ಲಿ ಒಂದೇ ಒಂದು ಅಂಕಿಸಂಖ್ಯೆಗಳನ್ನು ನೋಡಿದರೆ ಇದು ಹೇಗಿದೆ ಎಂದು ನಮಗೆ ಗೊತ್ತಾಗುತ್ತದೆ. ಗ್ರೂಪ್ ಎ, ಬಿ, ಸಿ, ಡಿ ಹುದ್ದೆಗಳಲ್ಲಿ ಕೆಲಸ ಮಾಡಬೇಕಾದಂತಹ ನೌಕರರ ಸಂಖ್ಯೆಯನ್ನು ನೋಡಿದಾಗ ಇಲಾಖೆಯಲ್ಲಿ ಒಟ್ಟು ಮಂಜೂರಾಗಿರುವ ಹುದ್ದೆಗಳು 5,728 ಇದ್ದರೆ, ಅದರಲ್ಲಿ 3753 ನೌಕರರು ಕೆಲಸವನ್ನು

ನಿರ್ವಹಿಸುತ್ತಿದ್ದಾರೆ. ಸುಮಾರು 2,000 ಹುದ್ದೆಗಳು ತೋಟಗಾರಿಕೆ ಇಲಾಖೆಯಲ್ಲಿ ಖಾಲಿ ಇವೆ. ಇದರೊಳಗೆ ಇನ್ನು ಬೇರೆ ಬೇರೆ ರೀತಿಯ ಹುದ್ದೆಗಳೆಲ್ಲವೂ ಇದೆ, ಅದರ ವಿವರಕ್ಕೆ ನಾನು ಹೋಗುವುದಿಲ್ಲ. ಕೃಷಿ ಇಲಾಖೆಯಲ್ಲಿ ಇದಕ್ಕಿಂತಲೂ ಭಯಾನಕ ಪರಿಸ್ಥಿತಿ ಇದೆ. ಕೃಷಿ ಇಲಾಖೆಯಲ್ಲಿ ಯಾರ್‍ಯಾರು ಎಲ್ಲೆಲ್ಲಿ, ಎಷ್ಟೆಷ್ಟು ಕೆಲಸ ಮಾಡುತ್ತಿದ್ದಾರೆ ಹಾಗೂ ಖಾಲಿ ಇರುವಂತಹ ಹುದ್ದೆಗಳನ್ನು ನೋಡಿದರೆ ಒಟ್ಟು 10,600 ಹುದ್ದೆಗಳು ಮಂಜೂರಾಗಿದ್ದರೆ, ಖಾಲಿಯಿರುವ ಹುದ್ದೆಗಳು ಸಮಾರು 5,000 ಇವೆ. ಇಷ್ಟೊಂದು ಖಾಲಿಯಿರುವ ಹುದ್ದೆಗಳನ್ನು ಇಟ್ಟುಕೊಂಡು ಕೃಷಿ ಇಲಾಖೆ ರೈತ ಸಮುದಾಯವನ್ನು ಹೇಗೆ ಪ್ರತಿನಿಧಿಸುವುದಕ್ಕೆ ಸಾಧ್ಯವಿದೆ, ಅವರ ಭಾವನೆಗಳಿಗೆ ಮತ್ತು ಅವರ ಆಗುಹೋಗುಗಳಿಗೆ ಹೇಗೆ ಸ್ಪಂದಿಸುವುದಕ್ಕೆ ಸಾಧ್ಯವಿದೆ? ಈ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಆದ್ಯತೆ ಮೇಲೆ ಪ್ರಯತ್ನ ಮಾಡಲೇಬೇಕು. ಇಲ್ಲದಿದ್ದರೆ ಇಷ್ಟು ದೊಡ್ಡ ಪ್ರಮಾಣದಲ್ಲಿರುವ ರೈತ ಸಮುದಾಯದ ಭಾವನೆಗಳಿಗೆ ಮತ್ತು ಅವರ ಚಟುವಟಿಕೆಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ನನ್ನ ಕ್ಷೇತ್ರದಲ್ಲಿ ನೋಡುತ್ತೇನೆ. ರೈತನಿಗೆ ಏನಾದರೂ ತೊಂದರೆಯಾಗಿದೆ ಹೋಗಿ ನೋಡಿಕೊಂಡು ಬಾ ಎಂದು ರೈತ ಸಂಪರ್ಕ ಕೇಂದ್ರದಲ್ಲಿರುವವರಿಗೆ ಹೇಳಿದರೆ ಸರ್ ನಾನು ಹೋದರೆ ಇಲ್ಲಿ ಯಾರೂ ಇರುವುದಿಲ್ಲ, ಬೀಗ ಹಾಕಿಕೊಂಡು ಹೋಗಬೇಕಾಗುತ್ತದೆ, ಆ ಸಂಪರ್ಕ ಕೇಂದ್ರಕ್ಕೆ ಬಂದವರು ನಮ್ಮನ್ನೇ ಬಯ್ಯುದ್ಕೊಳ್ಳುತ್ತಾರೆ, ನಾವೇನು ಮಾಡಲಿ ಎಂದು ನಮ್ಮನ್ನೇ ಕೇಳುತ್ತಾರೆ. ಏಕೆಂದರೆ ಆ ಕೇಂದ್ರದಲ್ಲಿ ಒಬ್ಬರೋ ಇಬ್ಬರೋ ಇರುವುದು, ಯಾರಾದರೂ ಕರೆದಾಗ ಅವರು ಹೋಗಬೇಕಲ್ಲ, ಅವರಿಗೆ ಹೋಗುವುದಕ್ಕಾಗುವುದಿಲ್ಲ. ಈ ರೀತಿ ದೊಡ್ಡದಾಗಿ ಖಾಲಿಯಿರುವಂತಹ ಹುದ್ದೆಯ ಪ್ರಮಾಣ ಏನಿದೆ ಇದು ಭಯಾನಕ ಇದೆ ಮತ್ತು ಆತಂಕ ಮೂಡಿಸುವಂತಹ ಪ್ರಮಾಣ ಇದೆ ಇಷ್ಟೊಂದು ಪ್ರಮಾಣದಲ್ಲಿರುವ ಹುದ್ದೆಗಳನ್ನು ತಕ್ಷಣ ತುಂಬುವಂತಹ ಪ್ರಯತ್ನವಾಗಬೇಕು. ಮಂಜೂರಾಗಿರುವ ಹುದ್ದೆಗಳಿಗೆ ವಿಶೇಷವಾಗಿ ಬಜೆಟ್ ಅಲೋಕೋಷನ್ ಇದ್ದೇ ಇದೆ. ಹಾಗಾಗಿ ಈ ಹುದ್ದೆಗಳನ್ನು ತುಂಬುವಂತಹ ಪ್ರಯತ್ನಗಳು ತಕ್ಷಣದಲ್ಲಿ ಆಗಬೇಕೆನ್ನುವಂತಹ ಅಗ್ರಹವನ್ನು ನಾನು ಮಾಡುತ್ತೇನೆ. ಈ ಪ್ರಮಾಣದ ಕೊರತೆಯನ್ನಿಟ್ಟುಕೊಂಡು ರೈತರ ಯಾವುದೇ ಸಮಸ್ಯೆಗಳಿಗೆ ಇಲಾಖೆ ಸ್ಪಂದಿಸಿ ಎಂದು ಹೇಳಿದರೆ ಸ್ಪಂದಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದಲ್ಲಿ ಆ ಇಲಾಖೆಯಲ್ಲಿ

ಪ್ರಾಮುಖ್ಯತೆ ಇಲ್ಲವೆನ್ನುಂತಹ ಅರ್ಥವಾಗುತ್ತದೆ. ಆ ರೀತಿ ಆಗಬಾರದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಖಾಲಿಯಿರುವ ಹುದ್ದೆಗಳನ್ನು ತುಂಬಬೇಕೆಂದು ಆಗ್ರಹಿಸುತ್ತೇನೆ. ನಾನೂ ಸಹ ಹಿಂದೆ ಸಚಿವನಾಗಿ ಕೆಲಸ ಮಾಡಿ ನೋಡಿದ್ದೇನೆ. ನಾವು ಅದನ್ನು ಮಾಡಲೇಬೇಕಾಗಿರುವುದು, ಅದರಲ್ಲೂ ವಿಶೇಷವಾಗಿ ನಾನು ಈ ಇಲಾಖೆಯನ್ನು ಕುರಿತು ಹೇಳುವಾಗ, Financial heads ಏನಿದೆ ಇದನ್ನು ಕಡಿಮೆ ನಾವು ಮಾಡಲೇಬೇಕು. ಕೇಂದ್ರ ವಲಯ, ರಾಜ್ಯವಲಯ, ಜಿಲ್ಲಾವಲಯ ಮತ್ತು ತಾಲ್ಲೂಕುವಲಯ ಎಂದು ಹೇಳಿ ಇಲ್ಲದಿರುವ head create ಮಾಡಿ ಯಾವ ಹೆಡ್‌ಗೂ ಬೇಕಾಗುವಷ್ಟು ಹಣವನ್ನು ಕೊಡದೇ, ಆ ಹೆಡ್ ಇಟ್ಟುಕೊಂಡು ಸುಮ್ಮನೆ ನಾವು ಈ ಹೆಡ್‌ನಲ್ಲಿ ಇಷ್ಟು ಹಣ ಖರ್ಚು ಮಾಡಿದೆವು, ಆ ಹೆಡ್‌ನಲ್ಲಿ ಅಷ್ಟು ಹಣ ಖರ್ಚು ಮಾಡಿದೆವು ಎಂದು ಹೆಡ್ ತೋರಿಸಿಕೊಂಡು ಇರುತ್ತೇವೆ ಹೊರತು, ಅದಕ್ಕೆ ಯಾವ ಪ್ರಮಾಣದಲ್ಲಿ ಅಲೋಕೋಷನ್ ಇರಬೇಕು, ಆ ಪ್ರಮಾಣದಲ್ಲಿ ಇರುವುದಿಲ್ಲ. ನಾವು ಸುಮ್ಮನೆ ಹೆಡ್ ಇಟ್ಟುಕೊಂಡು ಸುಮ್ಮನೆ ಬೇರೆ ಬೇರೆ ಯೋಜನೆಗಳನ್ನು ಮಾಡಿಕೊಂಡು ರೈತರಿಗೆ ನಾವು ಏನೋ ಬಣ್ಣದ ಕನಸುಗಳನ್ನು ಕಟ್ಟುವುದಕ್ಕೆ ಕಾರಣವಾಗುತ್ತೇವೆ ಹೊರತು ಈ ರೀತಿ ಹೆಡ್‌ಗಳನ್ನು ಇಟ್ಟುಕೊಂಡರೆ, ನಾವು ಮೂಲಭೂತವಾಗಿ ರೈತರ ಅಗತ್ಯತೆಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗದಿರುವಂತಹ ಸ್ಥಿತಿ ಬರುತ್ತದೆ. ಹಾಗಾಗಿ ಈ ಹೆಡ್‌ಗಳನ್ನು ಕ್ರೋಢೀಕರಿಸಿ, ನಿಜವಾಗಿ ಅಗತ್ಯವಿರುವಂತಹ ಹೆಡ್‌ಗಳನಷ್ಟೆ ಇಟ್ಟುಕೊಂಡು, ಉಳಿದ ಹಣವನ್ನೆಲ್ಲಾ ಅಗತ್ಯವಿರುವಂತಹ ಹೆಡ್‌ಗಳಿಗೆ ಕೊಡಿ, ಆಗ ರೈತ ಸಮುದಾಯಕ್ಕೆ ನ್ಯಾಯ ಸಿಗುತ್ತದೆ. ಇಲ್ಲವೆಂದರೆ ಈ ರೀತಿ ಹೆಡ್‌ಗಳನ್ನು ಹೆಚ್ಚು ಮಾಡುತ್ತಾ ಹೋಗುವುದು, popularity programme ಒಂದೋ ಎರಡೋ ಹಾಕಿಕೊಳ್ಳುವುದು, ನಾವು ಹಾಗೆ ಮಾಡುತ್ತಿದ್ದೇವೆ, ಹೀಗೆ ಮಾಡುತ್ತಿದ್ದೇವೆಂದು ಹೇಳುವುದು. ಕೇವಲ ಹಣ ಖರ್ಚಾಗುವುದು ಬಿಟ್ಟರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಏನು ಉಪಯೋಗವಾಯಿತು ಎಂದು ಕೇಳಿದರೆ ಏನೂ ಇಲ್ಲವೆನ್ನುವ ಸ್ಥಿತಿ ಬರುತ್ತದೆ. ಹಾಗಾಗಿ ಈ ಹೆಡ್‌ಗಳ ಕ್ರೋಢೀಕರಣವಾಗಬೇಕಾಗಿರುವುದು ಇನ್ನೊಂದು ಮುಖ್ಯವಾದಂತಹ ಸಂಗತಿ ಇದೆ. ಇವುಗಳಿಗೆ ಸಂಬಂಧಪಟ್ಟಂತೆ ಕ್ರಿಯಾಯೋಜನೆಯನ್ನು ಮಾಡುವಾಗ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ನೋಡಬೇಕು. ಯಾವ್ಯಾವ ಕಾರ್ಯಕ್ರಮಗಳಿಗೆ

ಎಷ್ಟೆಷ್ಟು ಬರುತ್ತದೆ ಎಂದು ನಗೆಪಾಟಲಿಗೆ ಈಡಾಗುವಂತಹ ರೀತಿಯಲ್ಲಿ ಅಲೋಕೇಷನ್‌ಗಳನ್ನು ಮಾಡುತ್ತಾರೆ. ಹಾಗಾಗಿ ಈ ಹೆಡ್‌ಗಳನ್ನು ಕ್ರೂಢೀಕರಿಸುವಂತಹ ಅಗತ್ಯ ಇದೆ. ಇದರ ಬಗ್ಗೆ ಸಹ ಸರ್ಕಾರ ಗಂಭೀರವಾಗಿ ಯೋಚಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಕೃಷಿ ಯಾಂತ್ರೀಕರಣಗೊಳಿಸುವುದಕ್ಕೆ ನಾವು ಏನು ಪ್ರಯತ್ನ ಮಾಡಬೇಕಾಗಿದೆ ಅದು ಸಾಲುತ್ತಿಲ್ಲ. ಕೃಷಿ ಯಾಂತ್ರೀಕರಣಗೊಳಿಸುವುದಕ್ಕೆ ನಮ್ಮ ಹಣಕಾಸಿನ ನೆರವು ಇನ್ನಷ್ಟು ಹೆಚ್ಚಲೇಬೇಕು. ಕೃಷಿ ಯಾಂತ್ರೀಕರಣಗೊಳಿಸುವುದಕ್ಕೆ ಕೇಂದ್ರ ಸರ್ಕಾರದ ನೆರವು ಸಹ ಸಿಗುತ್ತದೆ. ಆದರೆ ರಾಜ್ಯ ಸರ್ಕಾರದಲ್ಲಿ ಸಹ ಕೃಷಿ ಯಾಂತ್ರೀಕರಣಗೊಳಿಸಬೇಕು. ಇವತ್ತು ಕೃಷಿ ಕೂಲಿ ಕಾರ್ಮಿಕರ ಅಭಾವ ಎಲ್ಲಾ ರೈತ ಸಮುದಾಯದಲ್ಲಿ ದೊಡ್ಡ ಪ್ರಮಾಣದಲ್ಲಿ ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಯಾಂತ್ರೀಕರಣಗೊಳಿಸುವುದಕ್ಕೆ ಇವತ್ತು ಏನಾಗಿದೆ ಎಂದರೆ ನಾನು ನಮ್ಮ ಅನುಭವದಲ್ಲಿ ನೋಡುತ್ತಿದ್ದೇವೆ. ಇವತ್ತು ಸಬ್ಸಿಡಿ ಕೊಟ್ಟು equipment ತೆಗೆದುಕೊಳ್ಳಿ ಎಂದು ಹೇಳುತ್ತೀರಿ, ನೀವು ಸಬ್ಸಿಡಿ ಕೊಟ್ಟ ದರಕ್ಕೆ ಮಾರ್ಕೆಟ್‌ನಲ್ಲಿ ಆ equipment ನಮಗೆ ಬೇಕಾಗಿರುವಂತಾದ್ದು ಸಿಗುತ್ತದೆ. ಸಬ್ಸಿಡಿ ಕೊಟ್ಟು ಯಾಂತ್ರೀಕರಣಗೊಳಿಸುವಂತಹ ಯೋಜನೆಗಳೇನಿದೆ? ಇದರ ಬಗ್ಗೆ ಸರ್ಕಾರದಲ್ಲಿ ಗಂಭೀರವಾಗಿ ಪುನರ್‌ಪರಿಶೀಲನೆಯಾಗಬೇಕು. ಸಬ್ಸಿಡಿ ಎಂದು ಕೊಡುತ್ತಿರುವಂತಹ ಹಣ ಪೋಲಾಗುತ್ತಿದೆ ಎನ್ನುವಂತಹ ವಾತಾವರಣ ಇವತ್ತು ಇದೆ, ಆ ಪರಿಸ್ಥಿತಿ ನಿರ್ಮಾಣವಾಗಿದೆ. ಉದಾರಣೆಗೆ sprayer ಏನಿದೆ, ಅದಕ್ಕೆ ನಾಲ್ಕು ಸಾವಿರ ರೂಪಾಯಿ ಇದ್ದರೆ, ಎರಡು ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತೇವೆ, ಎರಡು ಸಾವಿರ ರೂಪಾಯಿಗೆ ನಮಗೆ sprayer ಸಿಕ್ಕಿತ್ತು ಎಂದು ಹೇಳುತ್ತಾರೆ. ಅದೇ sprayer ಮಾರ್ಕೆಟ್‌ನಲ್ಲಿ ಎರಡು ಸಾವಿರ ರೂಪಾಯಿಗೆ ಸಿಗುತ್ತದೆ. ಸಬ್ಸಿಡಿ ಕೊಟ್ಟು ತೆಗೆದುಕೊಳ್ಳುವ sprayer ಗೆ ನಾಲ್ಕು ಸಾವಿರ ರೂಪಾಯಿ. ಆಗ ಎರಡು ಸಾವಿರ ರೂಪಾಯಿ ಸಬ್ಸಿಡಿ ಹೋಯಿತಲ್ಲ. ಈ ರೀತಿ ಲೆಕ್ಕಚಾರ ಹಾಕಿಕೊಂಡು ಯಾಂತ್ರೀಕರಣ ಎನ್ನುವುದು ಕೆಲವೇ ಉತ್ಪಾದಕರಿಗೆ, ಮಾರಾಟಗಾರರಿಗೆ ಸಹಾಯ ಮಾಡುವುದಾಗಿದೆಯೇ ಹೊರತು ರೈತ ಸಮುದಾಯಕ್ಕೆ ಅದು ನೇರವಾಗಿ ಎಷ್ಟು ಅನುಕೂಲವಾಗಿದೆ ಎನ್ನುವುದನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಬೇಕು. ಸರ್ಕಾರ ಜವಾಬ್ದಾರಿಯಿಂದ ವ್ಯವಸ್ಥೆಯಲ್ಲಿ

ಈಗ ಏನಾಗಿದೆಯೆಂಬುದನ್ನು ನೋಡಬೇಕು. ಮತ್ತೆ ರೈತರಿಗೆ ಏನು ಬೇಕು ? ಅದು ಭೂ ಪ್ರದೇಶಗಳಿಗೆ ಅನುಗುಣವಾಗಿ ಬೇರೆ ಬೇರೆ ಬೇಕು. ಬೆಳೆಗೆ ಅನುಗುಣವಾಗಿ ಬೇರೆ ಬೇರೆ ಬೇಕು, ಉದಾಹರಣೆಗೆ ಹೇಳುವುದಾದರೆ, ನಮ್ಮಲ್ಲಿ ಅಡಿಕೆ ಸುಲಿಯುವ ಯಂತ್ರಗಳಿಗೆ ಹಣ ಬೇಕೆಂದು ಹೇಳುತ್ತೇವೆ. ಆದರೆ ಅದನ್ನು ಬೀದರ್ ಜಿಲ್ಲೆಯಲ್ಲಿ ಅಡಿಕೆ ಸುಲಿಯುವ ಯಂತ್ರಕ್ಕೆ ಈ ಹೆಡ್‌ನಲ್ಲಿ ಇಷ್ಟು ಕೊಡಲಾಗಿದೆಯೆಂದು ಹೇಳುತ್ತಾರೆ. ಆದರೆ ಅಲ್ಲಿ ಅಡಿಕೆ ಬೆಳೆ ಎಲ್ಲಿದೆ ? ಅಡಿಕೆ ಬೆಳೆ ನಮ್ಮ ಮಲೆನಾಡಿನ ಕರಾವಳಿ ಭಾಗದಲ್ಲಿದೆ. ಈ ಯಂತ್ರವನ್ನು ನಮ್ಮ ಭಾಗಕ್ಕೆ ಕೊಡಬೇಕಲ್ಲಾ ?

ಅಧ್ಯಕ್ಷರು : ಈಗ ಕೋಲಾರ ಜಿಲ್ಲೆಯಲ್ಲಿ ಅಡಿಕೆ ಬೆಳೆ ಎಷ್ಟು ಆಗಿದೆಯೆಂಬುದನ್ನು ನೋಡಿದ್ದೀರಾ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಬೀದರ್ ಜಿಲ್ಲೆಯ ಬಗ್ಗೆ ಹೇಳಿದ್ದೇನೆ. ನಾನು ದಕ್ಷಿಣ ಕರ್ನಾಟಕದ ಬಗ್ಗೆ ಹೇಳಿಲ್ಲ. ಈ ಕಡೆಯೆಲ್ಲಾ ಏನಾಗುತ್ತಿದೆಯೆಂಬುದೆಲ್ಲಾ ಗೊತ್ತಿದೆ, ಇವರು ರೇಷ್ಮೆ ಬಿಟ್ಟು, ನಮ್ಮ ಅಡಿಕೆ ಬೆಳೆ ಬೆಳೆಯುವಂಥದ್ದು ಬೇರೆ ವಿಷಯವಿದೆ, ಆ crop pattern ಅಥವಾ crop area ಯಾವ್ಯಾವುದಿರಬೇಕು, ಇತ್ಯಾದಿಗಳು ಏನೇನಾಗಿದೆಯೆಂಬುದೆಲ್ಲಾ ಬೇರೆ ಇದೆ. ಆದರೆ ಯಾವ ಪ್ರದೇಶಕ್ಕೆ ಯಾವ ಯಾಂತ್ರೀಕರಣದ ಅವಶ್ಯಕತೆ ಇದೆ ಎಂಬ ಬಗ್ಗೆ ವಿಶೇಷ ಗಮನ ಕೊಡಬೇಕು, ಯಾವ ಯಂತ್ರಗಳ ಅಗತ್ಯತೆ ಇದೆಯೆಂಬುದನ್ನು ನೋಡಬೇಕು. ಈಗ ನಮಗೆ power tiller ಅಗತ್ಯವಿದೆ, ಆದರೆ ನಿಮಗೆ ಟ್ರ್ಯಾಕ್ಟರ್ ಕೊಡುತ್ತೇವೆ, ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ನಾವು ಟ್ರ್ಯಾಕ್ಟರ್ ತೆಗೆದುಕೊಂಡು ಯಾವ ಗದ್ದೆ, ಬಯಲಿಗೆ ಹೋಗುವುದಿದೆ ಹೇಳಿ, ನಮಗೆ ಅದು ಆಗುವುದಿಲ್ಲ. ಬಯಲುಸೀಮೆಗೆ ಟ್ರ್ಯಾಕ್ಟರ್ ಬೇಕು, ನಿಮಗೆ power tiller ನಡೆಯುವುದಿಲ್ಲ, ನಮಗೆ power tiller ಬೇಕು. ಆಗ ನೀವು ಪವರ್ ಟಿಲ್ಲರ್ ಇಲ್ಲ, ಟ್ರ್ಯಾಕ್ಟರ್ ತೆಗೆದುಕೊಳ್ಳಿ ಎನ್ನುವುದು. ಅಂದರೆ ಸರ್ಕಾರದ ಇಲಾಖೆಗಳಲ್ಲಿ ಯಾವ ಭೂ ಪ್ರದೇಶದಲ್ಲಿ ರೈತರು ಯಾವ ಬೆಳೆ ಬೆಳೆಯುತ್ತಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಏನು ಕೊಡಬೇಕೆಂಬುದನ್ನು ನೋಡಬೇಕಲ್ಲಾ? ಸಾಮೂಹಿಕವಾಗಿ ಇಡೀ ರಾಜ್ಯಕ್ಕೆ ಒಂದೇ ಅಳತೆಗೋಲು ಇದೆ, ಇದರೊಳಗೆ

ಪರಿವರ್ತನೆ ಮಾಡಬೇಕು. ನಾವು ಈ ರೀತಿ ಅದಕ್ಕೆ focus ಮಾಡಿ, ಅದನ್ನು re-organize ಮಾಡಿ, ಎಲ್ಲೆಲ್ಲಿ ಏನೇನು ಬೇಕೋ ಅದನ್ನು ಮಾಡುವಂಥದ್ದಕ್ಕೆ ತನ್ನ ಇಚ್ಛಾಶಕ್ತಿಯನ್ನು ತೋರಿಸಬೇಕು. ನಾನು ಏಕೆ ಹೇಳುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಅವರ ಮೊದಲ ವಾಕ್ಯವೇ ನಾವು ರೈತರ ಪರವಾಗಿದ್ದೇವೆನ್ನುವ ರೀತಿಯಲ್ಲಿ "ಒಕ್ಕಲಿಗ ಒಕ್ಕದಿರೆ, ಬಿಕ್ಕುವುದು ಜಗವೆಲ್ಲಾ" ಎಂದು ಸರ್ವಜ್ಞ ವಚನವನ್ನು ಹೇಳಿ, ಅವರು ರೈತರ ಬಗ್ಗೆ ಅಪಾರವಾದ ಕಾಳಜಿ ಇರುವ ಬಗ್ಗೆ ಮುಂದಿನ ವಾಕ್ಯಗಳಲ್ಲೆಲ್ಲಾ ಹೇಳಿದ್ದಾರೆ. ಆದರೆ ಇದೆಲ್ಲವೂ ಬಜೆಟ್ ರೆಡಿ ಮಾಡುವವರ ಕಾಳಜಿಯಾಗಿದೆ, ಇದು ಸಾಹಿತ್ಯಿಕ ಕಾಳಜಿಯಾಗಿದೆಯೇ ಹೊರತು, ನಿಜವಾಗಿ ಸರ್ಕಾರದ ಕಾಳಜಿ, ಇಚ್ಛಾಶಕ್ತಿ ತೋರಿಸುವಂತೆ ಆಗಬೇಕಲ್ಲಾ ? ಇದೆಲ್ಲಾ ಬಜೆಟ್ ಪುಸ್ತಕ ಬರೆಯುವವರ ಕಾಳಜಿಯಾಗಿದೆ. ಇದು ಸರ್ಕಾರದ ಕಾಳಜಿ ಎಂದು ಆಗುವಾಗ ಈ ರೀತಿ ಜವಾಬ್ದಾರಿಯಿಂದ ಮಾನ್ಯ ಮುಖ್ಯಮಂತ್ರಿಯವರು ಯಾವ ಸ್ವದಿಚ್ಛೆಯನ್ನು ಬಜೆಟ್‌ನಲ್ಲಿ ತೋರಿಸಿದ್ದಾರೋ, ಅದಕ್ಕೆ ತಕ್ಕಂಥ ಪ್ರಯತ್ನಗಳು ಆಗಬೇಕು. ಅದು ಬಹಳ ಮುಖ್ಯವಾಗಿದೆ. ಈಗ ಯಾಂತ್ರೀಕರಣಗೊಳಿಸುವುದಕ್ಕೆ ಕೊಡುತ್ತಿರುವಂಥ ಹಣ ಏನೇನೂ ಸಾಕಾಗುವುದಿಲ್ಲ. ನಾವು ಡಾ : ನಂಜುಂಡಪ್ಪನವರ ವರದಿ ಆಧರಿಸಿ ಕೊಡುತ್ತಿರುವಂಥ ಆ ತಾಲ್ಲೂಕಿಗಳಿಗೂ ಈ ಹಣ ಸಾಕಾಗುವುದಿಲ್ಲ, ಮತ್ತೆ ಇಡೀ ರಾಜ್ಯದಲ್ಲೂ ಇದು ಸಾಕಾಗುವುದಿಲ್ಲ. ಕೃಷಿ ಕೂಲಿ ಕಾರ್ಮಿಕ ಅಭಾವ ದೊಡ್ಡ ಪ್ರಮಾಣದಲ್ಲಿದೆ, ಹಾಗಾಗಿ ಸಾಕಾಗುವುದಿಲ್ಲ. ಇನ್ನೊಂದು ಮಾತು ಹೇಳುವುದೇನೆಂದರೆ, ಇವತ್ತು ಅನೇಕ ಯುವಕರು ಅವರು ಕೃಷಿಗೆ ಸಂಬಂಧಪಟ್ಟಂಥ ಬೇರೆ ಬೇರೆ ಯಂತ್ರೋಪಕರಣಗಳನ್ನು ಸಂಶೋಧನೆ ಮಾಡುತ್ತಿದ್ದಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸುವುದಕ್ಕೆ ಇವರಿಗೆ ಪುರುಸೊತ್ತು ಇಲ್ಲ.

ಅಧ್ಯಕ್ಷರು : ಏನು ಬೇಕೆಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಏನು ಬೇಕೆಂದರೆ, ಅಂಥವರನ್ನು ಗುರುತಿಸಬೇಕು, ಅಂಥವರ್ನು ಕರೆಯಬೇಕು, ಅವರ ಜೊತೆಯಲ್ಲಿ ಮಾತನಾಡಬೆಕು. ಅವರು patent ಅದು ಇದು ಹೇಳುತ್ತಾರೆ, ಇನ್ನಾರೋ

ತೆಗೆದುಕೊಳ್ಳುತ್ತಾರೆ. ಅವರನ್ನು ಕರೆದು support ಮಾಡಬೇಕಲ್ಲಾ, ಆ ರೀತಿ ಪ್ರಯತ್ನಗಳು ಆಗಬೇಕು. ನಮ್ಮ ಯುವಕರು ಹೊಸ ಹೊಸ ಸಂಶೋಧನೆಗಳನ್ನು ಮಾಡಿದ್ದಾರೆ. ಅವರನ್ನು ಕರೆದು ಇಂತಿಂಥ ಯಂತ್ರೋಪಕರಣಗಳನ್ನು ಇಂತಿಂಥವರು ಮಾಡಿದ್ದಾರೆಂದು ಆದರೆ, ಅವರನ್ನು ಕರೆದು ಅವರೊಡನೆ ಮಾತನಾಡಿ, ಅದಕ್ಕೆ support ಮಾಡುವಂಥದ್ದನ್ನು ಮಾಡಬೇಕು. ಆ ರೀತಿಯಾಗಲಿಲ್ಲವೆಂದರೆ ಕೇವಲ ಈಗ ನಮ್ಮ ಒಡನಾಟದಲ್ಲಿರುವಂಥ, ಸಂಪರ್ಕದಲ್ಲಿವಂಥವರನ್ನು ಹೊರತು ಪಡಿಸಿ ಸರ್ಕಾರಿ ವ್ಯವಸ್ಥೆಯಿಂದ ಹೊರತು ಪಡಿಸಿ, ಹೊರಗಡೆ ಯಾರ್ಯಾರು ಏನೇನು ಮಾಡುತ್ತಿದ್ದಾರೋ ಅವರೆಲ್ಲರ ಅನುಭವವನ್ನು ಸರ್ಕಾರ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗೆ ತೆಗೆದುಕೊಳ್ಳುವಂತೆ ಆಗಬೇಕು. ಈಗ ಸರ್ಕಾರವೆಂದರೆ ಕೃಷಿ ಚಟುವಟಿಕೆಗಳಿಗೆ ಪೂರಕವಾದಂಥ ಕೆಲಸಗಳನ್ನು ಯಾರ್ಯಾರು ಮಾಡುತ್ತಾರೋ, ಅವರನ್ನೆಲ್ಲಾ ಪ್ರೋತ್ಸಾಹಿಸುವಂಥದ್ದು ಆಗಬೇಕೇ ಹೊರತು, ನಾವೇ ಎಲ್ಲವನ್ನು ಮಾಡುತ್ತೇವೆಂದು ಹೋಗುವುದು ಸರಿಯಲ್ಲ, ಅದು ಆಗುವುದಿಲ್ಲ. ಅದರ ಬಗ್ಗೆ ಯೋಚನೆ ಮಾಡಬೇಕು, ಯಾಂತ್ರೀಕರಣದ ವಿಷಯದಲ್ಲಿ ಸರ್ಕಾರ ವಿಶೇಷವಾಗಿ ಇನ್ನಷ್ಟು ಹಣವನ್ನು ಕೊಡಬೇಕು. ಅದು ತೋಟಗಾರಿಕೆ ಮತ್ತು ಕೃಷಿ ಇಲಾಖೆ ಈ ಎರಡೂ ಇಲಾಖೆಗಳಿಗೆ ಅನ್ವಯವಾಗುವಂಥದ್ದು. ಇದಕ್ಕೆ ಕೇಂದ್ರ ಸರ್ಕಾರದ ಹಣವೂ ಇದೆ, ಅದಕ್ಕಿಂತ ಹೆಚ್ಚಿಗೆ ರಾಜ್ಯ ಸರ್ಕಾರ ವಿಶೇಷವಾದಂಥ ಪ್ರಯತ್ನವನ್ನು ಯಾಂತ್ರೀಕರಣಗೊಳಿಸುವುದಕ್ಕೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ, ಇನ್ನು ಎರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಇನ್ನು ವಿಶ್ವವಿದ್ಯಾಲಯಗಳ ಬಗ್ಗೆ ಹೇಳುವುದಾದರೆ, ವಾರ್ಷಿಕ ವರದಿಗಳಲ್ಲಿ ವಿಶ್ವವಿದ್ಯಾಲಯಗಳು ಯಾವ್ಯಾವುದಿದೆ, ಹೇಗೆ ಕೆಲಸಗಳನ್ನು ಮಾಡುತ್ತಿವೆ ಎಂಬ ವಿವರಗಳನ್ನು ಕೊಟ್ಟಿದೆ. ನಮ್ಮ ಬೆಂಗಳೂರು, ರಾಯಚೂರು, ಧಾರವಾಡ, ಶಿವಮೊಗ್ಗದ ಕೃಷಿ ವಿಶ್ವವಿದ್ಯಾಲಯಗಳಿರಬಹುದು ಅಥವಾ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯವಿರಬಹುದು. ನಾನು ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯ ಮತ್ತು ರಾಯಚೂರು ವಿಶ್ವವಿದ್ಯಾಲಯಗಳ ಬಗ್ಗೆ ಏನೂ ಹೇಳುವುದಿಲ್ಲ. ಆದರೆ

ಉಳಿದ ಹಳೆಯ ವಿಶ್ವವಿದ್ಯಾಲಯಗಳು ಏನಿವೆ, ಆ ಬಗ್ಗೆ ಮಾನ್ಯ ಕೃಷಿ ಸಚಿವರು ಮಾತನಾಡುವಾಗ ಹೇಳಿರುವಂಥದ್ದು, ನಾವು ಆ ವಿಶ್ವವಿದ್ಯಾಲಯಗಳಿಗೆ ಎಷ್ಟು ಹಣವನ್ನು ಕೊಡುತ್ತೇವೆಯೋ, ಅದರಿಂದ ಮರು ಅನುಕೂಲ ರೈತ ಸಮುದಾಯಕ್ಕೆ ಏನಾಗಿದೆಯೆಂಬ ಬಗ್ಗೆ audit ಮಾಡಿಸಿ, ಅವರಿಗೆ ಜವಾಬ್ದಾರಿಯನ್ನು ನಿಶ್ಚಯ ಮಾಡಿ, ಅವರು ಕೇಳಿದಷ್ಟು ಹಣವನ್ನು ಕೊಡುತ್ತೇವೆ, ಆದರೆ ಅವರಿಂದ ಯಾವುದೇ ರೀತಿಯ ಸಂಶೋಧನೆಯ ಲಾಭ ರೈತ ಸಮುದಾಯಕ್ಕೆ ಆಗುತ್ತಿಲ್ಲ. ನಾವು ಈ ಮಾತನ್ನು ಬಹಳ ದುಃಖದಿಂದ, ಬೇಸರದಿಂದ ಹೇಳಬೇಕಾಗಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ವಿಜ್ಞಾನಿಗಳೆಂದು ಏನು ಇದ್ದಾರೆ, ಅವರ ಬಗ್ಗೆ ಒಂದು ರೀತಿಯ ಜಿಗುಪ್ಸೆ, ಹೇಸಿಗೆ ಬರುವ ಸ್ಥಿತಿ ನಿರ್ಮಾಣವಾಗಿದೆ. ವಿಜ್ಞಾನ ಇಷ್ಟು ಮುಂದುವರೆದಿದೆ, ನಮ್ಮ ಅಡಿಕೆ ಬೆಳೆ ಅದು ಶೃಂಗೇರಿ ಇರಲಿ, ಬೇರೆ ಬೇರೆ ಕಡೆಗಳಲ್ಲಿ ಇರಲಿ, ಈ ಬೆಳೆಗೆ ಹಳದಿ ರೋಗವೆಂದು ಬಂದಿದೆ. ಅಲ್ಲಿಗೆ ವಿಜ್ಞಾನಿಗಳ ತಂಡ ಎಂದು ಇವರು ಮಾಡಿ ಕಳುಹಿಸುತ್ತಾರೆ. ಆ ವಿಜ್ಞಾನಿಗಳು ಕೊಡುವ ಸಲಹೆಗಳಿಗೆ ನಮ್ಮ ರೈತರು ಇವರು ಎಂಥ ವಿಜ್ಞಾನಿಗಳೆಂದು ಹಾಸ್ಯಾಸ್ಪದ ಮಾಡುತ್ತಾರೆ. ಇಲ್ಲಿ ಅಡಿಕೆ ಬೆಳೆ ಬಗ್ಗೆ ಗೊತ್ತಿರುವವರೆಲ್ಲರಿಗೂ ಗೊತ್ತಿದೆ, ಅಡಿಕೆ ಬೆಳೆಗೆ ಹಸಿರು ಎಲೆ ರೋಗ ಬಂದು ಚಂಡೆ ಎಂದರೆ ತುದಿ ಎಲ್ಲಾ ಸಣ್ಣದಾಗಿ ಕಳಚಿ ಹೋಗುತ್ತಿದೆ. ಇಲ್ಲಿ ಇವರು ಕಳುಹಿಸಿದ ವಿಜ್ಞಾನಿಗಳ ತಂಡ ಹೋಗಿ ಅಲ್ಲಿ ಹೋಗಿ ಚಂಡೆ ಎಲ್ಲಾ ಕಳಚಿ ಹೋಗಿದ್ದರೆ ಕಟ್ ಮಾಡಿ, ಇನ್ನೊಂದು ಕಡೆ ಹೆಣೆ ಒಡೆಯುತ್ತದೆಂದು ಹೇಳುತ್ತಾರೆ.

ಅಧ್ಯಕ್ಷರು : ಯಾರು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ತೋಟಗಾರಿಕಾ ಇಲಾಖೆಯ ವಿಜ್ಞಾನಿಗಳು ಹೇಳುತ್ತಾರೆ. ಅವರು ಇಂಥ ವಿಜ್ಞಾನಿಗಳೆಂದು 20 ಉದಾಹರಣೆಗಳನ್ನು ಹೇಳಬಹುದು. ಇದನ್ನು ಕೇಳಿ ರೈತರು ನೀವು ಇಲ್ಲಿಂದ ಹೋಗುತ್ತೀರೊ ಇಲ್ಲವೋ ಎಂದು ಹೇಳಿದ್ದಾರೆ. ಅವರು ಅಡಿಕೆ ಮರವನ್ನು ಕಟ್ ಮಾಡಿದರೆ ಇನ್ನೊಂದು ಹೆಣೆ ಬರುತ್ತದೆಂದು ಅಂದುಕೊಂಡಿರುವ ವಿಜ್ಞಾನಿಗಳಿದ್ದಾರೆ. ಆ ಕ್ಷೇತ್ರದಲ್ಲಿ ಯಾರು ಕೆಲಸ ಮಾಡಿದ್ದಾರೆ, ಅವರನ್ನಾದರೂ ಅಲ್ಲಿಗೆ ಕಳುಹಿಸಿ, ಯಾರಿಗೆ ಅಡಿಕೆ ಮರದ ಬಗ್ಗೆ

ಗೊತ್ತಿಲ್ಲವೋ ಏಲಕ್ಕಿ ಎಂದರೆ ಅದು ಬುಡದಲ್ಲಿ ಬೆಳೆಯುತ್ತದೋ ತುದಿಯಲ್ಲಿ ಬೆಳೆಯುತ್ತದೋ ಎಂಬುದು ಗೊತ್ತಿಲ್ಲವೋ, ಕಾಳು ಮೆಣಸು ಎಂದರೆ ಅದು ಗಿಡವೋ ಬಳ್ಳಿಯೋ ಎಂಬುದು ಗೊತ್ತಿಲ್ಲವೋ, ಬಾಳೆ ಎಂದರೆ ಯಾವ್ಯಾವ ಬಾಳೆಗಳಿವೆಯೆಂಬುದು ಗೊತ್ತಿಲ್ಲವೋ ಅಂಥವರೆಲ್ಲಾ ವಿಜ್ಞಾನಿಗಳಾಗಿ ರೈತರ ಮಧ್ಯೆ ಬರುತ್ತಾರೆ. ಇಂಥ ವಿಜ್ಞಾನಿಗಳನ್ನು ರೈತರು ಬಹಳ ದಿವಸಗಳು ಸಹಿಸಿಕೊಂಡಿರುವುದಿಲ್ಲ. ಆದರೆ ಸರ್ಕಾರದಲ್ಲಿ ಏನು ಸಂಶೋಧನೆಗಳು ಆಗಬೇಕು, ಅದು ರೋಗಗಳ ಬಗ್ಗೆ ಸಂಶೋಧನೆ ಇಲ್ಲ, ಹೊಸ ತಳಿಗಳ ಬಗ್ಗೆ ಸಂಶೋಧನೆಗಳಿಲ್ಲ. ಇವರಿಗೆ ರೈತರಿಗೆ ಬೇಕಾದಂಥ ಪ್ರೋತ್ಸಾಹದಾಯಕವಾದಂಥ ಚಟುವಟಿಕೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಇವರು ವಿಜ್ಞಾನಿಗಳೆಂದು ಬೋರ್ಡ್‌ಗಳನ್ನು ಹಾಕಿಕೊಂಡು, ನಮ್ಮ ವಿಶ್ವವಿದ್ಯಾಲಯಗಳ ಮರ್ಯಾದೆಯನ್ನು ತೆಗೆಯುತ್ತಿದ್ದಾರೆ. ನಾನು ಕೃಷಿ ಮತ್ತು ತೋಟಗಾರಿಕೆಯ ವಿಶ್ವವಿದ್ಯಾಲಯಗಳ ಬಗ್ಗೆ ಹೇಳಬಯಸುವುದೇನೆಂದರೆ, ಇರುವಂಥ ವಿಶ್ವವಿದ್ಯಾಲಯಗಳು, ಅಲ್ಲಿರುವಂಥ ತಜ್ಞರು, ಅನುಭವಿಗಳು, ವಿಜ್ಞಾನಿಗಳು, ಡಾಕ್ಟರೇಟ್ ಅದು ಒಂದಲ್ಲ, ಎರಡಲ್ಲ, ಅವರೆಲ್ಲಾ ಮಾಡಿದಂಥ ವಿದೇಶಿ ಪ್ರವಾಸ, ಅಲ್ಲಿರುವಂಥ ಐ.ಎ.ಎಸ್. ಅಧಿಕಾರಿಗಳು ಮತ್ತು ವಿಜ್ಞಾನಿಗಳು ವಿದೇಶ ಪ್ರವಾಸ ಮಾಡಿದ್ದರ ಬಗ್ಗೆ ಮಾಧ್ಯಮದವರು ಸ್ವಲ್ಪ ಬೆಳಕು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಶಾಸಕರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ, ಹಾಗಾಗಿ ನಮ್ಮ ಅಧಿಕಾರಿಗಳು ವಿಜ್ಞಾನಿಗಳ ಬಗ್ಗೆ ಬೆಳಕು ಚೆಲ್ಲಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ವಿಜ್ಞಾನಿಗಳ ಬಗ್ಗೆ ಬಹಳ ಸಿಟ್ಟು ಬಂದಿದೆ, ಅಷ್ಟು generalize ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಅದನ್ನು ಮುಂದೆ ಹೇಳುತ್ತೇನೆ, exception ಇರುವವರು ಇದ್ದಾರೆ.

ಶ್ರೀ ಹೆಚ್.ಕೆ. ಪಾಟೀಲ್ : Exception ಅಲ್ಲ, ನಾನು ಹೇಳುತ್ತೇನೆ. ಕರ್ನಾಟಕದಲ್ಲಿ ಅದರಲ್ಲೂ Agriculture Scientist ಗಳು ಬಹಳ ದೊಡ್ಡ ಹೆಸರು ಮಾಡಿರುವಂಥದ್ದು, best of the cotton seeds ನಮ್ಮವರೇ ಕೊಟ್ಟಿರುವಂಥದ್ದು, Wheat seed ಕೊಟ್ಟವರೂ ನಾವೇ, ಅವರು ಅರಕೇರಿ ಇರಲಿ, ಕಾತರ್ಕಿ ಇರಲಿ,

ಕರ್ಜಗಿ ಇರಲಿ ಇವರೆಲ್ಲೂ ಬಹಳ ದೊಡ್ಡ ಹೆಸರು ಮಾಡಿದವರು ಮತ್ತೆ Sericulture ನಲ್ಲೂ ಕೂಡ ನಮ್ಮದೇನು ಸಣ್ಣ ಕೊಡುಗೆ ಅಲ್ಲ, ನಮ್ಮ ಕೃಷಿ ಕ್ಷೇತ್ರದ ವಿಜ್ಞಾನಿಗಳು ಯಾರಿದ್ದಾರೆ, ಅವರು ದೇಶದಲ್ಲೇ ಬಹುತೇಕ ಒಂದು ಅಥವಾ ಎರಡನೇ ಸಾಲಿನಲ್ಲಿದ್ದಾರೆ. ಅದಕ್ಕೆ ತಾವು generalize ಮಾಡಬೇಡಿ, specific ಆಗಿ ನಾಲ್ಕು ಜನರು ಕೆಟ್ಟವರು ಇದ್ದರೆ ಅವರ ಹೆಸರು ತೆಗೆದುಕೊಂಡೇ ಹೇಳಿ ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಹೇಳಿದಂಥ ಮಾತು ಯಾವತ್ತೂ ಸತ್ಯ, ಎಲ್ಲಾ ಕ್ಷೇತ್ರಗಳಲ್ಲೂ ತನ್ನನ್ನು ತಾನು ಆ ಕ್ಷೇತ್ರಕ್ಕೆ ತೊಡಗಿಸಕೊಂಡಿರುವಂಥವರು, ಒಳ್ಳೆಯ ಕೆಲಸವನ್ನು ಮಾಡುವವರು ಇದ್ದಾರೆ, ಅವರ ಬಗ್ಗೆ ಗೌರವ ಇದ್ದೇ ಇದೆ. ಆದರೆ ಯಾವ ಪ್ರಮಾಣದಲ್ಲಿ ಸರ್ಕಾರ ಅವರ ಮೇಲೆ ಖರ್ಚು ಮಾಡುತ್ತದೋ ಅದಕ್ಕೆ ತಕ್ಕಂತೆ ಪ್ರತಿಫಲವನ್ನು ನಿರೀಕ್ಷೆ ಅವರಿಂದ ಮಾಡುವುದಕ್ಕೆ ಆಗುತ್ತಿಲ್ಲ. ಅಲ್ಲಿ ಆ ರೀತಿಯಾದಂಥ efficiency ತೋರಿಸುತ್ತಿಲ್ಲ, ಅವರಿಗೆ accountability fix ಆಗಿಲ್ಲ, ಅದು ಆಗಬೇಕೆಂಬುದು ನನ್ನ ಕಾಳಜಿಯಾಗಿದೆ. ಅವರಲ್ಲಿ ಒಳ್ಳೆಯವರು ಯಾವತ್ತು ಇದ್ದಾರೆ, ನನ್ನ ಅನುಭವದಲ್ಲಿ ಅಂಥವರು ಸಾಕಷ್ಟು ಜನರಿದ್ದಾರೆ. ಅಂಥವರಿಗೆ ಸೂಕ್ತವಾದಂಥ ಅವಕಾಶ ಕಲ್ಪಿಸಬೇಕು, ಅವಕಾಶಗಳನ್ನು ಕೊಡಬೇಕು, ಅಂಥವರಿಂದ ಈ ಕ್ಷೇತ್ರಕ್ಕೆ ಇನ್ನಷ್ಟು ಗೌರವ ಬರುವಂತೆ ಆಗಬೇಕು. ಹಾಗಾಗಿ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ, ಸಾರಾಸಗಟಾಗಿ ಅಲ್ಲಿರುವಂಥ ಎಲ್ಲಾ ವಿಜ್ಞಾನಿಗಳ ಮೇಲೆ, ಅಧ್ಯಾಪಕರುಗಳ ಮೇಲೆ ಹೇಳುವುದಕ್ಕೆ ಬಯಸುವುದಿಲ್ಲ, exceptions ಇದ್ದೇ ಇದೆ, ಅವರ ಬಗ್ಗೆ ನನಗೂ ಗೌರವ ಇದ್ದೇ ಇದೆ, ಅವರ ಅನುಭವವನ್ನು ನಾನೂ ತೆಗೆದುಕೊಂಡಿದ್ದೇನೆ. ಆದರೆ ಬಹಳ ದೊಡ್ಡ ಪ್ರಮಾಣದಲ್ಲಿ ರೈತರಿಗೆ ಭ್ರಮನಿರಶನವನ್ನು ನಮ್ಮ ವಿಶ್ವವಿದ್ಯಾಲಯಗಳು ನಿರ್ಮಾಣ ಮಾಡಿವೆ.

ಅಧ್ಯಕ್ಷರು : ಅದಕ್ಕೆ ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅವರು ಸಂಶೋಧನೆಗಳನ್ನು ಮಾಡಲಿ, ಈ ರೋಗಗಳು ಬರುತ್ತಿವೆ. ನಾನು ಹೇಳಿಂದಂತೆ ಅಡಿಕೆ ಮರಗಳಿಗೆ ಕೊಳೆ ರೋಗ ಬರುವ ಬಗ್ಗೆ ತಮಗೂ ಗೊತ್ತಿದೆ. ನಾವು ನಮ್ಮ ಅಜ್ಜ, ಮುತ್ತಜ್ಜನ ಕಾಲದ

ಬೋಡೋ ಮಿಶ್ರಣದಲ್ಲಿಯೇ ಇದ್ದೇವೆ. ಇದಕ್ಕೆ ಬೇರೆ ಏನೂ ಕಂಡು ಹಿಡಿಯುವುದಕ್ಕೆ ಆಗುವುದಿಲ್ಲವೇ ? ಈಗ ಅದೇನೋ bio-fight ಎಂಬ ಔಷಧಿಯನ್ನು ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಬಂದಿದೆ. ಆದರೆ ನಾವು ಇನ್ನೂ ಬೋಡೋಮಿಶ್ರಣದಲ್ಲೇ ಇದ್ದೇವಲ್ಲಾ, ಅದನ್ನು ಹೊರತು ಪಡಿಸಿ, ಬೇರೆಯದಕ್ಕೆ ಏಕೆ ಹೋಗುವುದಕ್ಕೆ ಆಗುತ್ತಿಲ್ಲ ? ಈಗ ಮಾನ್ಯ ಕೃಷ್ಣಪ್ಪನವರು ತೆಂಗಿನ ಮರಗಳಿಗೆ ನುಸಿ ರೋಗ ಮತ್ತು ಚಂಡೆ ಕಳಚಿ ಬಿದ್ದಿರುವ ಬೆಂಕಿ ರೋಗದ ಬಗ್ಗೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಹೇಳುತ್ತಾರೆ. ಇದಕ್ಕೆ ವಿಜ್ಞಾನಿಗಳು ಏನು ಮಾಡುತ್ತಿದ್ದಾರೆ ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವಕ್ಕೆ ಯಾವ ರೋಗವೂ ಇಲ್ಲ. ತೆಂಗಿನ ಮರಗಳಿಗೆ ನೀರು ಇಲ್ಲದೇ ಕಳಚಿಕೊಂಡು ಬಿದ್ದಿರುವುದು, ಅದಕ್ಕೆ ನೀವು ರೋಗವೆಂದು ಹೇಳುವುದಕ್ಕೆ ಹೋಗಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಂತರ್ಜಲ ಹೆಚ್ಚು ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕು. ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಗಳು ನಮ್ಮ ವಿಜ್ಞಾನಿಗಳು ಯಾರು ವಿದ್ಯಾರ್ಥಿಗಳನ್ನು ಅಲ್ಲಿ ತಯಾರು ಮಾಡುತ್ತಿದ್ದಾರೆ, ಅವರ ಬಗ್ಗೆ ಇನ್ನಷ್ಟು ಹೆಚ್ಚು ಕಾಳಜಿಯಿಂದ ಈ ಕ್ಷೇತ್ರದಲ್ಲಿ ತಮ್ಮನ್ನು ತಾವು ಬದ್ಧತೆಯಿಂದ ತೊಡಗಿಸಿಕೊಳ್ಳುವಂಥ ಪ್ರಯತ್ನವನ್ನು ಅವರೆಲ್ಲರೂ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ವಿಶ್ವವಿದ್ಯಾನಿಯಗಳು ಇನ್ನೊಂದು Board, ನಿಗಮದ ರೀತಿಯಲ್ಲಿ ಆಗಬಾರದು. ನಮ್ಮದು Board, ನಿಗಮ ಎಲ್ಲ ಇದೆ. ಇಲ್ಲಿ ಹೇಗೇಗೆ ಇದೆ ಎನ್ನುವುದರ ಬಗ್ಗೆ ಇಲ್ಲಿ ವರದಿ ಇದೆ. ಅದು ಉದ್ದನೆಯ ವಿಷಯ ಇದೆ. ಇಲ್ಲಿ ಇರುವಂಥ ನಮ್ಮ Board, ನಿಗಮಗಳು ಏನೇನು ಆಗಿವೆ ಎಂದರೆ, ಯಾವುದೂ ಸಹ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ. ಬೀಜ ನಿಗಮ, ಬೀಜ ಪ್ರಮಾಣದ ಸಂಸ್ಥೆ, ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣ ಮತ್ತು ರಫ್ತು ನಿಗಮ, ತೊಗರಿ ಅಭಿವೃದ್ಧಿ ಮಂಡಳಿ, State Agro Corn Product, ಕೃಷಿ ಕೈಗಾರಿಕಾ ನಿಗಮ, Karnataka Compost ಅಭಿವೃದ್ಧಿ ನಿಗಮ, Tobacco Company, ಈ ರೀತಿ ಬೇರೆ ಬೇರೆ 8 ನಿಗಮ ಮಂಡಳಿಗಳಿವೆ. ಈ 8 ನಿಗಮ

ಮಂಡಳಿಗಳಲ್ಲಿ ಯಾವುದು ರೈತರಿಗೆ ಅನುಕೂಲಕರವಾಗಿದೆಯೋ ಅದನ್ನು ಇಟ್ಟುಕೊಳ್ಳಿ. ಬೇಡದೇ ಇರುವ ಯಾವ ಯಾವ ನಿಗಮ, ಮಂಡಳಿಗಳಿವೆ ಎನ್ನುವ ವರದಿ ನಮ್ಮ ಹತ್ತಿರ ಇದೆ. ಅಂಥವುಗಳನ್ನು ಮುಚ್ಚಿಹಾಕಿ. ಅವುಗಳನ್ನು Club ಮಾಡಿ. ಆ ಇಚ್ಛಾಶಕ್ತಿ ತೋರಿಸಬೇಕು. ಈ ಸರ್ಕಾರಕ್ಕೆ ಇಷ್ಟು ಅನುಭವವಿದೆ. ಕಾಂಗ್ರೆಸ್ ಸರ್ಕಾರಕ್ಕೆ ಅದರದೇ ಆದಂತಹ ಹಿನ್ನೆಲೆ, ಅನುಭವವಿದೆ. 50–60 ವರ್ಷಗಳ ಕಾಲ ಆಡಳಿತ ಮಾಡಿರುವಂಥ ಎಲ್ಲಾ ಅನುಭವ ನಿಮ್ಮ ಪಾರ್ಟಿಗೆ ಇದೆ, ನಿಮ್ಮಲ್ಲಿ ವೈಯಕ್ತಿಕವಾಗಿ ಅನೇಕರಿಗೆ ಅನುಭವವಿಲ್ಲದಿದ್ದರೂ ನಿಮ್ಮ ಪಾರ್ಟಿಗೆ ಅನುಭವವಿದೆ. ಇವರ ಅನುಭವದಿಂದ ಪರಿವರ್ತನೆಯ ಇಚ್ಛಾಶಕ್ತಿಯನ್ನು ತೋರಿಸಿ. ನೀವು ತೋರಿಸಿಲ್ಲವೆಂದರೆ, ಕೇಂದ್ರದಲ್ಲಿ ನಾವು ಹೇಗೆ ಆಡಳಿತಕ್ಕೆ ಬಂದಿದ್ದೇವೆ ಹಾಗೆಯೇ ಇಲ್ಲೂ ಕೂಡ ನಾವು ಬರುತ್ತೇವೆ. ನೀವು ಅದರ ಬಗ್ಗೆ ಏನು ಅನುಮಾನಪಟ್ಟುಕೊಳ್ಳಬೇಡಿ. ಇಲ್ಲಿಯೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಆ ರೀತಿಯ ಇಚ್ಛಾಶಕ್ತಿಯನ್ನು ನೀವು ಯಾವಾಗ ತೋರಿಸುವುದಿಲ್ಲವೋ ಆವಾಗ ನಾವೇ ಬಂದು ಅದೆಲ್ಲವನ್ನು ಮಾಡುತ್ತೇವೆನ್ನುವ ವಿಶ್ವಾಸ ನಮಗಿದೆ, ನಾವು ಮಾಡುತ್ತೇವೆ. ಆದರೆ ಈ ರೀತಿ Board, ನಿಗಮಗಳನ್ನು ಇಟ್ಟುಕೊಂಡು ಆರ್ಥಿಕವಾಗಿ ಭಾರ ಅನುಭವಿಸಿ ರೈತ ಸಮುದಾಯಕ್ಕೆ ಯಾವುದೇ ಅನುಕೂಲವಾಗದಿರುವ ಸ್ಥಿತಿ ಏನು ಮಾಡಿದ್ದಿದೆಯೋ ಇದು ನಿಜವಾಗಿಯೂ ಸರಿಯಲ್ಲ, ಇದರ ಬಗ್ಗೆ ಪುನರ್‌ವಿಮರ್ಶೆ ಆಗಬೇಕೆಂದು ಹೇಳುತ್ತಾ, ಈ ಸಾವಯವ ಕೃಷಿಗೆ ಸಾವಯವ ಕೃಷಿ ಮಿಷನ್ ಎಂದು ಮಾಡಿ ಅದಕ್ಕೆ ಹಣ ಕೊಟ್ಟು ಸಾಕಷ್ಟು ಕೆಲಸಕಾರ್ಯಗಳನ್ನು ನಾವು ಮಾಡಿದ್ದೆವು. ಆದರೆ ಸಾವಯವ ಕೃಷಿ ನಿಮ್ಮ ಸರ್ಕಾರದಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಪಡುತ್ತಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಸಾವಯವ ಗ್ರಾಮ ಎನ್ನುವ ಯೋಜನೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಗ್ರಾಮ ತೆಗೆದುಕೊಳ್ಳುವಂಥದ್ದು ಇದೆ. ಆದರೆ, ಸಾವಯವ ಕೃಷಿಗೆ ಒಟ್ಟಾರೆಯಾದಂಥ ಯಾವ ಪ್ರೋತ್ಸಾಹ ಕೊಡಬೇಕಿತ್ತೋ ಅದನ್ನು ಕೊಡಬೇಕು. ಸಾವಯವ ಕೃಷಿಗೆ ನಾವು ಪ್ರೋತ್ಸಾಹ ಕೊಟ್ಟಿಲ್ಲವೆಂದರೆ ರಾಸಾಯನಿಕ ಕೃಷಿಯ ಕಾರಣದಿಂದಾಗಿ ವೈಯಕ್ತಿಕ ಆರೋಗ್ಯ ಹಾಳು, ಪರಿಸರ ಹಾಳು, ನಿಸರ್ಗ ಹಾಳಾಗಿ ಕಲುಷಿತಗೊಂಡು ನಮ್ಮೆಲ್ಲರ ಜೀವನದ ಸ್ಥಿತಿಗತಿಗಳು ಹಾಳಾಗಿ ಯಾವ್ಯಾವುದೋ ರೋಗರುಜಿನಗಳಿಗೆ ನಾವು ತುತ್ತಾಗುತ್ತಿದ್ದು, ನಾವೆಲ್ಲರೂ

ಅನುಭವಿಸುತ್ತಿದ್ದೇವೆ. ಅದಕ್ಕೆ ಸಾವಯವ ಕೃಷಿ ಪದ್ಧತಿಯೇ ಪರಿಹಾರ. ರಾಸಾಯನಿಕ ಕೃಷಿಯನ್ನು ಬೆಳೆಸುವುದಕ್ಕೆ ನಾವು ಉತ್ತೇಜನವನ್ನು ಕೊಡಲೇಬಾರದು. ನಾವು ಅದಕ್ಕೆ ಎಲ್ಲೆಲ್ಲಿ Discourage ಮಾಡಬಹುದೋ ಅದೆಲ್ಲ ಕಡೆಯಲ್ಲೂ discourage ಮಾಡಬೇಕು. ಸಾವಯವ ಕೃಷಿಗೆ ಸರ್ಕಾರದ ಆದ್ಯತೆ ಬೇಕು. ನೀವು ಅದನ್ನು ನಿರ್ಲಕ್ಷ್ಯ ಮಾಡುತ್ತಿದ್ದೀರಿ. ಹಿಂದೆ ನಮ್ಮ ಸರ್ಕಾರದಲ್ಲಿ ಸಾವಯವ ಕೃಷಿ ಮಿಷನ್ ಎಂದು ಮಾಡಿ ಅದಕ್ಕೆ 100 ಕೋಟಿ ರೂಪಾಯಿಗಳನ್ನು ಇಟ್ಟು ಇಡೀ ರಾಜ್ಯದಲ್ಲಿ ಸಾವಯವ ಕೃಷಿಯ ಆಂದೋಲನವನ್ನೇ ನಾವು create ಮಾಡಿದ್ದೇವೆ. ರೈತರಲ್ಲಿ ಹೊಸ ಜಾಗೃತಿ ಮೂಡುವಂತೆ ಮಾಡಿದ್ದೆವು. ಆದರೆ, ಸಾವಯವ ಕೃಷಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದಂತೆ ತಮ್ಮ ಬಜೆಟ್‌ನಲ್ಲಿ ಕಂಡುಬರುತ್ತಿದೆ. ಹಾಗಾಗಿ ಸಾವಯವ ಕೃಷಿಗೆ ಸಹ ಅದರದೇ ಆದಂಥ ಪ್ರಾಮುಖ್ಯತೆ ಇರುವುದರಿಂದ ನೀವು ಮಹತ್ವವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾ, ಈ ಮಣ್ಣು ಪರೀಕ್ಷಾ ಕೇಂದ್ರಗಳ ಬಗ್ಗೆ ಸರ್ಕಾರ, ನೀವು ಇನ್ನಷ್ಟು ಹೆಚ್ಚು ಯೋಚನೆ ಮಾಡಬೇಕು, ನಮ್ಮ ಮಣ್ಣು ಪರೀಕ್ಷಾ ಕೇಂದ್ರಗಳಿಗೆ ಹೋದರೆ ಭಯಂಕರ ವೆಚ್ಚ ಅಂದರೆ costly ಬೀಳುತ್ತದೆ. Private ನವರು ಮಣ್ಣು ಪರೀಕ್ಷಾ ಕೇಂದ್ರಗಳನ್ನು ಅತ್ಯಂತ ಕಡಿಮೆ ದರದಲ್ಲಿ ಮಾಡಿ ತೋರಿಸಿಕೊಡುವುದನ್ನೂ ಸಹ ನಾವು ನೋಡುತ್ತಿದ್ದೇವೆ. ನೀವು ಇಂಥ ಕೆಲಸವನ್ನು ಖಾಸಗೀಕರಣಗೊಳಿಸದೇ ಇದ್ದರೆ, ಖಾಸಗಿಯವರ ಸಹಭಾಗಿತ್ವ ಇರುವಂತೆ ಇಲಾಖೆಗಳಲ್ಲಿ ನಾವು ಮಾಡದೇ ಹೋದರೆ, ಇಲಾಖೆಯವರ efficiency develop ಅಗುವುದಿಲ್ಲ, ಬೇರೆಯವರು ಬರುವುದಕ್ಕೆ ಇವರು ಬಿಡುವುದಿಲ್ಲ. ಈ ಇಲಾಖೆಯವರಿಗೆ efficiency ಇದೆಯೇ, ಇವರಿಗೆ ಒಳ್ಳೆಯ quality service ಕೊಡುವ delivery ಮಾಡುವಂಥ capacity ಇದೆಯೇ ? ಇದ್ದರೆ Ok ನನ್ನದೂ ಇದಕ್ಕೆ ಒಪ್ಪಿಗೆ ಇದೆ. ಆದರೆ, ಒಂದು ಕಡೆ ಸರಿಯಾದ service ಇಲ್ಲ, ಇನ್ನೊಂದು ಕಡೆಯಲ್ಲಿ efficiency ಇಲ್ಲ, ಅಲ್ಲಿಯ ವ್ಯವಸ್ಥೆಯೆಲ್ಲ ಶಿಥಿಲಾವಸ್ಥೆಯಲ್ಲಿರುವುದು ಕಾಣುತ್ತಿದ್ದರೂ ಸಹ ಬೇರೆಯವರಿಗೆ ಬರುವುದಕ್ಕೆ ಬಿಡುವುದಿಲ್ಲ. Private Participation ಗೆ ಅವಕಾಶ ಮಾಡಿಕೊಡಿ. ಅವರು ಯಾವ ರೀತಿಯಲ್ಲಿ ಬೇರೆ ಬೇರೆ ರೈತ ಸಮುದಾಯದ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬಹುದು, ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು

ಕೇಳಿಕೊಳ್ಳುತ್ತೇನೆ. ಖಾಸಗಿಯವರಿಗೆ ಆ ತರಹ ಪ್ರೋತ್ಸಾಹ ಕೊಡಿ. ಅದರ ಅರ್ಥ ಖಾಸಗಿಯವರ ಹಿಡಿತಕ್ಕೆ ಸರ್ಕಾರದ ವ್ಯವಸ್ಥೆ ಹೋಗಬೇಕೆಂದು ಅಲ್ಲ. ಸರ್ಕಾರ ನಾವು ನಿಯುಂತ್ರಿಸುವಂಥ ವ್ಯವಸ್ಥೆಗಳ ಮೇಲೆ ನಮ್ಮ ಹಿಡಿತವನ್ನು ಇಟ್ಟುಕೊಳ್ಳುವಂಥದ್ದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಬೇಕು. ಆದರೆ, ಈ inefficiency ಅನು ಹೋಗಲಾಡಿಸುವುದಕ್ಕೆ ಒಂದು system ಅನ್ನು, ಶಿಸ್ತನ್ನು develop ಮಾಡಿಕೊಂಡು ಹೋಗುವುದರಲ್ಲಿ, ಅದನ್ನು separate ಮಾಡಿಕೊಂಡು ಹೋಗುವುದರಲ್ಲಿ ಯಾವ ಅರ್ಥವೂ ಇಲ್ಲ. Secretariat ಸೇರಿದಂತೆ ಕೃಷಿ ತೋಟಗಾರಿಕೆ ಇಂಥ ಇಲಾಖೆಯಲ್ಲಿ ಯಾರ್‍ಯಾರು ಇದ್ದಾರೆ, ಅಂದರೆ ಯಾವುದೇ ರೈತ ಸಮುದಾಯದ ಜೊತೆಯಲ್ಲಿ ಒಡನಾಟ ಸಂಪರ್ಕಕ್ಕೆ ಬರುವಂಥ ಇಲಾಖೆಗಳು ಇವೆಯೋ ಅವರಿಗೆ 10 ವರ್ಷದಲ್ಲಿ 2 ವರ್ಷವಾದರೂ field training ಗೆ ಕಳುಹಿಸಬೇಕು. ಈ Secretariat ನಲ್ಲಿಯೇ ಅಧಿಕಾರಿಗಳು service ಪೂರ್ತಿ ಇದ್ದು, ಸರ್ಕಾರ ಏನು ಕಾಯಿದೆ ಮಾಡುತ್ತದೆ ಅದಕ್ಕೆ GO ಹೊರಡಿಸುವಾಗ Secretariat ನವರಿಗೆ ತಲೆ, ಕಾಲು, ಕೈ, ಬುಡ ಗೊತ್ತಿರುವುದಿಲ್ಲ. ಈಗ ತೆಂಗಿನ ಮರ ಕಡಿದ ಉದಾಹರಣೆ ಒಬ್ಬರು ಹೇಳಿದರಲ್ಲ. ಇದೇ ರೀತಿ ಯಾವುದೇ ವ್ಯವಹಾರಿಕವಾದ ದೃಷ್ಟಿಕೋನವೇ ಇಲ್ಲದಿರುವಂಥ ಸರ್ಕಾರಿ ಆದೇಶಗಳು ಈ Secretariat ನಿಂದ ಹೊರಡುತ್ತದೆ. Secretariat ನಿಂದ ಏಕೆ ಇಂಥ ಆದೇಶಗಳು ಹೊರಡುತ್ತವೆ ಅಂದರೆ ಅವರಿಗೆ ಅನುಭವವೇ ಇಲ್ಲ, ಅವರಿಗೆ field experience ಇಲ್ಲ. ಅವರನ್ನು ಕಳುಹಿಸಿ, ಅವರು ಎರಡೆರಡು ವರ್ಷ field ಹೋಗಿ ಅಲ್ಲಿ ಕೆಲಸ ಮಾಡಲಿ. Field ನಲ್ಲಿ ಏನು ಕಷ್ಟಸುಖ ಇದೆ ಎಂದು ನೋಡಿಕೊಂಡು ಬರಲಿ. ಅವರಿಗೆ field experience ಆಗಿಲ್ಲವೆಂದರೆ ಇಲ್ಲಿ ಬರೇ AC Chamber ನಲ್ಲಿ ಕುಳಿತುಕೊಂಡು ಸುಮ್ಮನೇ ಕೊಕ್ಕೆ ಹಾಕಿಕೊಂಡು ಬರೆದುಕೊಂಡು ಕುಳಿತುಕೊಳ್ಳುತ್ತಾರೆ. ಯಾವುದೇ ಸರ್ಕಾರವಿರಲಿ, ಅದು ಯಾರಿಗೂ ಶೋಭೆ ತರುವಂಥದ್ದು ಆಗುವುದಿಲ್ಲ. ನಮ್ಮ ರೈತ ಸಮುದಾಯದ ಯಾವ ಕಷ್ಟವನ್ನು ಬಗೆಹರಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಹಾಗಾಗಿ ಖಾಸಗಿಯವರ ಸಹಭಾಗಿತ್ವ ರೈತ ಸಮುದಾಯದ ಮಧ್ಯೆ ಇನ್ನಷ್ಟು ಹೆಚ್ಚಾಗುವಂತೆ ನಾವು ನೋಡಿಕೊಳ್ಳಬೇಕು. ಏಕೆಂದರೆ ಅಂತಿಮವಾಗಿ ನಾವೆಲ್ಲರೂ ಹೇಳುತ್ತೇವೆ.

ರೈತರ ಮೂಲಕವೇ ಈ ಎಲ್ಲಾ ವ್ಯವಸ್ಥೆಗಳು ನಮಗೆ ಶಕ್ತಿ ಕೊಟ್ಟಿರುವುದು ಎಂದು. ಇದನ್ನು ನಾವು ಸಹಕಾರ ಮಾಡಿ ತೋರಿಸುವಾಗ ಮತ್ತು ಗ್ರಾಮೀಣ ಭಾಗದ ಜನರಿಗೆ ತಮ್ಮ ಕೃಷಿ ಚಟುವಟಿಕೆಯಲ್ಲಿ, ಗ್ರಾಮೀಣ ಭಾಗದಲ್ಲಿ ನಾನು ಜೀವನ ಮಾಡಬಹುದೆಂದು ಆತ್ಮವಿಶ್ವಾಸ ಬರಬೇಕು. ಶಹರಕ್ಕೆ ವಲಸೆ ಹೋಗುವಂಥ ದುಸ್ಥಿತಿ ಕಡಿಮೆ ಆಗಬೇಕು. ಶಹರಕ್ಕೆ ಏಕೆ ವಲಸೆ ಹೋಗುತ್ತಿದ್ದಾರೆ ? ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆಯಲ್ಲಿ ನಮಗೆ ವಿಶ್ವಾಸದ ಕೊರತೆ ಇವತ್ತು ಆಗಿದೆ. ಅಲ್ಲಿ ಆತ್ಮವಿಶ್ವಾಸ ಮೂಡಿಸುವಂಥ ಪ್ರಯತ್ನ ಆಗಬೇಕು. ಕೃಷಿ ಲಾಭದಾಯಕವಾದ ಒಂದು ಉದ್ದಿಮೆ ಎಂದಾಗಬೇಕು. ಹಾಗೆ ಆಗುವಂಥ ಸ್ಥಿತಿಯನ್ನು ತರುವುದಕ್ಕೆ ಬೇಕಾದಂಥ ಅನೇಕ ಮೂಲಭೂತ ಚಟುವಟಿಕೆಗಳನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಕೃಷಿ ಸಚಿವರು ಈ ಕಡೆ ಗಮನಹರಿಸಬೇಕು. ಈಗ ಮಾನ್ಯ ಕಾಗೇರಿಯವರು ಹೇಳುತ್ತಿರುವುದನ್ನು ನಾವೆಲ್ಲ ಕೇಳಿಸಿಕೊಳ್ಳುತ್ತಿದ್ದೇವೆ. ನನಗನ್ನಿಸುವುದೇನೆಂದರೆ, ಈ ಸದನಕ್ಕೆ ಮಾನ್ಯ ಕೃಷಿ ಸಚಿವರಾದ ತಾವು ಒಂದು ಮಾಹಿತಿಯನ್ನು ಕೊಡಬೇಕೆಂದು ಸಭಾಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಾವಯವ ಕೃಷಿ Mission ಬಗ್ಗೆ ಕಾಗೇರಿಯವರು ಪ್ರಸ್ತಾಪ ಮಾಡಿದ್ದಾರೆ ಮತ್ತು ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ಎಂದು ಕೂಡ ಮಾಡಿದ್ದಾರೆ. Global Agriculture Investors Meet ಎಂದು ಮಾಡಿದ್ದಾರೆ. ಈ ಎರಡರಿಂದಲೂ ಕೂಡ ಏನಾದರೂ ನಮಗೆ ಅನುಕೂಲವಾಗಿದೆಯೇ ? ಎಷ್ಟು ಬಂಡವಾಳ ಹೂಡಿತ್ತು ? ಆದರಿಂದ ಏನು ಪ್ರಯೋಜನವಾಯಿತು ? ಎನ್ನುವುದನ್ನೂ ಕೂಡ ಈಗ ಅವರ ಕಾಲದಲ್ಲಿ ಮಾಡಿದ್ದರ ಬಗ್ಗೆ ನೀವು ಒಂದು ಮಾಹಿತಿಯನ್ನು ಕೊಟ್ಟರೆ ಅಂಥ ಯೋಜನೆಯನ್ನು ಮುಂದುವರಿಸಬೇಕೆ ? ಬಿಡಬೇಕೇ ? ಎನ್ನುವುದರ ಬಗ್ಗೆಯೂ ಒಂದು ಸಲ ಚರ್ಚೆಯಾದರೆ ಒಳ್ಳೆಯದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ಹೇಳಿರುವ ವಿಷಯವನ್ನು ನಾನೂ ಒಪ್ಪುತ್ತೇನೆ. ನೀವು ಸರ್ಕಾರದ ಜೊತೆ ಏನು ಬಯಸಿದ್ದೀರೋ ಅವರು ನಿಮಗೆ ಏನು

ಕೊಡುತ್ತಾರೋ ಅದರ ಬಗ್ಗೆ ರಾಜ್ಯದ ಜನತೆ ಹೇಳುತ್ತಾರೆ. ಆದರೆ, ಪ್ರಾರಂಭವಾಗಿ ಒಂದೆರಡು ವರ್ಷಕ್ಕೆ result card ಕೇಳಿದರೆ ಅದು ಏನಾಗುತ್ತದೆ ? ನೀವು ಯಾವ ದೃಷ್ಟಿಕೋನದಲ್ಲಿ ಏಕೆ ಕೇಳಿದ್ದೀರಿ ಎಂದು ಅದು ನಮಗೆ ಗೊತ್ತಿದೆ. ಈಗ ಅದನ್ನು ಈ ಸರ್ಕಾರವೂ ಮುಂದುವರಿಸದಿದ್ದರೆ report card ಕೇಳುವುದರಲ್ಲಿ ಅರ್ಥವಿರುತ್ತಿತ್ತು. ಗೊಬ್ಬರ ಹಾಕಿಯೋ, ಸಾವಯವ ಕೃಷಿ ಮಾಡಿಯೋ ಕೇಳಿದ್ದರೆ ಅದರಲ್ಲಿ ಅರ್ಥವಿರುತ್ತಿತ್ತು.

ಅಧ್ಯಕ್ಷರು : ನಿಮ್ಮ ಸಾವಯವ ಕೃಷಿ ಮಿಷನ್‌ನ ಅಧ್ಯಕ್ಷರೇ ನಮ್ಮ ಊರಿನ ಪಕ್ಕದವರು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ : Global Investors Meet ಮಾಡಿ ಒಂದೇ ವರ್ಷಕ್ಕೆ ಅಷ್ಟು ಸಾವಿರ ಕೋಟಿ ರೂಪಾಯಿ ಬಂತು, ಇಷ್ಟು ಸಾವಿರ ಕೋಟಿ ರೂಪಾಯಿ ಬಂತು ಎಂದು ಹೇಳಿದ್ದರಲ್ಲ. ಎಷ್ಟು ಬಂತು, ಏನು ಬಂತು ಎನ್ನುವ ಮಾಹಿತಿಯನ್ನಾದರೂ ಕೊಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರಿಂದ ಏನೇನು ಬೇಕೋ ಎಲ್ಲ ಮಾಹಿತಿಯನ್ನು ತರಿಸಿಕೊಳ್ಳಲಿ, ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು, : ಆಯಿತು, ತಾವು ತಮ್ಮ ಚರ್ಚೆಯನ್ನು ಪೂರೈಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ 2 ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಬಯಸುತ್ತೇನೆ. ತೋಟಗಾರಿಕೆ ಇಲಾಖೆಗೆ ಹಿರಿಯ ಸಚಿವರಿದ್ದಾರೆ. ಆದರೆ, ತೋಟಗಾರಿಕೆ ಇಲಾಖೆ ಹೇಗೆ ಸೊರಗಿಹೋಗುತ್ತಿದೆ ಎಂದರೆ, ನಮ್ಮ ಸರ್ಕಾರವಿದ್ದಾಗ 'ಗುಚ್ಛಗ್ರಾಮ' ಎಂದು ಒಳ್ಳೆಯ concept ಇಟ್ಟುಕೊಂಡು ಮಾಡಿರುವ ಯೋಜನೆಯಾಗಿದೆ. ಆ ಗುಚ್ಛಗ್ರಾಮವನ್ನು ಹೆಚ್ಚಿಸಿ. ಗುಚ್ಛಗ್ರಾಮವೆಂದರೆ cluster ಎಂದು ಹೇಳಬಹುದು. ಅದರಲ್ಲಿ ಒಂದೊಂದು ಗ್ರಾಮವನ್ನು ಅದರಲ್ಲಿ 100 ಹೆಕ್ಟೇರ್ ಪ್ರದೇಶವಿರಬೇಕು ಇತ್ಯಾದಿ ಎಲ್ಲ ಇದೆ. ಅಷ್ಟೊ ರೈತರನ್ನು ಸೇರಿಸಿ ಆ ಪ್ರದೇಶದಲ್ಲಿ ಯಾವ ತೋಟಗಾರಿಕೆ ಬೆಳೆ ಬೆಳೆಯುತ್ತದೆಯೋ

ಆ ಬೆಳೆಯನ್ನು ಪ್ರೋತ್ಸಾಹಿಸುವುದಕ್ಕೆ 3 ವರ್ಷದ ಒಂದು ಯೋಜನೆಯಾಗಿದೆ. ಕೆಲವು ಕಡೆ ಕೋಕೋ ಬೆಳೆಯುತ್ತಾರೆ. ಕೆಲವು ಕಡೆ ಕಾಳುಮೆಣಸು ಬೆಳೆಯುತ್ತಾರೆ, ಕೆಲವು ಕಡೆ ಶುಂಠಿ ಬೆಳೆಯುತ್ತಾರೆ, ಕೆಲವು ಕಡೆ ಅರಿಶಿಣ ಬೆಳೆಯುತ್ತಾರೆ, ಏಲಕ್ಕಿ ಬೆಳೆಯುತ್ತಾರೆ ಅಥವಾ ಬಾಳೆ ಬೆಳೆಯುತ್ತಾರೆ. ಈಗ ವೆನಿಲಾವನ್ನಾಂತೂ ಯಾರೂ ಬೆಳೆಯುವವರಿಲ್ಲ. ಈ ರೀತಿ ಬೇರೆ ಬೇರೆ ಬೆಳೆಗಳನ್ನು ಗುರುತಿಸಿ ಪ್ರೋತ್ಸಾಹಿಸಿ ಆ ಬೆಳೆಗೆ ಹೆಚ್ಚಿನ ಆದ್ಯತೆ ಸಿಗುವಂತೆ ಮಾಡುವಂಥ ಒಂದು ಯೋಜನೆಯಾಗಿದೆ. ಅದನ್ನು ಜಾಸ್ತಿ ಮಾಡಬೇಕು. ಆ ಗುಚ್ಛಗ್ರಾಮ ಕಲ್ಪನೆ ಒಳ್ಳೆಯ ಕಲ್ಪನೆ. ಸಾವಯವ ಗ್ರಾಮ ಎಂದು ಕೃಷಿ ಇಲಾಖೆಯಲ್ಲಿ ಇದೆ. ಅದಕ್ಕೆ ಸಾವಯವ ಭಾಗ್ಯ ಎಂದು ಏನೋ ಹೆಸರಿಟ್ಟಿಕೊಂಡಿದ್ದಾರೆ. ಅದನ್ನೂ ಹೆಚ್ಚು ಮಾಡಬೇಕು, ಈ ಗುಚ್ಛಗ್ರಾಮಗಳ ಸಂಖ್ಯೆಯನ್ನೂ ಹೆಚ್ಚು ಮಾಡಬೇಕು. ನಿಜವಾಗಿ ರೈತರಿಗೆ ಅನುಕೂಲವಾಗುತ್ತಿದೆ. ಅನುಕೂಲವಾಗುವಂಥ ಕೆಲಸ ಯಾವುದಿದೆಯೋ ಅದರ feed back ತೆಗೆದುಕೊಂಡು ಅಂಥ ಕಾರ್ಯಕ್ರಮಗಳನ್ನು ಹೆಚ್ಚು ಮಾಡಬೇಕು. ಇನ್ನೊಂದು National Horticulture Mission Programme ಎಂದು ಏನಿದೆ, ಇದರಲ್ಲಿ ಈ ವರ್ಷ guideline ಎಲ್ಲ Change ಆಗಿ subsidy ಯಲ್ಲಿ ಸಾಕಷ್ಟು variations ಆಗುತ್ತಿದೆ. ಮೈಲುತುತ್ತಗೆ NHMP ಯಲ್ಲಿ 50% subsidy ಇದುವರೆಗೆ ಇತ್ತು ಈಗ ಅದನ್ನು 30% subsidy ಎಂದು ಮಾಡಿದ್ದಾರೆ. ಈಗ ಕೇಂದ್ರ ಸರ್ಕಾರ ಮಾಡಿದೆ ಎಂದು ನಮಗೆ ಹೇಳುತ್ತಿದ್ದಾರೆ. ಆದರೆ, ರಾಜ್ಯ ಸರ್ಕಾರ ಈಗ ರಾಜ್ಯವಲಯದಿಂದ ಏನು ನೀವು ಜಿಲ್ಲಾ ಪಂಚಾಯತ್‌ಗಳಿಗೆ ಹಣ ಕೊಡುತ್ತಿರೋ ಅದು ಕೂಡ ಕಡಿಮೆಯಾಗಿದೆ. ಈಗ ಒಂದು ತಾಲ್ಲೂಕಿಗೆ, 50–60 ಸಾವಿರ ರೂಪಾಯಿ ಸಹ ಬರುವುದಿಲ್ಲ. ತೋಟಗಾರಿಕೆ ಇಲಾಖೆಯಲ್ಲಿ ಈ ಮೈಲುತುತ್ತವನ್ನು ತೆಗೆದುಕೊಳ್ಳುವುದಕ್ಕೆ ಒಂದು ತಾಲ್ಲೂಕಿಗೆ 50–60 ಸಾವಿರ ರೂಪಾಯಿಯಷ್ಟು ಸಹ ಇಲ್ಲ. ಇಷ್ಟು ಕಡಿಮೆ ಹಣದಿಂದ ಯಾವ ರೈತರ ಕಷ್ಟಕ್ಕೆ ಏನು ಸ್ಪಂದಿಸುವುದಕ್ಕೆ ಆಗುತ್ತದೆ ? ನಮ್ಮಲ್ಲಿ ಮಳೆ ಹೆಚ್ಚಾದರೂ ಒಂದು ರೋಗ, ಮಳೆ ಕಡಿಮೆಯಾದರೂ ಒಂದು ರೋಗ ಬರುತ್ತದೆ. ರೈತರು ಯಾವತ್ತೂ ಸಹ ಪ್ರಕೃತಿಯ ಜೊತೆಯಲ್ಲಿ ಒಂದಾಗಿರುವಂಥವರು. ಪ್ರಕೃತಿಯ ಏರುಪೇರಿನಿಂದಾಗುವ ತೊಂದರೆ ಎಲ್ಲಾ ರೈತರಿಗೂ ನೇರವಾಗಿ ತಟ್ಟುತ್ತದೆ. ಪ್ರಕೃತಿಯ ಜೊತೆಯಲ್ಲಿ ಒಂದಾಗಿ

ಹೋಗುವಂಥವರಿಗೆ ಪ್ರಕೃತಿಯ ಎಲ್ಲ ಸಂಗತಿಗಳೂ ನಮಗೆ ನೇರವಾಗಿ ತಟ್ಟುತ್ತದೆ. ಅದಕ್ಕೆ ಸ್ಪಂದನೆ ಇರಬೇಕು. ಹಾಗಾಗಿ ಮೈಲುತುತ್ತಗೆ ಇರುವ NHMP ಯಿಂದ ಸಿಗುವ subsidy 30% ಆಗಿದೆ. Quantity ಅನ್ನು ಆ ಅಧಿಕಾರಿಗಳು ಬರೆದುಕೊಡುತ್ತಾರೆ. ಒಂದು ಹೆಕ್ಟೇರ್‌ಗೆ ಇಷ್ಟು ಬೇಕೆಂದು immediate ಆಗಿ ಬರೆದುಕೊಡುತ್ತಾರೆ. ಅದು ಅವರ ರೂಢಿ ನಾವು ಒಂದು ಹೆಕ್ಟೇರ್‌ಗೆ ಮೊದಲು ಒಂದು ಸಾವಿರ ರೂ. ಮಾತ್ರ ಕೊಡುತ್ತಿದ್ದೆವು, ಈಗ ಒಂದು ಹೆಕ್ಟೇರ್‌ಗೆ 1200 ರೂ. ಕೊಡುತ್ತೇವೆಂದು ಅವರು ಬರೆದುಕೊಂಡಿರುತ್ತಾರೆ. ಅಂದರೆ ಮೊದಲಿಗಿಂತ ಹೆಚ್ಚಾಗಿದೆ ಎಂದು. ಆದರೆ, overall ಕಡಿಮೆಯಾಗಿರುವಂಥ 50% ಬದಲು 30% subsidy ಬರುತ್ತದೆ. ಈ ರೀತಿ ರೈತ ಸಮುದಾಯಕ್ಕೆ ಸಿಗುತ್ತಿರುವಂತಹ ಸವಲತ್ತುಗಳಲ್ಲಿ ಈ ರೀತಿಯ ಕೊರತೆ ಏನಾಗುತ್ತಿದೆ, ಕಡಿತ ಏನಾಗುತ್ತಿದೆ, ? ಇದು ನಿಲ್ಲಬೇಕು. ಅವರಿಗೆ ಆತ್ಮವಿಶ್ವಾಸ ಹೆಚ್ಚಬೇಕು. ಗ್ರಾಮೀಣ ಪ್ರದೇಶದಲ್ಲಿರಬೇಕೆಂದು ನಾವು ಹೇಳುವುದರ ಜೊತೆಗೆ ಈ ರೀತಿ ಅವರಿಗೆ ಕೊಡುತ್ತಿರುವ ಸೌಲಭ್ಯಗಳನ್ನು cut ಮಾಡಿದರೆ ಮತ್ತೆ ಏಕೆ ಅಲ್ಲಿ ಇರುವುದು ? ಎನ್ನುವ ಭಾವನೆ ಬರುತ್ತದೆ. ಹಾಗಾಗಿ subsidy ಏನು ಕೊಡುತ್ತಿದ್ದೇವೆ ? ಅದು ಕೊನೆಯಪಕ್ಷ ಅಷ್ಟಾದರೂ ಇರಬೇಕು. ಹಾಗಾಗಿ ಅದನ್ನೆಲ್ಲ ಮುಂದುವರಿಸಬೇಕು ಮತ್ತು NHMP ನಂಥ ಯೋಜನೆಗಳನ್ನು ರಾಜ್ಯ ಸರ್ಕಾರದಲ್ಲಿ ನಾವು ಆದ್ಯತೆಯಿಂದ ಬೇರೆ ಬೇರೆ ರೀತಿಯಲ್ಲಿ ತೆಗೆದುಕೊಳ್ಳಬೇಕು. ನಮ್ಮ ತೋಟಗಾರಿಕಾ ಇಲಾಖೆಗಳಲ್ಲಿ ಅನೇಕ ರಾಜ್ಯವಲಯದ್ದು ಮತ್ತು ಜಿಲ್ಲಾ ವಲಯದಲ್ಲಿ horticulture farms ಇವೆ. ನಮ್ಮ ಊರುಗಳಲ್ಲಿ 70 ಎಕರೆ, 80 ಎಕರೆ, 100 ಎಕರೆ horticulture farms ಇದೆ. ಇದು ಮಾನ್ಯ ತೋಟಗಾರಿಕಾ ಸಚಿವರಿಗೆ ಗೊತ್ತಿದೆ. State Sector ನಲ್ಲಿ ಬೇರೆ ಇದೆ, District Sector ನಲ್ಲಿ ಬೇರೆ ಇದೆ. ಅವೆಲ್ಲ ಹಾಳುಬಿದ್ದಿದೆ, ಮುಳ್ಳುಮಟ್ಟಿಗಳು ಬೆಳೆದಿವೆ. ತೋಟಗಾರಿಕಾ ಇಲಾಖೆಯವರು ರಾಜ್ಯವಲಯದ್ದು ಆಗಲಿ, ಜಿಲ್ಲಾ ವಲಯದ್ದು ಆಗಲಿ ಯಾವುದಾದರೂ ಒಂದು horticulture farm ಚೆನ್ನಾಗಿದೆ ಎಂದು ಎದೆತಟ್ಟಿ ಹೇಳಲಿ ನೋಡೋಣ. ಕೃಷಿ ಇಲಾಖೆಯಲ್ಲಿ ಸಹ ಅದೇ ರೀತಿಯ ಸಣ್ಣಪುಟ್ಟ ಬೇರೆ ಬೇರೆ farm ಗಳಿವೆ. ಅದರ maintenance ಗೆ ಬೇಕಾಗುವ ಖರ್ಚನ್ನೂ ಸಹ ಅಲ್ಲಿ ಉತ್ಪಾದನೆ ಮಾಡುವುದಿಲ್ಲ.

ತೋಟಗಾರಿಕಾ ಇಲಾಖೆಯ State and District sector farm ಗಳಲ್ಲಿ ಮುಳ್ಳುಮಟ್ಟಿ ಬೆಳೆದು ಹಂದಿಗಳು, ಕಾಡುಪ್ರಾಣಿಗಳು ವಾಸ ಮಾಡುವ ಸ್ಥಳವಾಗಿದೆ. ಅದನ್ನು ನಮ್ಮ ಸರ್ಕಾರವಿದ್ದಾಗ privatization ಮಾಡಬೇಕೆಂದು ಹೊರಟಾಗ ಪರ–ವಿರೋಧ ಬಂತು. ಆದರೆ, ಯಾವುದಾದರೂ ಒಂದು ರೀತಿಯಲ್ಲಿ ಉದ್ಧಾರ ಮಾಡುವುದಕ್ಕೆ ಮುಂದಾಗಬೇಕು. ನಮ್ಮಲ್ಲಿ ಅಷ್ಟು ಫಲವತ್ತಾದ ಭೂಮಿ ಇದೆ. ಅದೂ ಕೂಡಿ city ಯ ಹತ್ತಿರದಲ್ಲಿದೆ. ಆ ಭೂಮಿ ಈಗ ಅತಿಕ್ರಮಣವಾಗುತ್ತಿದೆ. ಆ ಭೂಮಿಯಲ್ಲಿ ಪ್ರಾಯೋಗಿಕವಾಗಿ ಚಟುವಟಿಕೆಗೆ ತೆಗೆದುಕೊಳ್ಳಬಹುದು ಅಥವಾ ಅದರಲ್ಲಿ ಉತ್ಪನ್ನ ಹೆಚ್ಚು ಮಾಡುವುದಕ್ಕೆ ಬೇಕಾದಂಥ ಪ್ರಯತ್ನ ಮಾಡಬಹುದು. ಅಲ್ಲಿ State Sector Farm ಇದ್ದು, ಅದು 70 ಎಕರೆ ವಿಸ್ತಾರದಲ್ಲಿದ್ದು ಅಲ್ಲಿ ಒಬ್ಬನೇ ವ್ಯಕ್ತಿ ನೋಡಿಕೊಳ್ಳುತ್ತಿದ್ದಾನೆ. ಅವನು ಈ ಕಡೆಗೆ ಇದ್ದಾಗ ಆಚೆಕಡೆ ಬೇಲಿ ಕೀಳುತ್ತಾರೆ. ಅವನು ಆಚೆಕಡೆ ಇದ್ದಾಗ ಅತಿಕ್ರಮಣದಾರರು ಈಚೆಕಡೆ ಬೇಲಿ ಕೀಳುತ್ತಾರೆ. ಅತಿಕ್ರಮಣ ಮಾಡಿ ಈ farms ಎಲ್ಲಾ ಈಗ ಹೋಗುತ್ತಿದೆ. ಅದಕ್ಕೆ ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ. ಅವರ ಸಂಬಳ ಅವರವರೇ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ, ಅದೆಲ್ಲಾ ಆಗುವುದಿಲ್ಲ. ಆದ್ದರಿಂದ ಈ ರೀತಿಯ farms ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಏನಿವೆ, ಇವು ಬಹಳ ತೊಂದರೆಯಲ್ಲಿವೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ Diploma College ಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಅದರ strength ಹೆಚ್ಚು ಮಾಡಿ. ಅದರೊಳಗೆ intake strength ಜಾಸ್ತಿ ಮಾಡಿ ಮತ್ತು ಆ ರೀತಿಯ course ಗಳನ್ನು ದಯವಿಟ್ಟು ಹೆಚ್ಚು ಮಾಡಿ. ತೋಟಗಾರಿಕಾ ಕೃಷಿ ಪದವೀಧರರು ಹೆಚ್ಚಾಗುವುದಕ್ಕೆ ಬೇಕಾದಂಥ ಪ್ರಯತ್ನಗಳು ಆಗಬೇಕು. ಅದಕ್ಕೆ Diploma, ಬೇರೆ ಬೇರೆ course ಗಳು ನಿಮ್ಮದೇ ಆದಂಥ area ಗಳಲ್ಲಿವೆ. ಅದನ್ನು ಜಾಸ್ತಿ ಮಾಡಿದರೆ definite ಆಗಿ ಒಳ್ಳೆಯ ಯುವಕರು ಅದರ ಆಸಕ್ತಿಯನ್ನು ಪಡೆದುಕೊಂಡು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅದರೊಳಗೆ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಸಾಕಷ್ಟು ವಿಷಯಗಳು ಇದ್ದರೂ ಸಹ ಸಮಯದ ಅಭಾವವಿರುವುದರಿಂದ ಹೆಚ್ಚೇನು ಮಾತನಾಡಲಿಕ್ಕೆ ಬಯಸದೇ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮತ್ತು

ರೈತರಿಗೆ ಸಂಬಂಧಪಟ್ಟಂಥ ಇಲಾಖೆಗಳು ಸಮನ್ವಯತೆಯನ್ನು ಸಾಧಿಸಬೇಕು. ಅನಗತ್ಯ ವೆಚ್ಚಗಳನ್ನು ಕಡಿವಾಣ ಹಾಕಬೇಕು. ರೈತರಿಗೆ ಹೆಚ್ಚು ಅನುಕೂಲವಾಗುವಂಥ ಯೋಜನೆಗಳನ್ನು ಮಾಡಬೇಕೆಂದು ಮತ್ತೊಮ್ಮೆ ಆಗ್ರಹಿಸುತ್ತೇನೆ. ಸರ್ಕಾರ ನಿಜವಾದ ಇಚ್ಛಾಶಕ್ತಿಯನ್ನು ಇಂಥ ವಿಷಯದಲ್ಲಿ ತೋರಿಸಬೇಕು. ನಾವು 10 ಸಾವಿರ ರೂ. ಮನ್ನಾ ಮಾಡಿದ್ದೇವೆ, 25 ಸಾವಿರ ರೂ. ಮನ್ನಾ ಮಾಡಿದ್ದೇವೆ, ರೈತರಿಗೆ ಕಷ್ಟವಿದ್ದಾಗ ನಾವು ಏನೇನು ಸಹಾಯ ಮಾಡಬಹುದು ಈ ರೀತಿ ಬಹಳ ಯೋಜನೆಯನ್ನು ಮಾಡಿದ್ದೇವೆ. ಪ್ರತ್ಯೇಕ ಬಜೆಟ್ ಅನ್ನೇ ಕೊಟ್ಟು ಹೇಗೆ ರೈತ ಸಮುದಾಯಕ್ಕೆ ನಮ್ಮ ಆದ್ಯತೆ ಇದೆ ಎನ್ನುವುದನ್ನು ತೋರಿಸಿಕೊಟ್ಟಿದ್ದೇವೆ. ಆದರೆ ಇವರು ಬಜೆಟ್‌ನಲ್ಲಿ ತೋರಿಸುವುದು ಬೇಡ. ನಮ್ಮಂತೆ ಇವರಿಗೆ ನಂಬಿಕೆ ಇಲ್ಲ, ಇವರಿಗೆ ಬೇರೆ ನಂಬಿಕೆ ಇರುವಂಥ ಸರ್ಕಾರ. ಹಾಗಾಗಿ ನಿಮ್ಮ ನಂಬಿಕೆಗೆ ತಕ್ಕಂತೆ, ರೈತರು ನಮ್ಮ ನಿಮ್ಮ ಎಲ್ಲ ಒಟ್ಟಾದಂಥ ನಂಬಿಕೆಯವರೇ, ಹೀಗಾಗಿ ನೀವು ನಿಮ್ಮ ಇಚ್ಛಾಶಕ್ತಿಯನ್ನು ತೋರಿಸಿ, ಇನ್ನಷ್ಟು ಹೆಚ್ಚು ಅನುದಾನ ಕೊಡಿ. ಕೇವಲ 10% ಹಣ ಬಜೆಟ್‌ನಲ್ಲಿ ಕೊಟ್ಟಿದ್ದೀರಿ. ಕೇವಲ 6500 ಕೋಟಿ ರೂ. ಯೋಜನಾ ವೆಚ್ಚದಲ್ಲಿ ನೀವು ಕೊಟ್ಟಿರುವಂಥದ್ದು. ಅದು ಸಾಲುವುದಿಲ್ಲ. ಇನ್ನಷ್ಟು ಹೆಚ್ಚು ಹಣವನ್ನು ಕೊಡಿ. ಅಲ್ಲಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿ, ವಿಶ್ವವಿದ್ಯಾಲಯಗಳು perform ಮಾಡುವಂತೆ ಮಾಡಿ, ಖಾಸಗಿ ಸಹಭಾಗಿತ್ವದಲ್ಲಿ ಸಹಾಯಕ್ಕೆ ಬರುವಂತೆ ಮಾಡಿ, ನಿಮ್ಮ ಇಚ್ಛಾಶಕ್ತಿಯನ್ನು ರೈತರಿಗೆ ಈ ಮೂಲಕ ತೋರಿಸಿ. ಎಲ್ಲಾ ಬೆಳೆಗಳಿಗೂ ಕಷ್ಟವಿದೆ. ಯಾವುದೇ ಬೆಳೆಯನ್ನು ಬೆಳೆಯುವವರಿಗೂ ಕಷ್ಟವಿದೆ. ಅವರಿಗೆಲ್ಲ ವೈಜ್ಞಾನಿಕ ಬೆಲೆ ಸಿಗುವಂತೆ ಬೇಕಾದಂಥ ಬೆಳೆ ಆಯೋಗ ಇತ್ಯಾದಿ ರಚನೆ ಮಾಡಿದ್ದೀರಿ, ಅವೆಲ್ಲವೂ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಿ ಎಂದು ಕೇಳಿಕೊಳ್ಳುತ್ತಾ, ಇಷ್ಟು ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಅವಕಾಶ ನೀಡಿದ್ದಕ್ಕಾಗಿ ತಮಗೆ ವಂದಿಸುತ್ತಾ, 'ಕೃಷಿಕೋ ನಾಸ್ತಿ ದುರ್ಭಿಕ್ಷಂ' ಎನ್ನುವ ಗಾದೆ ಮಾತು ಇದೆ. ಸ್ವಾತಂತ್ರ್ಯ ನಂತರ ಎಷ್ಟು ಜನರು ಕೃಷಿಯಿಂದ ವಂಚಿತರಾಗಿದ್ದಾರೆನ್ನುವಂಥ ಅಂಕಿ ಅಂಶಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಕೃಷಿಯಿಂದ ಏಕೆ ವಂಚಿತರಾದರು ?

ಕೃಷಿ ನಿಜವಾಗಿಯೂ ಅವರಿಗೆ ಲಾಭದಾಯಕವಾಗಿದ್ದರೆ ಯಾರೂ ಸಹ ಕೃಷಿ ಬಿಟ್ಟು ಆಚೆಗೆ ಬರುತ್ತಿರಲಿಲ್ಲ. ಕೃಷಿಯಿಂದ ವಂಚಿತರಾಗುವುದಕ್ಕೆ ಪ್ರಮುಖವಾದ ಕಾರಣ ಏನು ? ಮೊದಲನೆಯದು, ಆರ್ಥಿಕವಾದ ಸಂಕಷ್ಟ, ಇನ್ನೊಂದು ಸಾಮಾಜಿಕವಾಗಿ ಇರತಕ್ಕಂಥ ಗೌರವ ಇಲ್ಲದೇ ಇರುವುದು. ಆರ್ಥಿಕ ಸಂಕಷ್ಟ ಎದುರಿಸುವುದಕ್ಕೆ ನಾವು ಪರಿಹಾರವನ್ನು ರೂಪಿಸಲಿಲ್ಲ, ಕೃಷಿ ಮಾಡುವವನಿಗೆ ಸಾಮಾಜಿಕವಾಗಿ ಕೂಡ ಸಮಾಜದಲ್ಲಿ ಗೌರವ ಇದೆ ಎನ್ನುವ ಕಾಲ ಇವತ್ತಿಲ್ಲ. ಸಮಾಜದಲ್ಲಿ ಗೌರವ ಸಿಕ್ಕಿಬಿಡುತ್ತದೆ, ಕೃಷಿ ಮಾಡುತ್ತಿದ್ದಾನೆಂದರೆ ಮನ್ನಣೆ ಸಿಗುತ್ತದೆ ಎನ್ನುವ ಸ್ಥಿತಿಯೂ ಇಲ್ಲ. ಹಾಗಿದ್ದರೆ, ಮೊದಲು ಅವನನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕು. ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕೆನ್ನುವುದಕ್ಕೆ ಸರ್ಕಾರದ ಯೋಜನೆಗಳೇನು ? ಏನು ಯೋಜನೆ ಹಾಕಿಕೊಳ್ಳಲಾಗಿದೆ ? ಬೆಳೆ, ಮಾರುಕಟ್ಟೆ ಮತ್ತು ಬೆಳೆ ಇದರ ನಡುವಿನ ಅಂತರವನ್ನು ಕಾಪಾಡಿಕೊಳ್ಳುವುದಕ್ಕೆ, ಉತ್ಪಾದಕ ವೆಚ್ಚ ಜಾಸ್ತಿಯಾಗಿದೆ. ಬೆಲೆ ಯಾವತ್ತೂ ಕೂಡ ಒಂದು ರೀತಿ ಜೂಜಾಟ ಇದ್ದಹಾಗೆ. ಜೂಜಾಟದಲ್ಲಾದರೂ ಯಾವಾಗಲಾದರೂ ಒಂದು ಸಲ ನಿರ್ದಿಷ್ಟವಾಗಿ ಲಾಟರಿ ಹೊಡೆದುಬಿಡಬಹುದು. ಈಗ ಆ ಪರಿಸ್ಥಿತಿ ಇಲ್ಲ. ಜೂಜಾಟದಲ್ಲಿರುವಂಥ ಸ್ಥಿತಿ ಮಾರುಕಟ್ಟೆಗೆ ತನ್ನನ್ನು ತಾನು ಒಗ್ಗಿಕೊಂಡಿರುವ ಪರಿಸ್ಥಿತಿ ಇದೆ. ಹಾಗಿದ್ದಾಗ ಅವನಿಗೆ ಕೃಷಿ ವೈಜ್ಞಾನಿಕ ಬೆಲೆ ಅಲ್ಲ ಲಾಭಾದಾಯಕ ಬೆಲೆ ಕೊಡುವುದಕ್ಕೆ ನಮ್ಮ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಬೇಕು. ಅದಕ್ಕೆ ನಮ್ಮ ಕೃಷಿ ಸಚಿವರು ಇರಬಹುದು, ಕೃಷಿ ಇಲಾಖೆ ಇರಬಹುದು ಏನು ಯೋಜನೆ ಮಾಡಿದೆ ? ಬೆಳೆ ಮತ್ತು ಬೆಲೆ ಬಗ್ಗೆ ನಾವು ಸರಿಯಾದ ವ್ಯವಸ್ಥೆ ಮಾಡದಿದ್ದರೆ ರೈತನನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವುದಕ್ಕೆ ಹೇಗೆ ಸಾಧ್ಯ ? ನಾವು ಇನ್ನೇನೂ ಮಾಡುವುದು ಬೇಡ. ಕೃಷಿ ಕಡೆಗೆ ಆಕರ್ಷಣೆ ಮಾಡುವುದಕ್ಕೆ ಯಾವ subsidy scheme ಗಳೂ ಬೇಡ. ಒಳ್ಳೆಯ ಬೆಲೆ ಕೊಡುತ್ತೇವೆಯೇ, ಲಾಭಾದಾಯಕ ಬೆಲೆ ಕೊಡುತ್ತೇವೆಯೇ, ಹಾಗಿದ್ದರೆ ಅವನು ಕೃಷಿ ಕಡೆಗೆ ತಾನಾಗಿಯೇ ಬರುತ್ತಾನೆ. ಲಾಭಾದಾಯಕ ಬೆಲೆ ಸಿಕ್ಕಿ ಅವನೇ ದೊಡ್ಡ ದೊಡ್ಡ ಕಾರಿನಲ್ಲಿ ಓಡಾಡುವ ಹಾಗೆ ಆದರೆ social respect ತಾನಾಗಿಯೇ ಬರುತ್ತದೆ. ಸಾಮಾಜಿಕ ಗೌರವವೂ ಅವನ ಹಿಂದುಗಡೆಯೇ ಬಂದುಬಿಡುತ್ತದೆ. ಅದನ್ನು ಕೊಡುವುದಕ್ಕಿರುವಂಥ ನೀತಿ ಏನು ? ನಮಗೆ ಇವತ್ತು

ಆತಂಕ ಆಗುತ್ತಿರುವುದು ಏನೆಂದರೆ, ಕೃಷಿಕರು ಕೃಷಿ ಮೇಲಿನ ನಂಬಿಕೆ ಕಳೆದುಕೊಂಡು ಅವರು ಅಲ್ಲಿಂದ ಹೊರಬಂದು ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ. ಯಾರು ಜಮೀನ್ದಾರ ಇದ್ದ, ಸಣ್ಣ ಸಣ್ಣ ಭೂಹಿಡುವಳಿ ಇಟ್ಟುಕೊಂಡಿದ್ದ, ಅವನು ಕಾರ್ಮಿಕ ಆಗಿ ಬದಲಾಗುತ್ತಿದ್ದಾನೆ. ಇಲ್ಲೆಲ್ಲೋ ಬಂದು ಕೊಳೆಗೇರಿಯಲ್ಲಿ ಜೀವನ ಕಟ್ಟಿಕೊಳ್ಳುವಂಥ ದುಸ್ಥಿತಿಗೆ ಅವನು ಬಂದು ಒಂದು ರೀತಿಯಲ್ಲಿ ಕೊಳೆಗೇರಿಗಳು ಹೆಚ್ಚಾಗುವುದಕ್ಕೆ 90% ಗ್ರಾಮವನ್ನು ತೊರೆದು ಬಂದಂಥ ರೈತರೇ, ಆಗಿದ್ದು, ಬೆಂಗಳೂರಿನಲ್ಲಿ ಕೊಳೆಗೇರಿಗಳು ಜಾಸ್ತಿಯಾಗುವುದಕ್ಕೆ ಇವರೇ ಕಾರಣರಾದವರು. ಏಕೆಂದರೆ, ಅಲ್ಲಿ ಗ್ರಾಮವನ್ನು ತೊರೆದು ಇಲ್ಲಿಗೆ ಬಂದು ಇಲ್ಲಿ ಕೊಳೆಗೇರಿಯಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಇದಕ್ಕಿರುವ ಪರಿಹಾರವೇನು ? ಇದಕ್ಕೇನಾದರೂ ಒಂದು ಯೋಜನೆ ಮಾಡಬೇಕಲ್ಲವೇ ? ಇಲ್ಲದಿದ್ದರೆ, ಕಾಗೇರಿಯವರು ಹೇಳಿದ ಹಾಗೆ ಸರ್ಕಾರದ ಯೋಜನೆಗಳು ಅಂಕಿಅಂಶದ ಯೋಜನೆಗಳು ಆಗುತ್ತವೆಯೇ ಹೊರತು ರೈತರನ್ನು ಮೇಲೆತ್ತಕ್ಕಂಥ ಯೋಜನೆಗಾಗಿ ಪರಿವರ್ತನೆಯಾಗುವುದಿಲ್ಲ. ಇನ್ನು ಬೆಳೆ ನೀತಿ ನಮ್ಮ ಹತ್ತಿರ ಇಲ್ಲ. ಬಯಲು ಸೀಮೆಯಲ್ಲಿ ಅಡಿಕೆ ಬೆಳೆಯಬೇಕೆಂದು ಬೆಳೆ ಹಾಕುತ್ತಾರೆ. ಅವರು borewell ಕೊರೆದು 4 ಇಂಚು ನೀರು ಬಂತು ಎಂದು ಅಡಿಕೆ ಬೆಳೆ ಹಾಕಿ ಬೆಳೆ ಬರುವ ಕಾಲಕ್ಕೆ borewell ಬತ್ತಿ ಹೋಗುತ್ತದೆ, ಅವರು ಮಾಡಿರುವ ಸಾಲ ತಲೆಮೇಲೆ ಬಂದಿರುತ್ತದೆ, ಸಾಯುವುದು ಬಿಟ್ಟರೆ ಬೇರೆ ದಾರಿ ಏನು ಇರುವುದಿಲ್ಲ. ಬೆಲೆ ನೀತಿ ನಿಯಂತ್ರಣ ತರದೇ ಇದ್ದರೆ ಯಾರನ್ನೂ ಬದುಕಿಸುವುದಕ್ಕೆ ಆಗದಿರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಜೀರ್ ಸಾಬ್ ರವರು borewell ಕ್ರಾಂತಿ ತಂದಾಗ ಖಾಸಗಿಯಾಗಿ ಮಾತನಾಡುತ್ತಾ ಒಂದು ಮಾತು ಹೇಳಿದ್ದರಂತೆ. ರವೀಂದ್ರ ರೇಷ್ಮೆಯವರು ಯಾವಾಗಲೋ ಒಂದು ಸಾರಿ ಹೇಳುತ್ತಿದ್ದರು, ಒಮ್ಮೆ ನಜೀರ್‌ಸಾಬ್‌ರವರು ಆಸ್ಪತ್ರೆಯಲ್ಲಿದ್ದಾಗ ಅವರನ್ನು ಭೇಟಿ ಮಾಡಲು ಹೋದರಂತೆ. ಆಗಷ್ಟೇ borewell ಕ್ರಾಂತಿಯನ್ನು ತಂದು ಕುಡಿಯುವ ನೀರು 'ನೀರ್‌ಸಾಬ್' ಎಂದೇ ಖ್ಯಾತಿಯಾಗಿದ್ದರು. ಅವರು ಒಂದು ಮಾತು ಹೇಳಿದರಂತೆ, ನೋಡಿ, borewell ಎನ್ನುವಂಥ ಒಂದು technology ಅನ್ನು ನಾವು ತಂದುಬಿಟ್ಟಿದ್ದೇವೆ, ಆದರೆ, ನನಗೊಂದು ಆಪಾಯ ಕಾಡುತ್ತಿದೆ, ಆ ಆಪಾಯ ಏನೆಂದರೆ, ಇದನ್ನು ನಿಯಂತ್ರಿಸದಿದ್ದರೆ, ಸಾಮೂಹಿಕ

ಕುಡಿಯುವ ನೀರಿನ ಯೋಜನೆಗಳಿಗೆ ಮಾತ್ರ ಎಂದು ನಾವು ಮಾಡದಿದ್ದರೆ ಇದೇ ತಾಂತ್ರಿಕತೆ ನಮಗೆ ಮುಂದೆ ಮುಳುವಾಗುತ್ತದೆ. ಅಂತರ್ಜಲ ಎನ್ನುವ ಅಮೂಲ್ಯವಾದ ನಿಧಿ ಅಂತರ್ಜಲದ ದುರುಪಯೋಗವಾಗುತ್ತದೆ ಎನ್ನುವ ಮಾತನ್ನು ಅವರು 1984ರಲ್ಲಿ ಹೇಳಿದ್ದರಂತೆ.

ನಾವು ಯಾರೂ ಅವರ ಮಾತನ್ನು ಕಿವಿಗೊಟ್ಟು ಕೇಳಲಿಲ್ಲ. ಇವತ್ತು 1000 ಅಡಿ ಬೋರ್‌ವೆಲ್ ಕೊರೆದರೂ ನೀರಿಲ್ಲ. ಕುಡಿಯುವ ನೀರಿಗೂ ನೀರಿಲ್ಲ. ಹಾಗಾಗಿ ನಾವು ಕೃಷಿ ನೀತಿಯಲ್ಲಿ ವಲಯವಾರು ಬೆಳೆ ನೀತಿಯನ್ನು ತರಬೇಕಾದಂತಹ ಅವಶ್ಯಕತೆ ಇದೆ. ವಲಯವಾರು ಬೆಳೆ ನೀತಿ ತರದಿದ್ದರೆ ಎಲ್ಲರೂ ಎಲ್ಲಾ ಬೆಳೆ ಬೆಳೆಯುವುದಕ್ಕೆ ಪ್ರಾರಂಭಿಸಿ ಕೈಸುಟ್ಟುಕೊಂಡು ಇವತ್ತು ಲಾಭ ಆಯಿತೆಂದು ಅದಕ್ಕೆ ಎಲ್ಲರೂ ಕೈಹಾಕಿ ಕೈಸುಟ್ಟುಕೊಂಡು ಎಲ್ಲೂ ಯಾರೂ ಬೆಳೆ ಬೆಳೆಯಲಾರದಂಥ ಸ್ಥಿತಿ ನಿರ್ಮಾಣವಾಗುತ್ತದೆ. ಅಂತರ್‌ಜಲ ಸಂಪೂರ್ಣ ನಾಶವಾಗುತ್ತದೆ. ಈಗಾಗಲೇ ನಾಶವಾಗಿದೆ. ಅದರ ದೃಷ್ಟಿಯಿಂದ ವಲಯವಾರು ಬೆಳೆ ನೀತಿಯನ್ನೂ ಕೂಡ ನಾವು forcibly implement ಮಾಡಬೇಕು. ನಾವು ಏಕೆ ನಿಷ್ಠೂರವಾಗಬೇಕೆನ್ನುವ ಸ್ಥಿತಿ ನಿರ್ಮಾಣವಾದರೆ ಎಲ್ಲರೂ ನಷ್ಟಕ್ಕೆ ಒಳಗಾಗುತ್ತೇವೆ. ಹಾಗಾಗಿ ವಲಯವಾರು ಯಾವ್ಯಾವ ಪ್ರದೇಶದಲ್ಲಿ ಯಾವ ಬೆಳೆ ಬೆಳೆಯಬೇಕೆನ್ನುವುದನ್ನು ಗುರುತಿಸಬೇಕು, ಗುರುತಿಸಿ compulsory forcibly implement ಮಾಡುವಂಥದ್ದು ಆಗಬೇಕು. ಹೆಚ್ಚು ವಿಷಯವನ್ನು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮಗೆ ಶಿಕ್ಷಣದಲ್ಲಿಯೇ ನೆಲಜಲದ ಬಗ್ಗೆ ತಿಳಿವಳಿಕೆ ಮೂಡಿಸುವಂಥ ವ್ಯವಸ್ಥೆ ತರಬೇಕು. ನಾವೆಲ್ಲ ಓದಬೇಕಾದರೆ ಅವಳು ಕಮಲ, ಇವನು ಬಸವ, ಕಮಲಳ ಲಂಗ ಝುಳ ಝುಳ ಎಂದು ನಮ್ಮ ಪುಸ್ತಕದಲ್ಲಿ ಇತ್ತು. ಅದರಿಂದ ಏನು ಕಲಿತೆ ಎಂದು ನನಗೆ ಗೊತ್ತಿಲ್ಲ. ಕಮಲಳ ಲಂಗ ಝುಳ ಝುಳ ಎಂದು ಅವತ್ತು ಬರೆಯಬೇಕಿತ್ತು. ಅದರ ಬದಲಿಗೆ ನೆಲಜಲದ ಬಗ್ಗೆ High School ಮಟ್ಟದಲ್ಲಿ ಈ ಮಣ್ಣಿನ ಗುಣ ಏನು ? ಆ ಪ್ರದೇಶದಲ್ಲಿರುವಂಥ ಮಣ್ಣಿನಲ್ಲಿ ಯಾವ ಬೆಳೆಯನ್ನು ನಾವು ಪ್ರಕೃತಿಗೆ ಪೂರಕವಾಗಿ ಬೆಳೆಯಬಹುದು ? ನೆಲದ, ಜಲದ ಬಗ್ಗೆ ಹೇಗೆ ಮಾಡಬಹುದು ಎನ್ನುವುದನ್ನು ತಿಳಿಸಿಕೊಟ್ಟರೆ ಪ್ರತಿಯೊಬ್ಬರಿಗೆ ಅರ್ಥವಾಗುತ್ತದೆ. ಯಾರೋ ಒಬ್ಬ ಕೃಷಿ ವಿಜ್ಞಾನಿ ಮಾತ್ರ ತಿಳಿದುಕೊಳ್ಳಬೇಕಾದಂಥ subject ಅಲ್ಲ. ಎಲ್ಲಾ ಸಾಮಾನ್ಯ

ಜನರಿಗೂ ಪರಿಸರದ ಬಗ್ಗೆ, ನೆಲದ ಬಗ್ಗೆ, ಜಲದ ಬಗ್ಗೆ ತಿಳಿವಳಿಕೆ ಇರಬೇಕು. ಹಾಗಾಗಿ ಈ ಕೃಷಿ ನೀತಿಯ ಜೊತೆಗೆ ಪ್ರಾಥಮಿಕ ಪ್ರೌಢ ಶಿಕ್ಷಣ ವ್ಯವಸ್ಥೆಯಲ್ಲಿಯೇ ಆ ಪ್ರದೇಶದ ಮಾಹಿತಿಯನ್ನು ಕೊಡತಕ್ಕಂಥ, ಪರಿಸರದ ಮಾಹಿತಿ ಕೊಡುವಂಥ, ನೆಲದ ಮಾಹಿತಿ ಕೊಡುವಂಥ ಒಂದು ವ್ಯವಸ್ಥೆ ಆಗಬೇಕು. ಇಲ್ಲದಿದ್ದರೆ ಎತ್ತು ಏರಿಗೆ, ಕೋಣ ನೀರಿಗೆ ಎನ್ನುವ ಗಾದೆಯಂತೆ ಇವರಿಗೂ ಅವರಿಗೂ ಸಂಬಂಧವೇ ಇಲ್ಲ. ಹಾಗೆ ಆಗದಂತೆ ನೋಡಿಕೊಳ್ಳುವುದಕ್ಕೆ ಏನಾದರೊಂದು ಯೋಚನೆ ಮಾಡಬೇಕು. ಇನ್ನು APMC ಮಾರುಕಟ್ಟೆಗಳಿವೆ. APMC ಮಾರುಕಟ್ಟೆಗಳು ಅದು ದಳ್ಳಾಳಿ ಕೇಂದ್ರಿತ ಮಾರುಕಟ್ಟೆಗಳಾಗಿವೆ. ದಳ್ಳಾಳಿಗಳನ್ನು ನಿಯಂತ್ರಣ ಮಾಡುತ್ತೇವೆಂದು ಎಷ್ಟೇ ಹೇಳಿದರೂ ಕೂಡ ಸರ್ಕಾರವನ್ನೂ ಸಹ ನಿಯಂತ್ರಿಸುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡಿರುವವರು ದಳ್ಳಾಳಿಗಳೇ. ಅವರಿಂದ ರೈತರಿಗೆ ಅನುಕೂಲವಾಗುತ್ತದೆಯೇ ಎಂದರೆ ಇಲ್ಲ. ಗ್ರಾಹಕರಿಗೆ ಲಾಭ ಇದೆಯೇ, ಕಡಿಮೆ ಬೆಲೆಗೆ ಸಿಗುತ್ತದೆಯೇ ಎಂದರೆ ಎಲ್ಲ. ಗ್ರಾಹಕರನ್ನೂ ಶೋಷಣೆ ಮಾಡುತ್ತಾರೆ, ರೈತರನ್ನು ಶೋಷಣೆ ಮಾಡುತ್ತಾರೆ. ನಮ್ಮ APMC ಯನ್ನು ನಿಜವಾಗಿಯೂ ಕೂಡ ರೈತ ಮತ್ತು ಗ್ರಾಹಕರ ಕೊಂಡಿಯನ್ನಾಗಿ ಮಾಡುವುದಕ್ಕೆ ನಮ್ಮ ಯೋಚನೆಗಳು, ಯೋಜನೆಗಳು ಏನಿವೆ ? ಈಗ ರೈತ ಮತ್ತು ದಳ್ಳಾಳಿಗಳ ಕೊಂಡಿ, ದಳ್ಳಾಳಿ ಮತ್ತು ಗ್ರಾಹಕರ ಕೊಂಡಿಯನ್ನಾಗಿ ಅದನ್ನು ಮಾಡಿದ್ದೇವೆ. APMC market ಎಂದರೆ ಅದನ್ನೇ ನಾವು ಮಾಡಿರುವುದು. ರೈತ ಮತ್ತು ಗ್ರಾಹಕರಿಗೆ ಅಂದರೆ ರೈತನಿಗೂ ಲಾಭವಾಗಬೇಕು, ಗ್ರಾಹಕನಿಗೂ ಅನುಕೂಲವಾಗಬೇಕೆಂದು ಗ್ರಾಹಕ ಸ್ನೇಹಿಯಾಗಿಯೂ ನಾವು ರೂಪಿಸಲಿಲ್ಲ, ರೈತ ಸ್ನೇಹಿಯಾಗಿಯೂ ರೂಪಿಸಲಿಲ್ಲ. ಹಾಗಾಗಿ, ಈ ನಿಟ್ಟಿನಲ್ಲಿ ಯೋಚಿಸಬೇಕಾದ ಅವಶ್ಯಕತೆ ಇದೆ. ಇನ್ನು ನಾವು ವಿಷಯುಕ್ತ ಬೆಳೆಯನ್ನೂ ಕೊಡಬೇಕಾದ ಅವಶ್ಯಕತೆ ಇದೆ. ಇವತ್ತು ನಮ್ಮ ಕೃಷಿ ವಿಶ್ವವಿದ್ಯಾನಿಲಯದ ಚಿಂತನೆ ವಿಷಯುಕ್ತ ಬೆಳೆಯನ್ನು ಬೆಳೆಯುವುದರ ಬಗ್ಗೆಯೂ ಕೂಡ ರೈತರಿಗೆ ತಿಳಿವಳಿಕೆ ಕೊಡುವ ಅವಶ್ಯಕತೆ ಇದೆ. ಇವತ್ತು ರೈತ ಸಾವಯವ ಕೃಷಿಯಲ್ಲಿದ್ದೂ ಅವನು zero expenditure ನಲ್ಲಿ ತನ್ನ ಬೀಜ, ತನ್ನ ಗೊಬ್ಬರದಲ್ಲಿ zero expenditure ನಲ್ಲಿ ಬೆಳೆ ಬೆಳೆಯುತ್ತಿದ್ದುದ್ದನ್ನು ಪರಾವಲಂಬಿಯಾಗಿ ಮಾಡಿದ್ದು ಇದೇ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ಸಲಹೆ ಕೇಳಿಯೇ ರೈತ ಪರಾವಲಂಬಿಯಾದ. ಇವತ್ತು ರೈತ ಬೀಜ ಕೊಂಡುಕೊಳ್ಳಬೇಕು ಆದರೆ ದುಬಾರಿ ಬೆಲೆ, ಅದೂ ಕೂಡ ಆ

ಬೀಜ ಹುಟ್ಟುತ್ತದೆ ಎಂಬ ನಂಬಿಕೆ ಇಲ್ಲ. ಹುಟ್ಟಿದರೂ ಕೂಡ crop ಬರುತ್ತದೆ ಎನ್ನುವ guarantee ಇಲ್ಲ. ಅವರನ್ನು ನಿಯಂತ್ರಣ ಮಾಡುವುದಕ್ಕೆ ಇವತ್ತು ಏನು ದಾರಿ ಇದೆ ? ಹಾಸನ ಭಾಗದಲ್ಲಿ ಆಲೂಗಡ್ಡೆ ಬೀಜ ಬಿತ್ತನೆ ಮಾಡಿದ್ದಾರೆ, ಗೆಡ್ಡೆಯೇ ಒಡೆದಿಲ್ಲ, ಬರೀ ಹಸಿರು ಮಾತ್ರ ಇದೆ. ಗಿಡ ಬೆಳೆದಿದೆ, ಅದರ ಕೆಳಗಡೆ ಗೆಡ್ಡೆ ಕಟ್ಟುತ್ತಾ ಇಲ್ಲ. ಅದರಲ್ಲಿ ಬೀಜದ್ದೇ ದೋಷ. ಹೀಗೆ ದೋಷಪೂರಿತವಾಗಿರತಕ್ಕಂಥ ಬೀಜವನ್ನು ಸರಬರಾಜು ಮಾಡುವವರ ಮೇಲೆ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿದ್ದೇವೆ ? ಲಕ್ಷಾಂತರ ಜನರ ಬದುಕಿನ ಜೊತೆಗೆ ಅವರು ಆಟವಾಡುತ್ತಿದ್ದಾರೆ. ಅಂಥ ಎಷ್ಟು ಜನರ ಮೇಲೆ ನಾವು ಕ್ರಮ ಕೈಗೊಂಡಿದ್ದೇವೆ ? ಅವರಲ್ಲಿ ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೇವೆ ? ಬೀಜ ಉತ್ಪಾದಕ ಕಂಪನಿಯ ಮೋಸದಿಂದ ಆಗಿರುವಂಥ ನಷ್ಟಕ್ಕೆ ಎಷ್ಟು ಜನ ರೈತರಿಗೆ ಪರಿಹಾರವನ್ನು ಒದಗಿಸಿಕೊಟ್ಟಿದ್ದೇವೆ ? ಈ ರೀತಿ ದುರ್ಬಲವಾಗಿರುವಂಥ ಕಾನೂನುಗಳಿವೆ. ಆ ಕಾನೂನನ್ನು ರೈತನ ಪರವಾಗಿ, ರೈತರ ಹಿತರಕ್ಷಣೆ ಮಾಡುವ ಸಲುವಾಗಿ ಬದಲಾಯಿಸಬೇಕಾದಂಥ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ವಿಷಮುಕ್ತ ಆಹಾರವನ್ನು ಬೆಳೆಯುವುದಕ್ಕೆ, ವಿಷಮುಕ್ತ ಆಹಾರದಿಂದ ಅನುಭವಿಸುತ್ತಿರತಕ್ಕಂಥ ಎಲ್ಲರಿಗೂ ಆಗುತ್ತಿರುವಂಥ side effects ಏನಿದೆ, ಅದನ್ನು control ಮಾಡುವುದಕ್ಕೆ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ವಿಜ್ಞಾನಿಗಳು ಪರಿಸರ ಸ್ನೇಹಿಯಾಗಿ, ರೈತ ಸ್ನೇಹಿಯಾಗಿ ಸಂಶೋಧನೆ ಮಾಡಿ ಆ ಸಂಶೋಧನೆ ಜನರಿಗೆ ಸುಲಭದಲ್ಲಿ ನಿಲುಕುವಂತಾಗಬೇಕು. ಮತ್ತು ಆ ಸಂಶೋಧನೆಗಳು ಇನ್ನಾವುದೋ ಒಂದು ಕಂಪನಿಯ product ಗಳನ್ನು sale ಮಾಡುವುದಕ್ಕೆ ಅನುಕೂಲವಾಗುವಂಥದ್ದು ಆಗಬಾರದು. ಆ ನಿಟ್ಟಿನಲ್ಲಿ ಯೋಚಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು, : ಬೇಡಿಕೆ ಮೇಲಿನ ಚರ್ಚೆ ನಾಳೆ ಮುಂದುವರಿಯುತ್ತದೆ. ಈಗ ಗಮನ ಸೆಳೆಯುವ ಸೂಚನೆಗಳು.

7. ಗಮನ ಸೆಳೆಯುವ ಸೂಚನೆಗಳು

1. ವಿಷಯ : ಕೊಡಗು ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ಭಾರತೀಯ ಶಸ್ತ್ರಾಸ್ತ್ರ ಕಾಯ್ದೆಯಡಿ ಕೋವಿ ತೆಗೆದುಕೊಳ್ಳಲು ವಿನಾಯಿತಿ ಪತ್ರವನ್ನು ನೀಡದಿರುವ ಬಗ್ಗೆ.